ಮಹಾಯೋಗಿ ವೇಮನ ಪೀಠ ಗ್ರಂಥ ಮಾಲೆ

# ಮಹಾಯೋಗಿ ವೇಮನ ಮತ್ತು ಸರ್ವಜ್ಞ


ಲೇಖಕರು

**ಡಾ. ಆರ್. ಬಿ. ಚಿಲಮಿ**

ಸಾಹಿತಿಗಳು, ಧಾರವಾಡ



೨೦೧೮

ಪ್ರಕಾಶಕರು

**ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ**

ಧಾರವಾಡ

೧

# ವಿಷಯ ಪ್ರವೇಶ

ಆಂಧ್ರದ ಮಹಾಯೋಗಿ ವೇಮನ ಮತ್ತು ಕರ್ನಾಟಕದ ಸರ್ವಜ್ಞ ಇವರಿಬ್ಬರೂ ಸಮಕಾಲೀನ ಹಾಗೂ ಸಮಾನ ಮನಸ್ಕರು. ಇಬ್ಬರೂ ಹದಿನೈದನೆಯ ಶತಮಾನದ ಕಾಲಘಟ್ಟದಲ್ಲಿ ಬಾಳಿದ ಶಿವಯೋಗಿಗಳು, ಶಿವಜ್ಞಾನಿಗಳು, ಶಿವನ ಅವತಾರಿಗಳು. ಈರ್ವರೂ ದಿಗಂಬರರಾಗಿಯೇ ಲೋಕ ಸಂಚಾರಗೈದು ಲೋಗರಿಗೆ ಪರಮಾನುಭವ ಬೋಧೆ ಮಾಡಿದವರು. ಇವರೀರ್ವರ ಜೀವನ ಚರಿತ್ರೆ ಅಗಾಧ ವಿಸ್ಮಯವನ್ನುಂಟು ಮಾಡುವಂಥದ್ದು! ಮಾತು ಮನಂಗಳಿಂದತ್ತತ್ತ ಮೀರಿದ ತ್ಯಾಗಿಗಳು, ವೀರ ವಿರಾಗಿಗಳು, ಮಹಾಯೋಗಿಗಳು, ವೇಮನ ರಾಜವಂಶಸ್ಥನಾದರೆ, ಸರ್ವಜ್ಞ, ಸಾಮನ್ಯ ಕುಟುಂಬದಿಂದ ಉದಯಿಸಿದ ರವಿತೇಜ! ಭಾರತೀಯ ಅಧ್ಯಾತ್ಮ ಪರಂಪರೆಯಲ್ಲಿ ಮಿಂದೆದ್ದು ಬಂದ ಪ್ರವೀಣರು. ಲೋಕದ ಮನುಜರ ಜಂಜಾಟ, ತೊಳಲಾಟಗಳನ್ನು ಕಂಡು ಸನ್ಮಾರ್ಗವನ್ನು ತೋರಲು ಬಂದ ಮಹಿಮಾಪುರುಷರು, ಋಷಿ– ಮುನಿಗಳ ಪರಂಪರೆಯನ್ನೂ ಅನುಭವಿಸಿ, ಅವರಂತೆ ನಡೆದು, ನುಡಿದು ತೋರಿಸಿದ ಆಚಾರ್ಯ ಪುರುಷರು. ಇಬ್ಬರೂ ಹೇಳುವ ತತ್ತ್ವಬೋಧೆ, ತತ್ತ್ವಾದರ್ಶಗಳು ಇಂದಿಗೂ – ಎಂದೆಂದಿಗೂ ದಾರಿದೀಪವಾಗುವಂತಿವೆ. ಇವರು ಭಾರತ ದೇಶಕ್ಕಷ್ಟೇ ಸೀಮಾಪುರುಷರಲ್ಲ: ವಿಶ್ವಕ್ಕೇ ವಿಭೂತಿ ಪುರುಷರು, ಪೂಜ್ಯನೀಯರು ಎಂದೆನಿಸಿಕೊಂಡು ಅಮರರಾದವರು. ಅವರಿಂದಿಲ್ಲವಾದರೂ ಅವರು ಸಾರಿದ ತತ್ತ್ವ ಸಿದ್ಧಾಂತಗಳು ಶಾಶ್ವತ ನಿಧಿ!! ಭಾರತೀಯ ಸಾಹಿತ್ಯದಲ್ಲಿ ಓದು–ಬರಹ ಕಲಿಯದಿದ್ದರೂ, ಮಠಕ್ಕೆ ಮಣ್ಣು ಹೊರದಿದ್ದರೂ, ತಮ್ಮ ಅನುಭವವೆಂಬ ಶಾಲೆಯಲ್ಲಿ ಆಳವಾಗಿ ಅಧ್ಯಯನ ಮಾಡಿ, ಅನುಭವಾಮೃತವನ್ನುಂಡು, ಜನತಾ ಜನಾರ್ಧನನೆಂಬ ತತ್ತ್ವವನ್ನು ಹೃನ್ಮನಃಪೂರ್ವಕವಾಗಿ ಪರಿಪಾಲನೆ ಮಾಡಿ, ಜನರಿಗೂ ಅದರ ಸವಿಯೂಟವನ್ನು ಸವಿಯಲು ಸಂತೋಷದಿಂದ ನೀಡಿದ ಮಹಾತ್ಮರಲ್ಲಿ ಪ್ರಮುಖವಾಗಿ ಬುದ್ಧ, ಮಹಾವೀರ, ಬಸವಣ್ಣ, ಕಬೀರದಾಸ, ನಾಮದೇವ ತುಕಾರಮ, ಜ್ಞಾನದೇವ ತುಕಾರಾಮ, ಏಕನಾಥ, ಚೈತನ್ಯ, ಗುರು ನಾನಕ, ತಿರುವಳ್ಳುವರ್, ವಾಲ್ಮೀಕಿ ಮಹರ್ಷಿ, ವ್ಯಾಸ ಮಹರ್ಷಿ, ಬಸವಾದಿ ಶಿವಶರಣರು, ದಾಸಶ್ರೇಷ್ಠರು, ಹರಿಹರ,

ನಿಜಗುಣ–ಸರ್ಪಭೂಷಣ ಶಿವಯೋಗಿ – ಈ ಮುಂತಾದವರ ಸಾಲಿನಲ್ಲಿ ಕಂಗೊಳಿಸುವಂತಹ ಅನರ್ಘ್ಯ ರತ್ನದ್ವಯರೆಂದರೆ ತೆಲುಗಿನ ವೇಮನ ಮತ್ತು ಕನ್ನಡದ ಸರ್ವಜ್ಞ ಪ್ರಮುಖರಾಗಿ ಕಾಣುತ್ತಾರೆ! ಅವರವರ ದೈವ ಸಾಕ್ಷಾತ್ಕಾರ, ತತ್ತ್ವಾದರ್ಶಗಳನ್ನು, ತತ್ತ್ವ–ಸತ್ವಗಳನ್ನು ತಮ್ಮದೇಯಾದ ಭಾಷೆ, ಸಾಹಿತ್ಯ ರೂಪವನ್ನು ಆಯ್ದುಕೊಂಡು ತಮ್ಮದೇ ಆದ ಶೈಲಿಯಲ್ಲಿಯೇ ಅನುಭಾವಗಳನ್ನು ಹಂಚಿಕೊಂಡದ್ದುಂಟು! ಇವರೆಲ್ಲರೂ ಅಧ್ಯಾತ್ಮದ ಅರಮನೆಯನ್ನು ಪ್ರವೇಶಿಸಿ ಅಧ್ಯಾತ್ಮದ ತುತ್ತ ತುದಿಗೇರಿದವರು. ಇವರೆಲ್ಲರೂ ಅವರರಿತುಕೊಂಡ ತತ್ತ್ವ–ಸತ್ವಗಳ ರೂಪದಲ್ಲಿ; ಇವರೆಲ್ಲರ ಗುರಿಯೂ ದಲಿತೋದ್ಧಾರ, ಜನತೋದ್ಧಾರ. ಅಥವಾ ಲೋಕ ಕಲ್ಯಾಣಗೈಯ್ಯುವುದೇ ಅವರ ಧ್ಯೇಯವಾಗಿತ್ತು. ಅವರವರ ಕಾಲದಲ್ಲಿಯೂ ಇಂದಿಗಿಂತಲೂ ಧರ್ಮ, ಸಮಾಜ, ನಾಡು, ದೇಶ, ವಿಶ್ವ, ಹಲವಾರು ಕಾರಣಗಳಿಂದ ಕಲುಷಿತಗೊಂಡಿತ್ತು. ಹದಗೆಟ್ಟಿತ್ತು. ಜನರಲ್ಲಿ ಮೂಢನಂಬಿಕೆ, ರಾಜ–ರಂಕ, ಮೇಲು–ಕೀಳು, ಬಡವ–ಬಲ್ಲಿದ, ಸವರ್ಣ–ಅವರ್ಣ, ಆರ್ಯ–ದ್ರಾವಿಡ, ಉಚ್ಚ–ನೀಚ, ಕಪ್ಪು–ಬಿಳುಪು ಇವೇ ಮೊದಲಾದ ನಿಕೃಷ್ಟ, ನೀಚ, ದುರ್ಭಾವನೆಗಳು ಹೆಮ್ಮರವಾಗಿ ಬೆಳೆದಿದ್ದವು. ಶರಣರು–ದಾಸರು ಹೇಳಿರುವಂತೆ 'ಮಾನವ ಜನ್ಮ ದೊಡ್ಡದು ಇದನ್ನು ಹಾಳು ಮಾಡಿಕೊಳ್ಳಬೇಡಿರಿ' ಎಂಬಂತೆ, ಮಾನವೀಯತೆಯ ಸದ್ಭಾವನೆಯನ್ನೇ ಮರೆಮಾಚುವಂತೆ ಮಾಡಿತ್ತು. ಜನರಲ್ಲಿ ಜಾಡ್ಯತೆಯೂ ಮನೆ ಮಾಡಿತ್ತು. ಮತ್ತು ಜಾತೀಯತೆಯ ಪೆಡಂಭೂತ ಸಮಸ್ಯೆಯೂ ತಾಂಡವಾಡುತ್ತಿತ್ತು.

ಇಂತಹ ವಾತಾವರಣದಲ್ಲಿ ಬದುಕಿದ ಜನರ ಜೀವನ ಅಯೋಮಯವಾಗಿತ್ತು ಎಂಬುದನ್ನು ಕಣ್ಣಾರೆ ಕಂಡ ಮಹಾಪುರುಷರು ಈ ಭೂಮಿಗೆ ಅವತರಿಸಿದರು. ಇಂಥ ಅಸಂಗತಗಳನ್ನು ಹೃನ್ಮನದಿಂದ ದೂರಗೊಳಿಸಲು, ಕಸದ ರೂಪದಲ್ಲಿ ಯಾರಿಗೂ ನೋವಾಗದಂತೆ ತೆಗೆದು, ಹೊರ ಹಾಕಲು ಯತ್ನಿಸಿ, ಸಾಕಷ್ಟು ಸಾಫಲ್ಯವನ್ನು ಪಡೆಯುವಂತೆ ಮಾಡಿದವರು. ಇವರೆಲ್ಲರೂ ಜನದ ಮನದ ಮೈಲಿಗೆಯನ್ನು ಹಸನುಗೊಳಿಸಿ, ನಿರಾಳವಾಗಿ ಶುದ್ಧ ಜೀವನವನ್ನು ಬದುಕಲು ಸನ್ಮಾರ್ಗವನ್ನು ತೋರಿಸದವರು. ಇಂತಹ ಪುಣ್ಯ ಪುರುಷರನ್ನು ಕಂಡ ನಮ್ಮ ನಾಡು, ದೇಶ, ವಿಶ್ವವೇ ಧನ್ಯ! ಹಲವು ಮಾತೇನು ಮನುಕುಲದ ಕಲ್ಯಾಣವೇ ಇವರ ಸದಾಶಯ ಮತ್ತು ಗುರಿಯಾಗಿತ್ತು. ಈ ಭೂಮಿಯ ಮೇಲಿರುವಂತಹ ಪ್ರತಿ ಜೀವಿಯು ಸುಖದಿಂದ ಬಾಳಿ ಬದುಕಬೇಕು ಎಂದು ಆಶಿಸಿ ಸಕಲರಿಗೂ ಲೇಸನ್ನೇ ಬಯಸಿದವರು. ಹಾಗೆಯೇ ಸುಖವನ್ನು ಬಯಸಲು ದುಡಿಮೆ(ಕಾಯಕ) ಬೇಕು; ದುಡಿತಕೆ ತಕ್ಕಂತೆ ಪ್ರತಿಫಲವು ಬೇಕು. ಪ್ರತಿಯೊಬ್ಬರೂ ದುಡಿದುಣ್ಣಬೇಕು. ಸರ್ವರೂ ಸರಿಸಮಾನತೆಯಿಂದ ಬಾಳಬೇಕು. ದುಡಿದುದರಲ್ಲಿಯೇ ಉಳಿದರೆ



ದೀನ–ದಲಿತರಿಗೆ, ಬಡ–ಬಗ್ಗರಿಗೆ, ಅನಾಥರಿಗೆ, ದರಿದ್ರರಿಗೆ, ಉಳಿದುದರಲ್ಲಿಯೇ ದಾಸೋಹ ಮಾಡಬೇಕು. ದುಡಿಯಿರಿ,–ಗಳಿಸರಿ–ಬಳಿಸಿರಿ–ಉಳಿಸಿರಿ, ದಾಸೋಹ–ಸಿರಿಗೈರಿ ಎಂಬುದೇ ಈ ಎಲ್ಲ ಮಹಾಪುರುಷರ ಭೋಧನೆಯಾಗಿತ್ತು. ಇಂತಹ ಸಿದ್ಧಾಂತದಲ್ಲಿ ಬದುಕಿದರೆ ನಮ್ಮೆಲ್ಲರ ಜೀವನ ಸುಖ–ಸಮೃದ್ಧಿಯ ಬೀಡು ಆಗುವುದರಲ್ಲಿ ಸಂದೇಹವೇ ಇಲ್ಲ.

ಯಾವುದೇ ವ್ಯಕ್ತಿ ಅಥವಾ ಮಹಾಪುರುಷ ತನ್ನಷ್ಟಕ್ಕೇ ತಾನೇ ಬೆಳೆಯಲಾರ. ಆತನ ದಿವ್ಯತೆ ಇದ್ದರೂ ಗುರುವಿನ ಅಥವಾ ಮಹಾನುಭಾವರ, ಅನುಭಾವಿಗಳ ಮಾರ್ಗದರ್ಶನ ಅಗತ್ಯವಾಗಿ ಬೇಕೆಬೇಕು. ಅಂತಹ ದಾರ್ಶನಿಕರು, ತತ್ತ್ವವೇತ್ತರು ಅನೇಕರು ಆಗಿ ಹೋಗಿದ್ದಾರೆ. ಅಂತಹದರಲ್ಲಿ ಮಹರ್ಷಿ ವಾಲ್ಮೀಕಿ, ವ್ಯಾಸ ಮಹರ್ಷಿ, ತಿರುವಳ್ಳುವರ್ ಮಹರ್ಷಿ ಪ್ರಮುಖರಾಗುತ್ತಾರೆ. ತಿರುವಳ್ಳುವರ್ ಕವಿಯ ಈ ಇಬ್ಬರೂ ಮಹರ್ಷಿಗಳವರ ಸಮಕಾಲೀನರು. ಈತ ತಮಿಳಿನ ವೇದವೆಂದೇ ಕರೆಯಿಸಿಕೊಂಡ "ತಿರುಕ್ಕುರುಳ್" ಎಂಬುದು ನೀತಿ ಕಾವ್ಯ. ಇದು ದ್ವಿಪಾದದಲ್ಲಿ ಅಂದರೆ ಕನ್ನಡದ ಏಳೆ ಛಂದಸ್ಸಿನಲ್ಲಿರುವ ೧೩೩೦ ಕುರುಳ್(ದ್ವಿಪಾದ)ಗಳುಳ್ಳ ಕಾವ್ಯ. ತಿರು ಎನ್ನುವುದು ಶ್ರೀ ಶಬ್ದದ ಸಮಾನಾರ್ಥವನ್ನು ಕೊಡುವ ಗೌರವ ಸೂಚಕ ಪದ. "ಕುರಳ್‌ವೆಣ್ಬಾ" ಎಂಬ ದ್ವಿಪದಿಗಳನ್ನೊಳಗೊಂಡ ಛಂದಸ್ಸಿನಿಂದ ರಚಿತವಾದದ್ದರಿಂದ ಈ ಕೃತಿಯು 'ತಿರುಕ್ಕುರಳ್' ಎಂಬ ಹೆಸರನ್ನು ಪಡೆದಿದೆ. ಇದರ ಕರ್ತವು ತಿರುವಳ್ಳುವರ್. ಅವರನ್ನು ತಮಿಳಿನ ಆದಿಕವಿ, ದೇವಕವಿ, ಮಹಾವಾಗ್ಮಿ ಮತ್ತು ತ್ರಿವರ್ಗ ಪ್ರವರ್ತಕ ಎಂಬ ಬಿರುದುಗಳಿಂದ ವಿದ್ವಾಂಸರು ಸ್ತುತಿಸಿದ್ದಾರೆ. ಈ ಕೃತಿಯು ತಮಿಳು ಸಾಹಿತ್ಯದಲ್ಲಿಯೇ ಪ್ರಸಿದ್ಧಿ ಹೊಂದಿದ ಕಾವ್ಯ ಇದು ವಿಶ್ವದ ಎಲ್ಲಾ ಭಾಷೆಗಳಲ್ಲಿಯೂ ಅನುವಾದಗೊಂಡಿದೆ ಎಂದ ಮೇಲೆ ಅದರ ಅಗ್ಗಳಿಕೆ ಹಾಗೂ ಹೆಗ್ಗಳಿಕೆ ಎಷ್ಟಿದೆಯೆಂಬುದು ಅರ್ಥವಾಗುತ್ತದೆ.

ತಿರುಕ್ಕುರುಳ್ ಇದು ವಿಶ್ವದ ಯಾವುದೇ ಒಂದು ವಿಶಿಷ್ಟ ಜಾತಿ, ಮತ, ಪಂಥಗಳ ಸಂಪ್ರದಾಯಗಳಿಗೂ ಕಟ್ಟು ಬೀಳದೆ ಮಾನವ ಸಮಷ್ಟಿ ಜೀವನವನ್ನೇ ಉದಾತ್ತ ಧ್ಯೇಯವಾಗಿರಿಸಿಕೊಂಡು ವಿಶ್ವಮಾನವರೆಲ್ಲರಿಗೂ ಸರ್ವ ಸಮನ್ವಯವಾದ ತತ್ತ್ವವನ್ನು ಬೋಧಿಸುವ ಒಂದು ವಿಚಾರ ಪೂರ್ಣ ತಮಿಳಿನ ವೇದಪೂರ್ಣ ಕೃತಿ. ತಿರುವಳ್ಳುವರ್ ಕವಿಯು ಸಂಸಾರಸ್ಥ, ಆತ ಉಪಜೀವನಕ್ಕೆಂದು ನೇಕಾರಿಕೆ ವೃತ್ತಿಯನ್ನು ಕೈಕೊಂಡಿದ್ದನೆಂಬುದು ತಿಳಿದು ಬರುತ್ತದೆ. ಜೇಡರ ದಾಸಿಮಯ್ಯ ಹಾಗೂ ದುಗ್ಗಳೆಯರಂತೆ, ಅಮುಗಿ ದೇವಯ್ಯ–ರಾಯಮ್ಮ ದಂಪತಿಗಳಂತೆ ಬಾಳಿದ ಮಹಾಜ್ಞಾನಿ, ದಾರ್ಶನಿಕ ಮಹಾಪುರುಷ. ಮಾನವೀಯತೆಯೇ ತಿರುವಳ್ಳುವರವರ ಮೂಲಭೂತ ಸಿದ್ಧಾಂತವಾದುದರಿಂದ ಇವರ ಈ ಕೃತಿ ಆಸ್ತಿಕ–ನಾಸ್ತಿಕ

ಬಾಂಧವರೆಲ್ಲರ ಹೃದಯವನ್ನು ಸೂರೆಗೊಂಡು ವಿಶ್ವಮಾನ್ಯ ಕೃತಿಯಾಗಿದೆ. ಇದರಲ್ಲಿ ಧರ್ಮಭಾಗ, ಅರ್ಥಭಾಗ, ಕಾಮಭಾಗಗಳಿವೆ. ಈ ಮೂರನ್ನು ಯಾವಾತನು ಸಮರ್ಪಕವಾಗಿ, ಸರಿಯಾಗಿ ಚ್ಯುತಿ ಬಾರದಂತೆ ಬಳಸಿಕೊಂಡು ಬಾಳು ಸಾಗಿಸುತ್ತಾನೆಯೋ ಅಂಥವನಿಗೆ ಮೋಕ್ಷ ಲಭಿಸುತ್ತದೆಯೆಂದುದಾಗಿ ಖಚಿತತೆಯನ್ನು ತಿಳಿಯಪಡಿಸುವ ಶ್ರೇಷ್ಠ ಗ್ರಂಥವಿದಾಗಿದೆ. ಇಂಥ ನೀತಿಯ ಉದಾತ್ತ ಕೃತಿಗಳು ಮುಂದೆ ಬಂದ ತೆಲುಗು ಕವಿ ವೇಮನ ಹಾಗು ಕನ್ನಡದ ಸರ್ವಜ್ಞರ ಮೇಲೆ ಪ್ರಭಾವ ಬೀರಿರಲೂ ಬೇಕು.

**ಮಹಾಯೋಗಿ ವೇಮನ:**

ತೆಲುಗು ಸಾಹಿತ್ಯದ ಆಶುಕವಿ ಮಹಾಯೋಗಿ ವೇಮನ–ಪ್ರಖ್ಯಾತ ಚಿಂತಕ, ದಾರ್ಶನಿಕ, ಯೋಗಿಗಳ ಮಹಾಯೋಗಿ. ಈತ ರೆಡ್ಡಿರಾಜವಂಶದ ಮನೆತನದವನು. ಕ್ರಿ.ಶ. ೧೪೧೨ ರಿಂದ ೧೪೮೦ ರವರೆಗೆ ಬಾಳಿದ ದಾರ್ಶನಿಕ. ರೆಡ್ಡಿ ರಾಜಮನೆತನದ ಕೊನೆಯ ಕೊಂಡಿಯಾದ ಕುಮಾರಗಿರಿರೆಡ್ಡಿ– ಮಲ್ಲಾಂಬೆ ದಂಪತಿಗಳ ಮೆಚ್ಚಿನ ಮಗನು. ನೋಡಲು ಸ್ಫುರದ್ರೂಪಿ. ಈತನ ಅಣ್ಣ ಭರಮರಡ್ಡಿಯೆಂಬುವವನು. ಭರಮರಡ್ಡಿಯ ಪತ್ನಿಯೇ ರಾಮಾಪುರದ ನಾಗರೆಡ್ಡಿ–ಗೌರಮ್ಮ ದಂಪತಿಗಳ ಮಗಳು ಹೇಮರಡ್ಡಿ ಮಲ್ಲಮ್ಮ. ಈಕೆ ವೇಮನನ ಅತ್ತಿಗೆ, ಮಲ್ಲಮ್ಮನನ್ನು ತಾಯಿಯಂತೆಯೇ ಕಂಡವನು. ಆಂಧ್ರದಲ್ಲಿ ವೇಮನನ ವಂಶಸ್ಥರೇ ಬಹು ಪ್ರಖ್ಯಾತರು. ವೇಮನ ನಿಂದಲೇ ಈ ವಂಶವು ಪ್ರಸಿದ್ಧಿಗೆ ಬಂದುದು. ವೇಮ + ಅನ (ಅಣ್ಣ) ವೇಮಣ್ಣ ಎಂದುದಾಗಿ ಡಾ. ಫ. ಗು. ಹಳಕಟ್ಟಿಯವರು ಕರೆದುದುಂಟು. ವೇಮ ಎಂದರೆ ಹೇಮ, ಹೇಮ ಅಂದರೆ ಬಂಗಾರ. ಬಂಗಾರದಂತಹ ಮನೆತನವೇ ವೇಮನರ ಮನೆತನವಾಗಿತ್ತು ಎಂಬುದರಲ್ಲಿ ಸಂಶಯವೇ ಇಲ್ಲ. ಈ ರಾಜ ಮನೆತನದವರು ೧೦೦ ವರ್ಷ ಆಳ್ವಿಕೆ ಮಾಡಿದ್ದುಂಟು. ಕೊನೆಯ ಆಳ್ವಿಕೆ ಮಾಡಿದವರೇ ವೇಮನನ ತಂದೆಯಾದ ಕುಮಾರಗಿರಿರೆಡ್ಡಿ.

ವೇಮನ ರಾಜ ಪುತ್ರ, ತೇಜ ಪುತ್ರನಾಗಿದ್ದನೆಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಆಂಧ್ರದ ಕೊಂಡವೀಡು ಮತ್ತು ಸಿದ್ದಾಪುರದಲ್ಲಿದ್ದವರು. ವೇಮನನು ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದವನು. ರಾಜವೈಭವದಲ್ಲಿದ್ದವನಾದುದರಿಂದ ವೇಮನನು ಚಿತ್ತರಂಜನಿಯೆಂಬ ದೇವದಾಸಿಯ ಬೆನ್ನು ಹತ್ತಿದುದನ್ನು ಕಂಡ ಅತ್ತಿಗೆಯು ಈತನ ಮನಃಪರಿವರ್ತನೆ ಮಾಡಿದ ಪುಣ್ಯವಂತೆ. ಅತ್ತಿಗೆಯ ಮಾತನ್ನು ಶಿರಸಾವಹಿಸಿ ಪಾಲಿಸಿದ ಪರಿಣಾಮದಿಂದ ಆ ದೇವದಾಸಿಯಿಂದ ಬಿಡುಗಡೆಗೊಂಡು ದಿಗಂಬರ ದೀಕ್ಷೆ ಪಡೆದು ಸಕಲ ವೈಭವ ಸಾಮ್ರಾಜ್ಯವನ್ನು ತೊರೆದು ಬಂದು ಕೊಂಡವೀಡು, ತಂಜಾವೂರು, ಗಂಡಿಕೋಟ, ಮಿನಿಕೊಂಡ, ಕರ್ನೂಲ, ಬಳ್ಳಾರಿ,



ಪಾಮೂರ, ಚಿಟ್ಟೇಲ, ಚಂದನೂಲ, ನೆಲ್ಲಚೆರುವು, ಕಟಾರ್ಲುಪಲ್ಲೆ, ರಾಜಮಹೇಂದ್ರ. ಗಂಟುಪಲ್ಲಿ, ಮೂಗುಚಿಂತಪಲ್ಲೆ, ಈ ಮೊದಲಾದ ಊರುಗಳಲ್ಲಿ ಸಂಚಾರ ಮಾಡುತ್ತ ಸತ್ಸಂಗಗಳನ್ನು ನೇರವೇರಿಸುತ್ತ ಬಂದನು. ವೇಮನನಿಗೆ ಅನುಯಾಯಿಗಳೂ, ಆತ್ಮೀಯ ಶಿಷ್ಯರಾಗಿ ರಾಮ ರೆಡ್ಡಿ ಮತ್ತು ನೀಲಕಂಠ ಎಂಬುವವರಿದ್ದರು. ಇವರು ವಾಸಿಸುವ ಸ್ಥಳಗಳೆಂದರೆ ಗುಹೆ–ಗಂಹ್ವರ, ಗವಿ ಧರ್ಮಶಾಲೆ, ಧರ್ಮ ಛತ್ರ, ಪಾಳು ಬಿದ್ದ ದೇವಾಲಯ, ಇಲ್ಲವೇ ದೊಡ್ಡ ಅರಳಿಮರ, ಬೇವಿನ–ಆಲದ–ಹುಣಸೆ ಮರಗಳ ನೆರಳಿನಲ್ಲಿ ಆಶ್ರಯ ಮಾಡುತ್ತಿದ್ದರು. ಅವರಿರುವ ಯಾವುದೇ ಸ್ಥಳಗಳಲ್ಲಿ ಗುಡಿ–ಗುಂಡಾರ, ಮಠ–ಮಂದಿರಗಳನ್ನು ನಿರ್ಮಿಸಲಿಲ್ಲ. ಪಾಮೂರು ಮತ್ತು ಕಟಾರ್ಲುಪಲ್ಲೆಯಲ್ಲಿರುವ ಗುಹೆ–ಗವಿಗಳಲ್ಲಿ ಯೋಗ ತರಬೇತಿ ಕೊಡುವ ಕೇಂದ್ರ ಶಾಲೆಗಳನ್ನಾಗಿಸಿದ್ದರಂತೆ. ಈ ಮೇಲ್ಕಾಣಿಸಿದ ಗ್ರಾಮಗಳಲ್ಲಿ ವೇಮನರ ಪ್ರವಚನ, ಸತ್ಸಂಗ ಕೇಳಲು ಜನರು ಸೇರುತ್ತಿದ್ದರು. ಅವರಿಗೆ ಸತ್ಸಂಗ, ಧ್ಯಾನ, ತಪಸ್ಸು, ಯೋಗ, ಧರ್ಮ, ಬದುಕುವ ರೀತಿ–ನೀತಿ, ತತ್ತ್ವ–ಸಿದ್ಧಾಂತ – ಈ ಮುಂತಾಗಿ ಮನುಕುಲದುದ್ಧಾರದ ಕಾರ್ಯಾಗಾರ ಮತ್ತು ಯೋಗ ತರಬೇತುಗಳನ್ನು ಕೊಟ್ಟು ಪ್ರಸಾರ–ಪ್ರಚಾರ ಮಡುತ್ತ ಬಂದರು.

ಈತನಿಗೆ ಸೋಮಶೇಖರರೆಂಬ ಗುರುವಿನಿಂದ ಪ್ರಾಥಮಿಕ ಶಿಕ್ಷಣವನ್ನು ಅರಮನೆಯಲ್ಲಿಯೇ ಕೊಟ್ಟದ್ದುಂಟು. ಆದರೆ ಯೋಗದ ಅಭ್ಯಾಸ ದೊರೆತದ್ದು ಕಟಾರ್ಲುಪಲ್ಲೆ, ಪಾಮೂರು–ಮೂಗಚಿಂತಪಲ್ಲೆಯಂತಹ ಗವಿ–ಗುಹೆಗಳಲ್ಲಿ. ಆದರೆ ಯೋಗಗುರುವಿನ ಹೆಸರು ತಿಳಿಯದು. ವೇಮನನಿಗೆ ಬಾಲ್ಯ ಸ್ನೇಹಿತ ಅಕ್ಕಸಾಲಿಗರವನಾದ ಅಭಿರಾಮನೆಂಬುವವನ ಸಲಹೆ–ಸೂಚನೆಯೇ ಮಿಗಿಲಾದುದು ಎಂಬುದು ತಿಳಿದು ಬರುತ್ತದೆ. ಅದೇ ರೀತಿಯಾಗಿ ಯೋಗಗುರುವಿನ ದರ್ಶನಾಶೀರ್ವಾದ, ರಾಮರೆಡ್ಡಿ–ನೀಲಕಂಠ ಶಿಷ್ಯರ ಸೇವಾನಿಷ್ಠೆಗಳಿಂದ ವೇಮನನು ಮಹಾಯೋಗಿಯಾದ, ಮೇಲಾದ ಆಶುಕವಿಯೂ ಆದ. ವೇಮನನು ಸುಮಾರು ಹದಿನೈದು ಸಾವಿರ ಪದಗಳನ್ನು ರಚಿಸಿರುವನೆಂಬ ಹೇಳಿಕೆಯಿದೆ. ಹಲವು ಸಾವಿರ ಪದ್ಯಗಳನ್ನು ಬರೆದಿರುವನೆಂಬ ಹೇಳಿಕೆಯುಂಟು! ಆತ ಬಳಸಿದ ಛಂದೋ ಪ್ರಕಾರಗಳೆಂದರೆ ಅಟಲವೇದಿ, ಕಂದ, ಸೀಸ, ತೇಟಗಳಲ್ಲಿ ಪದಗಳನ್ನು ರಚಿಸಿದ್ದುಂಟು. ಇವೆಲ್ಲವೂ **'ವಿಶ್ವದಾಭಿರಾಮ ಕೇಳು ವೇಮ'** – ಎಂಬ ವಚನಾಂಕಿತದೊಂದಿಗೆ ಮುಕ್ತಾಯಗೊಳ್ಳುತ್ತವೆ. ಕಂದ ಪದ್ಯ ನಾಲ್ಕು ಸಾಲಿನವು. ತೇಟ ಪದ್ಯವೂ ನಾಲ್ಕು ಸಾಲಿನವು. ಅಟಲವೇದಿಯೂ ಅಂಕಿತದೊಂದಿಗಿರುವ ಚೌಪದಗಳು, ಇನ್ನೂ ಸೀಸ ಪದ್ಯಗಳು ೮ ಅಂದರೆ ಅಷ್ಟ ಸಾಲಿನ ಪದ್ಯಜಾತಿಗೆ ಸೇರುತ್ತವೆ. ಇವುಗಳನ್ನು ವೇಮನನು ಹೇಳುತ್ತಿದ್ದನಂತೆ ಲಿಪಿಕಾರರು ಶಿಷ್ಯರಿಬ್ಬರು ಬರೆದುಕೊಳ್ಳುತ್ತಿದ್ದರಂತೆ.

ಹಾಗೆಯೇ ಕೇಳಿದವರು ಟಿಪ್ಪಣಿಸಿಕೊಳ್ಳುತ್ತಿದ್ದರು ಎಂದು ಹೇಳಿಕೆಯಿದೆ. ಇವರ ಮುಖದಿಂದ ಬರುತ್ತಿದ್ದ ಮಾತು ಅಥವಾ ನುಡಿಗಳೇ ವೇದ ವಾಕ್ಯಗಳಂತಿದ್ದವು ಎಂಬುದಕ್ಕೆ ಅವರ ಪದಪದ್ಯಗಳನ್ನು ತಾವು ಗಮನಿಸಬಹುದಾಗಿದೆ. ರಚಿಸಿದ್ದು ಹಲವು ಸಹಸ್ರ, ಹದಿನೈದು ಸಾವಿರವಾದರೆ; ಕರ್ನಾಟಕ ವಿಶ್ವವಿದ್ಯಾಲಯದ ವೇಮನ ಪೀಠ ಮಾಜಿ ಸಂಯೋಜಕರಾದ ಶ್ರೀ. ಎಸ್. ಆರ್. ಪಾಟೀಲರು 'ವೇಮನ ವಿಶ್ವಗೀತೆ' ಎಂಬ ಬ್ರಹತ್ ಗ್ರಂಥವನ್ನು ೧೯೬೮ ರಲ್ಲಿ ಪ್ರಕಟಿಸಿದ್ದುಂಟು. ಅಂಥ ಹೆಬ್ಬೊತ್ತಿಗೆಯಲ್ಲಿ ೩೮೧೨ ಪದ್ಯಗಳು ಪ್ರಕಟಗೊಂಡಿವೆ. ಈಗ ಸದ್ಯದ ಮಟ್ಟಿಗೆ ಈ ಮೊತ್ತವೇ ವೇಮನನ ಪದಗಳು ಎಂಬುದಾಗಿ ತಿಳಿದುಕೊಳ್ಳಲು ಸಾಧ್ಯವಾಯಿತು. ಅವು ತೆಲುಗು ಪ್ರಾಂತದಲ್ಲಿ ಮನೆಮಾತಾದರೆ. ಕನ್ನಡ, ತಮಿಳು, ಇಂಗ್ಲಿಷ ಮುಂತಾದ ಭಾಷೆಗಳಲ್ಲಿ ಅನುವಾದಗೊಂಡು ಪ್ರಸಾರಗೊಳ್ಳುತ್ತಿರುವುದು ನಮ್ಮೆಲ್ಲರ ಸುದೈವವೇ ಸರಿ!!

**ಕನ್ನಡದ ಕವಿ ಸರ್ವಜ್ಞ:**

ಕವಿಯೇ ತನ್ನದೊಂದು ವಚನದಲ್ಲಿ ಹೇಳಿಕೊಂಡಿರುವಂತೆ– ಸರ್ವವನು ಬಲ್ಲ ಸರ್ವಜ್ಞನೊಬ್ಬನೇ ಆಗಿದ್ದು; ಆತ ಕನ್ನಡದ ಗಂಡುಗಲಿ. ಶಕ್ತ ಕವಿ. "ಒಬ್ಬನಲ್ಲದೆ ಮತ್ತೆ ಇಬ್ಬರುಂಟೆ ಜಗಕೆ–ಒಬ್ಬ ಸರ್ವಜ್ಞ ಕರ್ತನು ಜಗಕೆಲ್ಲ– ಒಬ್ಬನೇ ದೈವ ಸರ್ವಜ್ಞ", ಎಂದಿರುವನು. ಈ ಜಗದ ಕರ್ತೃ, ನಿಯಾಮಕನಾದಂತಹ ಭಗವಂತನೊಬ್ಬನೇ ಸರ್ವಜ್ಞನು ಮಿಕ್ಕ ಮಾನವರಾರೂ ಸರ್ವಜ್ಞರಲ್ಲ ಎಂದಿರುವನಲ್ಲದೇ; 'ಸರ್ವಜ್ಞನೆಂಬುವವನು ಗರ್ವದಿಂದಾದವನೇನು? ಸರ್ವರೊಳಗೊಂದೊಂದು ನುಡಿಗಲಿತು ವಿದ್ಯೆದಾ ಪರ್ವತವೇ ತಾ ಆದ ಸರ್ವಜ್ಞ; ಎಂದಿರುವುದರಲ್ಲಿ ವಿನಯದ ಜೊತೆಗೆ ದೃಢವಾದ ಆತ್ಮವಿಶ್ವಾಸವೂ ಇಲ್ಲಿ ವ್ಯಕ್ತವಾಗುತ್ತದೆ. ಅದು ಪೊಳ್ಳು ಮತ್ತು ಅಹಂಕಾರದ ಮಾತೂ ಅಲ್ಲ. ಇಷ್ಟೆಲ್ಲವನ್ನು ಮೂರೇ ಮೂರು ಮಾತುಗಳಲ್ಲಿ, ಸಾಲುಗಳಲ್ಲಿ ಅಡಕ ಮಾಡಿ ಮನ ಮುಟ್ಟುವಂತೆ ಹೇಳುವಂತಹ ಪ್ರತಿಭೆ ಸಾಮಾನ್ಯವಾದುದಲ್ಲ. ಸರ್ವಜ್ಞನಿಗೆ ಸರ್ವಜ್ಞನೇ ಸಾಟಿ ಎಂಬಂತೆ ತನಗೆ ತಾನೇ ಸಮರ್ಥನು ಎಂಬುದನ್ನು ನಾವೆಂದೂ ಮರೆಯುವಂತಿಲ್ಲ. 'ಆಡು ಮುಟ್ಟದ ಸೊಪ್ಪಿಲ್ಲ–ಸರ್ವಜ್ಞ, ರಚಿಸಲಾರದ ವಿಷಯವೇ ಉಳಿದಿಲ್ಲ' ಎಂಬುದಾಗಿ ಅವನ ಕುರಿತಾಗಿ ವಿದ್ವಾಂಸರು ಹೇಳಿದ ಮಾತಿದು.

ತನು ಬತ್ತಲೆಯಾಗಿಸಿಕೊಂಡು, ಹೆಗಲ ಮೇಲೆ ಕಂಬಳಿಯನ್ನು ಹೊದ್ದು, ಪಾದರಕ್ಷೆಗಳನ್ನು ಮೆಟ್ಟಿ; ಕಚ್ಚುಟ ಧರಿಸಿ, ಕೈಯಲ್ಲೊಂದು ಕೋಲು ಹಿಡಿದುಕೊಂಡು ವೀರ ವಿರಾಗಿಯಾಗಿ ಕನ್ನಡ ನಾಡೆಲ್ಲ ಸಂಚರಿಸಿ ಅಧ್ಯಾತ್ಮದ ಶುಚಿ–ರುಚಿಯನ್ನು ಉಣಬಡಿಸಿದ ಧೀಮಂತ ತತ್ತ್ವಶಾಸ್ತ್ರಜ್ಞ ಕವಿ ಸರ್ವಜ್ಞ! ಜನಪದರಾಡುವ



ನುಡಿಗಡಣಗಳಲ್ಲಿಯೇ, ಜನಪದರ ರೂಢಿಯಲ್ಲಿರುವ ತ್ರಿಪದಿ ಪದ್ಯ ಜಾತಿಯಲ್ಲಿಯೇ ತಮ್ಮ ಆಲೋಚನೆಯ ವಿಚಾರಗಳನ್ನು ಹರಿದು ಬಿಟ್ಟವರು. ಸರಿಸುಮಾರು ೧೫ನೆಯ ಶತಮಾನದ ಕಾಲಘಟ್ಟದಲ್ಲಿ ಬದುಕಿ ಬಾಳಿದ ಧೀಮಂತ ಕವಿಯೀತ. ತೆಲುಗು ಕವಿ ಮಹಾಯೋಗಿ ವೇಮನ ಮತ್ತು ಸರ್ವಜ್ಞ ಕವಿಗಳಿಬ್ಬರೂ ಸಮಕಾಲೀನರು. ಇವರಿಬ್ಬರ ಮಧ್ಯೆದಲ್ಲಿ ಹತ್ತಿಪ್ಪತ್ತು ವರ್ಷಗಳ ವ್ಯತ್ಯಾಸ ಅಥವಾ ಅಂತರವಿರಬಹುದೆಂದು ಅವರ ವಚನಗಳ, ಪದ್ಯಗಳ ಆಧಾರದಿಂದ ನಾನು ಕಂಡುಕೊಂಡ ಅಭಿಪ್ರಾಯ! ಒಬ್ಬರನ್ನೊಬ್ಬರು ಸಂದರ್ಶಿಸಿಕೊಂಡಿರಬಹುದೆಂಬುದು ನನ್ನ ಊಹೆಯಾಗಿದೆ.

ಅಂದರೆ ಇವರಿಬ್ಬರೂ ಶ್ರೇಷ್ಠ ದಾರ್ಶನಿಕರೂ, ವಿದ್ವಾಂಸರೂ, ಮಹಾನ್ ಚಿಂತಕರೂ, ಸಮಕಾಲೀನರೂ, ಸಮದರ್ಶಿಗಳೂ, ಸಮಾನ ಮನಸ್ಕ–ಚಿಂತಕರೂ, ಹಾಗೆಯೇ ಇವರು ಇಬ್ಬರ ಬದುಕಿನ ಆದರ್ಶ–ಆಶಯ, ಬದುಕಿನ ಧ್ಯೇಯ ಧೋರಣೆಗಳಲ್ಲಿ ಅಪಾರ ಹೋಲಿಕೆಗಳಿದ್ದುದು ಕಂಡು ಬರುತ್ತದೆ. ಕಾಲ ಹಾಗೂ ಸಂದರ್ಭದ ದೃಷ್ಟಿಯಿಂದ ಕೆಲವು ವೈದೃಶ್ಯಗಳಿದ್ದರೂ ಇವರೀರ್ವರೂ ಮಹಾತ್ಮರು ಜೀವ ಸಂಕುಲದ ಜ್ಯೋತಿ ಪುರುಷರು. ಅವರಿಬ್ಬರ ಬದುಕಿನಲ್ಲಿ ಕಂಡ ಕೆಲವು ಸಮಾನ ವಿಚಾರಧಾರೆಗಳನ್ನು ಕಾಣಬಹುದು ಮತ್ತು ಅವರಿಬ್ಬರ ಧ್ಯೇಯ–ಧೋರಣೆಗಳಲ್ಲಿ ಅಷ್ಟೇನೂ ಭೇದವಿಲ್ಲ. ಮಾನವ ಕಲ್ಯಾಣವೊಂದೇ ಅವರಿಬ್ಬರ ಏಕೈಕ ಗುರಿಯಾಗಿತ್ತೆಂಬುದನ್ನು ಮರೆಯುವಂತಿಲ್ಲ. ಇವರೀರ್ವರೂ ಮನುಕುಲಕ್ಕೆ ಮಾತ್ರವಲ್ಲ, ಇಡೀ ಜೀವ ಕೋಟಿಗೆ ಲೇಸಾಗಲೆಂದು ಬಯಸಿದವರು. ಸರ್ವರೂ ಕೂಡಿ ಬಾಳುವುದು. ಸಮಾನತೆ–ಸಾಮರಸ್ಯವೇ ಧರ್ಮದ ಹಾಗೂ ಬದುಕಿನ ಅಂತಿಮ ಗುರಿಯಾಗಬೇಕೆಂದವರು.

ವೇಮನರಂತೆ ಸಾಕಷ್ಟು ವಚನಗಳನ್ನು ಸರ್ವಜ್ಞನೂ ರಚಿಸಿರುವೆನೆಂದು ತಮ್ಮದೊಂದು ಪದ್ಯದಲ್ಲಿ ಹೇಳಿಕೊಂಡಿದ್ದಾನೆ.

**ಏಳು ಕೋಟಿಯ ಕೋಟಿ, ಏಳು ಲಕ್ಷವೇ ಲಕ್ಷ**
**ಏಳು ಸಾವಿರದ ಎಪ್ಪತ್ತು ವಚನಗಳ**
**ಹೇಳಿದೆನು ಕೇಳು ಸರ್ವಜ್ಞ**

ಎಂದುದಾಗಿ ಸ್ವತಃ ಕವಿಯೇ ಹೇಳಿರುವುದನ್ನು ಗಮನಿಸಿದರೆ, ಆತ ೭೦೭೦ ವಚನಗಳನ್ನು ರಚಿಸಿರುವುದು ಕಂಡು ಬಂದ ಸತ್ಯ. ಆದರೆ ಆತ ಸ್ವತಃ ಬರೆದವನಲ್ಲ. ಅವನ ಅನುಯಾಯಿಗಳು, ಶಿಷ್ಯರು ಅವರ ಬಾಯಿಂದ ಕೇಳಿ ಬರೆದಿರಬಹುದೆಂದು ತಿಳಿದುಕೊಳ್ಳಲು ಸಾಧ್ಯತೆಯಿದೆ. **'ಕನ್ನಡದ ತಿರುಕ'**ನೆಂದೇ ಕರೆಯಿಸಿಕೊಂಡ ರೆವ್ಹರೆಂಡ್

ಉತ್ತಂಗಿ ಚೆನ್ನಪ್ಪನವರು ೧೯ ನೆಯ ಶತಮಾನದಲ್ಲಿ ಧಾರವಾಡ ಜಿಲ್ಲೆಯಾದ್ಯಂತ ಸಂಚರಿಸಿ, ಜನರ ಬಾಯಿಂದ ಕೇಳಿ ತಿಳಿದುಕೊಂಡು ಕೆಲಕೆಲವು ಪದ್ಯ(ವಚನ) ಗಳನ್ನು ಸಂಪಾದಿಸಿ, ಸಂಗ್ರಹಿಸಿ, ಅವನ್ನು ಪ್ರಕಟಿಸಿದ್ದು ಐತಿಹಾಸಿಕ ದಾಖಲೆ! ಉತ್ತಂಗಿಯವರು ಎರಡು ವರ್ಷಗಳ ಕಾಲ ಸಂಚರಿಸಿದವರು. ಆಗ ದೊರಕಿದ ವಚನಗಳು ಏಳು ಸಾವಿರದ ಎಪ್ಪತ್ತರಲ್ಲಿ ಎರಡು ಸಾವಿರದಷ್ಟು ಮಾತ್ರ. ಅವು ನಮಗಿಂದು ಓದಿ–ಸವಿಯಲಿಕ್ಕೆ ಅನುಕೂಲವಾಯಿತೆಂದು ಹೇಳಬಹುದು. ತ್ರಿಪದಿಯ ಬ್ರಹ್ಮನಾದ ಸರ್ವಜ್ಞನ ಹೆಸರು ಅಚ್ಚಳಿಯದೇ ಉಳಿಯುವಂತೆ ಮಾಡಿದ ಕೀರ್ತಿ ರೆ॥ ಉತ್ತಂಗಿ ಚೆನ್ನಪ್ಪನವರಿಗೇ ಸಲ್ಲಬೇಕು. ಇವರನ್ನು ಕನ್ನಡಿಗರು ನೆನಯಲೇಬೇಕಾದುದು.

ಹೀಗೆ ಸಮಕಾಲೀನ ಮತ್ತು ಸಮಾನ ಪ್ರತಿಭೆಗಳಾದ, ವಿಶ್ವ ಜ್ಯೋತಿ ಸ್ವರೂಪರಾದ ತೆಲುಗಿನ ಮಹಾಯೋಗಿ ವೇಮನ ಮತ್ತು ಕನ್ನಡದ ಸರ್ವವನು ಬಲ್ಲ ಸರ್ವಜ್ಞ ಕವಿಗಳ ಜೀವನ ಚರಿತ್ರೆ, ಸಾಧನೆಯ ಸಾಧ್ಯತೆಗಳನ್ನು ಸಾ ಆಧಾರಗಳೊಂದಿಗೆ ಈ ಕಿರು ಪುಸ್ತಕದಲ್ಲಿ ಸಂಕ್ಷಿಪ್ತವಾಗಿಯೇ ನಿರವಿಸಲು ಪ್ರಯತ್ನಿಸಲಾಗಿದೆ. ಕೊನೆಯ ಅಧ್ಯಾಯದಲ್ಲಿ ಇವರಿಬ್ಬರ ತತ್ತ್ವಾದರ್ಶಗಳನ್ನು ತೌಲನಿಕವಾಗಿ ಹೇಳಲೂ ಪ್ರಯತ್ನಿಸಲಾಗಿದೆ. ಇದು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ; ಮಹಾಯೋಗಿ ವೇಮನ ಪೀಠ ಮತ್ತು ಸಿ.ಎಸ್. ಬೆಂಬಳಗಿ ಪದವಿ ಮಹಾವಿದ್ಯಾಲಯ ರಾಮದುರ್ಗ ಇವರ ಸಹಯೋಗದಲ್ಲಿ ರಾಮದುರ್ಗ ಮಹಾವಿದ್ಯಾಲಯದಲ್ಲಿಯೇ ಪ್ರಚಾರೋಪನ್ಯಾಸ ಮಾಲೆ–೧ ರಲ್ಲಿ **“ಮಹಾಯೊಗಿ ವೇಮನ ಮತ್ತು ಸರ್ವಜ್ಞ”** ಎಂದುದಾಗಿ ವಿಷಯ ಮಂಡಿಸಿದ. ಸಿದ್ಧಪಡಿಸಿದ ಭಾಷಣೋಪನ್ಯಾಸವೇ ಈ ಪುಸ್ತಕದ ವಸ್ತು ವಿಷಯವಾಗಿದೆ.

ದಕ್ಷಿಣ ಭಾರತದ ತೆಲುಗು–ತಮಿಳು–ಮಲೆಯಾಳಮ್,– ಕನ್ನಡ, ಮತ್ತು ತುಳು–ಇವು ಪಂಚ ದ್ರಾವಿಡ ಭಾಷೆಗಳು ಸೋದರಿಯಂತಿವೆ. ಆದರೆ ಪ್ರಾಂತೀಯ ಭಾಷೆಗಳಾಗಿ ವಿಂಗಡನೆಗೊಂಡ ಮೇಲೆ ಸ್ವತಂತ್ರ ಭಾಷೆಯಾಗಿ ಅಸ್ತಿತ್ವಕ್ಕೆ ಬಂದು, ತಮ್ಮದೇಯಾದ ಸ್ಥಾನಮಾನವನ್ನು ಹೊಂದಿದವು. ಅದರಲ್ಲೂ ತೆಲುಗು ಸಾಹಿತ್ಯ ಬಹಳ ಪ್ರಾಚೀನ ಮತ್ತು ಶ್ರೀಮಂತವಾದುದು. ತೆಲುಗಿಗೆ ಮೂರು ಸಾವಿರ ವರ್ಷಗಳಷ್ಟು ಪ್ರಾಚೀನತೆಯಿದೆಯೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಜನಪದ ಸಾಹಿತ್ಯದಲ್ಲಿ ವೈವಿಧ್ಯಮಯ ಕೃತಿಗಳು ತೆಲುಗಿನಲ್ಲಿ ರಚನಗೊಂಡಿವೆ. ನನ್ನಯ್ಯನಿಗಿಂತ ಪೂರ್ವದಲ್ಲಿಯೆ ಶಾಸನಗಳಲ್ಲಿ ಹಲವು ಛಂದಸ್ಸುಗಳು ಬಳಕೆಯಾಗಿವೆ. ಹನ್ನೊಂದನೆಯ ಶತಮಾನದಲ್ಲಿ ಬಂದ ನನ್ನಯ್ಯ ಮಹಾಕವಿಯು ಮಹಾಭಾರತವು ಮೊದಲನೆಯ ಮಹಾಕಾವ್ಯ. ಈ ಎಲ್ಲ ಮಾತುಗಳು ಕನ್ನಡ



ಭಾಷೆ, ಸಾಹಿತ್ಯ, ಜನಪದ ಸಾಹಿತ್ಯ, ಶಾಸನಗಳಿಗೂ ಅನ್ವಯವಾಗುತ್ತವೆ. ಇವೆರಡೂ, ತೆಲುಗು ಮತ್ತು ತಮಿಳು ಭಾಷೆಗಳು ಒಂದಕ್ಕೊಂದು ಅವಿನಾಭಾವ ಸಂಬಂಧವನ್ನು ಹೊಂದಿದ ಸೋದರ ಭಾಷೆಗಳೂ ಹೌದು. ಈ ಎರಡೂ ಭಾಷೆಗಳಿಗೆ ಸೇರಿಯೇ ರಾಷ್ಟ್ರಭಾಷೆಯ ಸ್ಥಾನಮಾನ ಮಾನ್ಯತೆ ದೊರೆತಿರುವುದು ಗಮನೀಯ ಅಂಶ. ತೆಲುಗು–ಕನ್ನಡದಲ್ಲಿ ಮಹಾಯೋಗಿ ವೇಮನ ಹಾಗೂ ಸರ್ವಜ್ಞ ಕವಿಗಳು ಮಹಾಕವಿಗಳೇ ಸರಿ!! ಅವರಿಬ್ಬರೂ ಪಂಡಿತ–ಪಾಮರರಿಗೂ, ಗೋಪಾಲಕರಿಂದ ಹಿಂದು ಭೂಪಾಲಕರ ವರೆಗೂ ಬೇಕಾಗಿ ಅಮರರಾದವರು. ಅಂಥವರ ಜೀವನ ಸಾಧನೆಯ ಹೆಜ್ಜೆಯ ಗುರುತುಗಳನ್ನು ಸಂಕ್ಷಿಪ್ತವಾಗಿ ಬಣ್ಣಿಸುವುದು ಈ ಪ್ರಚಾರೋಪನ್ಯಾಸಮಾಲೆಯ ಮುಖ್ಯ ಉದ್ದೇಶವಾಗಿದೆ.

**~0~**

೨

# ಮಹಾಯೋಗಿ ವೇಮನ: ಜೀವನ ದರ್ಶನ

## (೧೪೧೨ ರಿಂದ ೧೪೮೦):

ವೇಮನ-ಸರ್ವಜ್ಞರಿಬ್ಬರೂ ಜನಾನುರಾಗಿಗಳೇ! ಸರ್ವಜ್ಞನು ತ್ರಿಪದಿಯಲ್ಲಿ ನೀತಿಯ ಮಾತು ಹೇಳಿದರೆ; ವೇಮನ ಚೌಪದಿಯಲ್ಲಿ ಅನುಭವದ ಕಲಸ ತುಂಬಿದ ಆಶುಕವಿ. ಇವರಿಬ್ಬರಿಂದ ಕ್ರಮವಾಗಿ ಕರ್ನಾಟಕಾಂಧ್ರ ಪ್ರದೇಶಗಳು, ಕನ್ನಡ-ತೆಲುಗು ಭಾಷೆಗಳು ಶ್ರೀಮಂತಗೊಂಡಿವೆಯೆಂಬುದರಲ್ಲಿ ಸಂಶಯವೇ ಇಲ್ಲ. ಆದುದರಿಂದ ಇವರು ಕೀರ್ತಿಶೇಷರು. ವೇಮನನನ್ನು ತಿಳಿಯದವರು ಯಾರೂ ಇರಲಿಕ್ಕಿಲ್ಲ. ಅನುದಿನದ ಮಾತಿನಲ್ಲಿ, ಸಭೆ-ಸಮಾರಂಭಗಳಲ್ಲಿ, ಭಾಷಣ ಪ್ರವಚನಗಳಲ್ಲಿ ವೇಮನ ಹಲವಾರು ಸಂದರ್ಭಗಳಲ್ಲಿ ಸಾಕಾರಗೊಳ್ಳುತ್ತಾನೆ. ಅಂತಹ ಜನಪ್ರಿಯ ಮತ್ತು ಅಧ್ಯಾತ್ಮ ಮಹಾಯೋಗಿಯ ಜೀವನಾಮೃತ ಅದ್ಭುತವಾದುದು. ವೇಮನ ತಮ್ಮ ಚೌಪದಗಳಲ್ಲಿ ಸಾಮಾಜಿಕ ಪ್ರಜ್ಞೆಯಿಂದ, ವೈಚಾರಿಕ ಬುದ್ಧಿಯಿಂದ ಸಾವಿರಾರು ಪದ್ಯಗಳನ್ನು ಸೃಷ್ಟಿ ಮಾಡಿಕೊಟ್ಟ ಮಹಾಯೋಗಿ, ತೆಲುಗು ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಸಾವಿರಾರು ಜನ ಕವಿಗಳಲ್ಲಿ ಆಂಧ್ರದ ಗಡಿಯನ್ನು ದಾಟಿ ಕರ್ನಾಟಕ ಮತ್ತು ತಮಿಳು ನಾಡುಗಳಲ್ಲಿ ಪರಿಚಿತವಾಗಿರುವಂತಹ ಜನಪ್ರಿಯ ಕವಿ ವೇಮನ, ತಾತ್ವಿಕ ನೆಲೆಯಿಂದ ಅತ್ಯಂತ ಮುಖ್ಯವಾಗಿರುವ ವೇಮನರು; ಸಾಮಾಜಿಕ ಕಳಕಳಿಯ ವಿಶಿಷ್ಟ ಕವಿಯಾಗಿಯೂ ಮುಖ್ಯವಾಗಿ ಕಾಣುತ್ತಾರೆ. ಆತ ಮೌಖಿಕ ಸಂಪ್ರದಾಯದ ಆಶುಕವಿ. ಅವನು ಒಂದೇ ಸ್ಥಳದಲ್ಲಿ ಕುಳಿತುಕೊಂಡು ಪದ್ಯ ಬರೆದವನಲ್ಲ. ಆತನ ಪರಮ ಶಿಷ್ಯ ರಾಮರೆಡ್ಡಿ-ನೀಲಕಂಠ ಇವರಿಬ್ಬರು ಬರೆದುಕೊಳ್ಳುತ್ತಿದ್ದರು ಎಂಬುದು ತಿಳಿದು ಬರುತ್ತದೆ. ವೇಮನರು ದೇಶೀಯ ಛಂದಸ್ಸಿನ ಅಟಲವೇದಿ, ಕಂದ, ಸೀಸ, ತೇಟ ಎಂಬ ಪದ್ಯಗಳಲ್ಲಿ ಹೇಳುತ್ತಿದ್ದರೆಂಬುದನ್ನು ಅವರ ಶಿಷ್ಯರೇ ಹೇಳಿದ್ದುಂಟು. ಆದುದರಿಂದ ಅಂತಹ ಪದ್ಯಗಳನ್ನು ಯಾರು ಬೇಕಾದರೂ ಅರ್ಥೈಸಿಕೊಳ್ಳಬಹುದು. ಈ ಕವಿಯು ೧೫ ನೆಯ ಶತಮಾನದಲ್ಲಿದ್ದವನು. ವೇಮನನ ಕಾಲ-ದೇಶಗಳ ಬಗೆಗೆ ತಿಳಿದುಕೊಳ್ಳುವುದು ಬಲು ಕಷ್ಟವಾದರೂ ತನ್ನದೊಂದು ಪದ್ಯದಲ್ಲಿ ಹೀಗೆ ಹೇಳಿದ್ದಾನೆ.



**ಊರು ಕೊಂಡವೀಡು ವಾಸ ಪಶ್ಚಿಮವೀಧಿ**
**ಮೂಗು ಚಿಂತಪಲ್ಲೆ ಮೊದಲ ಮನೆಯು**
**ಎಟ್ಟಿ ರಡ್ಡಿ ಕುಲವು ಅದನೇನು ಹೇಳ್ವುದು?**
**ವಿಶ್ವದಾಭಿರಾಮ ಕೇಳು ವೇಮ**

ಈ ಪದ್ಯವನ್ನು ಗಮನಿಸಿದರೆ ಮೂಗಚಿಂತಪಲ್ಲೆ ಗ್ರಾಮದ ಒಂದು ಹೊರವಲಯದಲ್ಲಿ ಮನೆಕಟ್ಟಿಕೊಂಡು ವಾಸವಾಗಿದ್ದರೆಂಬುದೂ ತಿಳಿದು ಬರುತ್ತದೆ. ವೇಮನನು ರಾಜವಂಶಸ್ಥ ಮನೆತನಕ್ಕೆ ಸೇರಿದವನು. ರೆಡ್ಡಿ ರಾಜವಂಶದ ಮಾಚರೆಡ್ಡಿ, ವೇಮರೆಡ್ಡಿ, ಮಲ್ಲರೆಡ್ಡಿ ಎಂಬ ಮೂರು ಶಾಖೆಗಳಿವೆ. ಶ್ರೀಶೈಲದ ಮಲ್ಲಿಕಾರ್ಜುನನೇ ಈ ವಂಶದ ಆರಾಧ್ಯ ದೇವರು. ತಿರುಮಲ ತಿಮ್ಮಪ್ಪ ಅಥವಾ ವೆಂಕಟಪತಿಯೂ ಈ ಕುಲದ ದೇವರೂ ಹೌದು.

ವೇಮನನ ಅಜ್ಜ ವೇಮರಡ್ಡಿಯೇ ಈ ವಂಶದ ಮೂಲ ಪುರುಷನೆಂಬುದಾಗಿ ತಿಳಿದು ಬರುತ್ತದೆ. ಈತನು ಯುದ್ಧ ಪ್ರವೀಣನೂ ಮತ್ತು ರಾಜ ರಕ್ಷಣಾ ನಿಪುಣನೂ ಆಗಿದ್ದನು. ಈತ ಶ್ರೀಶೈಲದ ಸಮೀಪವಿರುವ ಕೊಂಡವೀಡಿನಲ್ಲಿ ಕ್ರಿ.ಶ. ೧೩೨೪ ರಲ್ಲಿ ರಾಜ್ಯ ಸ್ಥಾಪಿಸಿದ್ದನಂತೆ. ವೇಮರೆಡ್ಡಿಯ ಮಗನೇ ಕುಮಾರಗಿರಿ ರೆಡ್ಡಿಯು. ಕುಮಾರ ಗಿರಿರೆಡ್ಡಿಯೇ ರಾಜವಂಶದ ಕೊನೆಯ ಕೊಂಡಿ ಎಂದೂ ಹೇಳಲಾಗಿದ್ದು; ರೆಡ್ಡಿ ವಂಶದವರು ಒಂದು ಶತಮಾನವೆಂದರೆ ಒಂದು ನೂರು ವರುಷ ಆಳ್ವಿಕೆ ಮಾಡಿದ ದಾಖಲೆಗಳಿವೆ. ಕೊನೆಯ ಯುದ್ಧದಲ್ಲಿ ಸೋಲು ಕಂಡ ಕುಮಾರಗಿರಿರೆಡ್ಡಿಯು ಕೊಂಡವೀಡು ಬಿಟ್ಟು-ಸಿದ್ದಾಪುರಕ್ಕೆ ಬಂದು ನಲೆಸಿದನೆಂದು ತೋರುತ್ತದೆ. ಕುಮಾರಗಿರಿರೆಡ್ಡಿಯ-ಮಹಾರಾಣಿ ಮಲ್ಲಾಂಬೆ! ಇವರಿಬ್ಬರ ಮಕ್ಕಳೇ ಭರಮರಡ್ಡಿ ಮತ್ತು ವೇಮರಡ್ಡಿ ಮತ್ತು ಇವರಿಗೆ ಒಬ್ಬಳು ಸಹೋದರಿಯಿದ್ದಳಂತೆ. ವೇಮರಡ್ಡಿಯೇ ಮುಂದೆ ಮಹಾಯೋಗಿ ವೇಮನ ವೇಮಣ್ಣನಾದ. ಭರಮರಡ್ಡಿಯ ಧರ್ಮಪತ್ನಿಯೇ ಹೇಮರಡ್ಡಿ ಮಲ್ಲಮ್ಮ! ಈಕೆಯೇ ವೆಮಣ್ಣನಿಗೆ ಅತ್ತಿಗೆಯಾಗಿ, ತಾಯಿಯಾಗಿ, ಗುರುವಾಗಿ, ಮಹಾಮಾತೆಯಾಗಿ ಬಂದವಳು. ಇವರಿಬ್ಬರಲ್ಲಿ ತಾಯಿ-ಮಗನಂತಹ ಪ್ರೀತಿ-ವಾತ್ಸಲ್ಯವಿತ್ತು. ಮಲ್ಲಮ್ಮನ ಊರು ಶ್ರೀಶೈಲದ ದಕ್ಷಿಣಕ್ಕಿರುವ ವೆಲ್ಲಟೂರು ಜಿಲ್ಲೆಗೆ ಸೇರಿದ ರಾಮಾಪುರ ಮಲ್ಲಮ್ಮನ ಹುಟ್ಟೂರು. ನಾಗರೆಡ್ಡಿ-ಗೌರಮ್ಮ ದಂಪತಿಗಳೇ ಮಲ್ಲಮ್ಮನ ತಂದೆ-ತಾಯಿಗಳು. ಇವರೂ ಶ್ರೀಶೈಲ ಮಲ್ಲಿಕಾರ್ಜುನನ ಪರಮ ಭಕ್ತರು. ಈ ದೇವನ ವರಪ್ರಸಾದದಿಂದ ಹುಟ್ಟಿದವಳೇ ಮಲ್ಲಮ್ಮ! ಈಕೆಯನ್ನು ಹೇಮರಡ್ಡಿ ಮಲ್ಲಮ್ಮ ಎಂದು ಕರೆಯುತ್ತಾರೆ. ಆಕೆ ರಾಮಾಪುರದಿಂದ ಕುಮಾರರೆಡ್ಡಿಯಿರುವ ಸಿದ್ದಾಪುರಕ್ಕೆ ಹಿರಿಯ ಮಗನಾದ ಭರಮರೆಡ್ಡಿಯ ಸತಿಯಾಗಿ ಬರುತ್ತಾಳೆ. ವೇಮನನ ಸೋದರತ್ತೆ

(ತಂದೆಯ ತಂಗಿ) ನರಸಾಂಬೆಯು ರಾಜ ಮಹೇಂದ್ರದ ಮಹಾರಾಣಿ. ಅಲ್ಲಿಯ ಕಾಟಿಯವೇಮಾರಡ್ಡಿಯ ಮಹಾರಾಣಿ. ವೇಮಣ್ಣನೆಂದರೆ ಸೋದರತ್ತೆಗೆ ಬಲು ಪ್ರೀತಿ. ವೇಮನ ಹುಟ್ಟಿದಾಗ ಅಣ್ಣ (ಕುಮಾರಗಿರಿರೆಡ್ಡಿ) ನ ಮಗನನ್ನು ನೋಡಿ ಆನಂದಿಸಲು ಬಂದದ್ದುಂಟು. ಈ ಮಗುವಿನ ಮುಖ ಮುದ್ರೆಯನ್ನು ಕಂಡ ದೊರೆಸಾನಿ ನರಸಾಂಬೆ ಜ್ಯೋತಿಷಿಯಿಂದ ಕುಂಡಲಿ ತೆಗೆಯಿಸಿ ಕೇಳುತ್ತಾಳೆ. ಜ್ಯೋತಿಷಿ ಹೇಳಿದ್ದುದೇನೆಂದರೆ ಈ ಮಗು ಮಹಾಯೋಗಿಯಾಗುವ ಯೋಗವಿದೆ ಮತ್ತು ಈತನಿಂದ ಲೋಕ ಕಲ್ಯಾಣವಾಗುವುದಿದೆ. ಅಲ್ಲದೆ ಮಹಾಕವಿಯೂ ಆಗುತ್ತಾನೆಂದು ಅವನು ಹೇಳಿದಂತೆಯೇ ಆದವನು ಮಹಾಯೋಗಿ ವೇಮನ!!

**ರೆಡ್ಡಿ ರಾಜಮನೆತನದ ಇತಿಹಾಸ:**

ರೆಡ್ಡಿ ರಾಜ್ಯವು ವಿಜಯನಗರ ಸಾಮ್ರಾಜ್ಯದಲ್ಲಿ ಒಂದಾಗಿ ಎಲ್ಲ ಸಾಮ್ರಾಜ್ಯಗಳೂ ಒಂದಾಗಿ, ಇತಿಹಾಸದ ಕಥೆಯಾಗಿ ಮುಗಿಸಿ ಮರೆಯಾದವು. ಆದರೂ ಒಂದು ಶತಮಾನಷ್ಟು ಕಾಲ ಆಳ್ವಿಕೆ ಮಾಡಿದ ರಾಜ ಮನೆತನವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪೋಲಯ ವೇಮಾರಡ್ಡಿಯಿಂದ ಕ್ರಿ.ಶ. ೧೩೨೪ ರಲ್ಲಿ ಪ್ರಾರಂಭವಾದ ರಡ್ಡಿ ರಾಜವಂಶವು ರಾಚವೇಮಾರಡ್ಡಿಯವರೆಗೆ ಅಂದರೆ ಕ್ರಿ.ಶ. ೧೪೨೪ ರ ವರೆಗೆ ಒಂದು ನೂರು ವರುಷಗಳ ತನಕ ಆಳ್ವಿಕೆ ಮಾಡಿ ಮುಕ್ತಾಯವಾಯಿತು. ಈ ಮಾಹಿತಿಯು ಆಂಧ್ರುಲ ಚರಿತ್ರೆಯು(ಭಾಗ–ಪುಟ–೧೫೦) ಗ್ರಂಥದಲ್ಲಿಯ ತೆಲುಗು ಚಾಟು ಪದ್ಯದಿಂದಲೂ ರಡ್ಡಿ ರಾಜರ ವಂಶಾವಳಿಯು ತಿಳಿದು ಬರುತ್ತದೆ. (ಹೆ.ಮ. ಚರಿತ್ರೆ ಪುಟ– ೧೨) ಅಂದರೆ ಈ ಪದ್ಯದ ಪ್ರಕಾರ ರಡ್ಡಿ ರಾಜವಂಶವಿಂತಿದೆ.

೧– ಪೋಲಯ ವೇಮನ – (೧೬ ವರ್ಷಗಳ ಆಳ್ವಿಕೆ)
೨– ಅನಪೋತ ವೇಮನ – (೨೦ ವರ್ಷಗಳು)
೩– ಅನವೇಮನ ವೇಮನ – ( ೧೫ ವರ್ಷಗಳು)
೪– ಕೋಮರಗಿರಿ ವೇಮನ – (೧೪ ವರ್ಷಗಳು)
೫– ಪೆಡಕೋಮಚಿ ವೇಮನ – (೨೦ ವರ್ಷಗಳು)
೬– ರಾಚವೇಮನ – (೪ ವರ್ಷಗಳು)

ಮೇಲ್ಕಾಣಿಸಿದಂತೆ ಇವರೆಲ್ಲರೂ ಕ್ರಮವಾಗಿ ೧೨,೨೦,೧೫,೧೪,೨೦,೪. ಒಂದು ನೂರು ವರ್ಷಗಳ ಆಳ್ವಿಕೆ ಮಾಡಿದ್ದುದು ತಿಳಿದು ಬಂದ ಸಂಗತಿಯಾಗಿದೆ. (ಹೆ.ಮ.ಚ. –ಡಾ ಸಣ್ಣೆಲ್ಲನವರ – ಪುಟ– ೧೨–೧೩).



**ವೇಮನನ ಶಿಕ್ಷಣ:**

ರಾಜವಂಶ ಪರಿವಾರದಲ್ಲಿಯೇ ವೇಮನನಿಗೆ ಪ್ರಾಥಮಿಕ ಹಂತದ ವಿದ್ಯೆ ದೊರೆತರೂ, ಇವ್ವಟೂರಿನ ಸೋಮಶೇಖರ ಗುರುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಾನೆ. ಆದರೆ, ವೇಮನ ಗುರು ಪೀಠದಲ್ಲಿದ್ದುಕೊಂಡು ಓದಲು ನಿರಾಸಕ್ತಿ ತಾಳಿ, ಪ್ರಕೃತಿ ಸೌಂದರ್ಯ ಸವಿಯುತ್ತ ಹೊಳೆ– ಹಳ್ಳ– ಕೊಳ್ಳಗಳು ಹರಿಯುತ್ತಿರುವುದನ್ನು, ಪಶು–ಪಕ್ಷಿಗಳ ಓಡಾಟ–ಹಾರಾಟ ಮತ್ತು ಅವುಗಳ ಕಲರವ ಧ್ವನಿಯನ್ನಾಲಿಸುವಲ್ಲಿ ವೇಮನ ಮಗ್ನನಾಗುತ್ತಿದ್ದ. ತನ್ನ ಕುಟುಂಬದ ಏಳು–ಬೀಳು, ಯಾದವೀ ಕಲಹ ಮತ್ತು ಅಧಿಕಾರ ದಾಹದಿಂದ ಪರಸ್ಪರರ ಕಚ್ಚಾಟವನ್ನು ಆತ ವಿದ್ಯಾರ್ಜನೆಯ ಸಂದರ್ಭದಲ್ಲಿಯೇ ಕಣ್ಣಾರೆ ಕಂಡು, ಕೇಳಿದ ಮನಸ್ಸು ವಿಹ್ವಲಗೊಂಡಿತ್ತು. ಸೋಮಶೇಖರ ಗುರುಗಳು ತುಂಬಾ ಪ್ರಭಾವಿಗಳು! ಹಾಗೆಯೇ ವೇಮನನ ಮೇಲೆ ಕರುಣೆ ಪ್ರೀತಿ–ವಾತ್ಸಲ್ಯವುಳ್ಳವರಾಗಿದ್ದರು. ಆಯಾ ಶಿಷ್ಯರಲ್ಲಿ ಹುದುಗಿದ ಸುಪ್ತ ಚೇತನವನ್ನು ಬಡಿದೆಬ್ಬಿಸುವವರಾಗಿದ್ದರು. ವೇಮನನಲ್ಲಿ ಕವಿಯಗುವಂತಹ ಸುಪ್ತ ಚೇತನವಿದೆಯೆಂಬುದನ್ನು ಗುರುಗಳು ಮನವಾರೆ ಕಂಡು ಅರಿತಿದ್ದರು. ಆದುದರಿಂದ ವೇಮನನಿಗೆ ಅದೇ ದಾರಿಯಲ್ಲಿ ಹೋಗುವಂತೆಯೂ ಅನುಗ್ರಹಿಸಿದ್ದರು.

**ಮೋಹದ ಮಡುವಿನಲ್ಲಿ ವೇಮನ:**

**'ತಾನೊಂದು ಬಗೆದರೆ ದೈವವೊಂದು ಬಗೆಯಿತು'** ಎಂಬಂತೆ ಗುರುಕುಲದಿಂದ ವೇಮನನು ಬೇಗನೇ ಮರಳಬೇಕಾಯಿತು. ಏಕೆಂದರೆ ಅವನ ಸೋದರತ್ತೆಯ ಮನೆಯಲ್ಲಾದ ರಾಜಕೀಯ ಸ್ಥಿತ್ಯಂತರಗಳು, ಯುದ್ಧದ ಪರಿಣಾಮಗಳು, ಸಾವು ನೋವು; ಇದಲ್ಲದೆ ತನ್ನ ತಂದೆಯು ತನ್ನ ಪ್ರೇಯಸಿ ಲಕುಮಾದೇವಿಯ ಜೊತೆಗೆ ನೃತ್ಯ–ಸಂಗೀತಗಳಿಗೆ ಲೋಲುಪನಾಗಿದ್ದುದನ್ನು ಹಾಗೂ ತನ್ನ ಹಿಂದಿನ ರಾಜ ಭೋಗದ ವೈಭವದಲ್ಲಿ ಮೆರೆಯುತ್ತಿರುವುದನ್ನು ಕಂಡಿದ್ದನು. ಹೀಗೆ ಈ ಎಲ್ಲ ಘಟನೆಗಳಿಂದ ತಂದೆಯ ಪ್ರೇಯಸಿ ಲಕುಮಾದೇವಿಯ ಮನೆ ಪರಿಸರದಲ್ಲಿ, ದೇವದಾಸಿ ಚಿತ್ತರಂಜನಿಯ ಸ್ನೇಹದಲ್ಲಿ ವೇಮನನು ಸಿಲುಕಿಕೊಂಡನು. ಈತನ ರೂಪು–ಯೌವ್ವನ, ಅಂಗ ಸೌಷ್ಠವವನ್ನು ಕಂಡ ದೇವದಾಸಿ ಕಂಡು ಬಹುವಾಗಿ ಮೆಚ್ಚಿದಳು. ವೇಮನನೂ ಮೆಚ್ಚಿದ. ಇದರಿಂದಾಗಿ ಮನೆಯೂ ಖಾಲಿ, ಮನೆಯೂ ಖಾಲಿಯಾಗುವಂತಾಯಿತು. ವೇಮನನಿಂದ ಸಕಲ ಭೋಗ–ಭಾಗ್ಯದ ವಸ್ತುಗಳನ್ನು ಪಡೆದಿದ್ದ ಚಿತ್ತರಂಜನಿಗೆ ಮಲ್ಲಮ್ಮನ (ಅತ್ತಿಗೆ) ವಜ್ರದ ನತ್ತಿನ ಮೇಲೆ ಕಣ್ಣು ಬಿತ್ತು! ಅದು ಮುತ್ತೈದೆಯರ ಪಾವಿತ್ರ್ಯದ ಆಭರಣ. ಮತ್ತೇನನ್ನಾದರೂ ಕೊಡಬಲ್ಲೆ ಆದರದನ್ನು ಕೇಳುವುದು ಉಚಿತವಲ್ಲವೆಂದು ವೇಮನ ಆಕೆಗೆ ಅದೆಷ್ಟು ಹೇಳಿದರೂ; ಅದು ಬೇಕೆ ಬೇಕೆಂದು ಹಠ ಹಿಡಿದಳು. ಮನೆಗೆ ಬಂದು ಉಪವಾಸ

ವ್ರತ ಕೈಕೊಂಡ. ವೇಮನನ ಇಂಗಿತದ ಮನೋಗತವನ್ನರಿತುಕೊಂಡ ಮಲ್ಲಮ್ಮ ತನ್ನ ಮೂಗುತಿಯನ್ನು ಆತನಿಗಿತ್ತು, ಕರಾರು ಹಾಕಿ ಇಂತೆಂದಳು. ಆಕೆ ಮಲಗುವ ಮಂಚಕ್ಕೆ ನಗ್ನಳಾಗಿ, ವಸ್ತ್ರಹೀನಳಾಗಿ ಮೂರು ಬಾರಿ ಪ್ರದಕ್ಷಿಣೆ ಹಾಕಬೇಕು. ವಜ್ರದ ಮೂಗುತಿಯನ್ನು ಹೊಸ್ತಿಲದ ಮೇಲಿಡು ಹಾಗೆ ಆಕೆ ಮಾಡಿದರೆ ಅದನ್ನವಳಿಗೆ ಕೊಡು ಎಂದಳು. ಅದಕ್ಕೆ ಹ್ಞೂಂ ಗುಟ್ಟಿದ. ಚಿತ್ತರಂಜನಿಯಲ್ಲಿಗೆ ಹೋದ. ಅತ್ತಿಗೆ ಹೇಳಿದಂತೆಯೇ ಆಕೆಯ ಮುಂದೆ ಹೇಳಿದ. ಆಕೆಯು ನತ್ತಿನ ವ್ಯಾಮೋಹದಿಂದಾಗಿ ಒಪ್ಪಿಗೆಯಿತ್ತುದಲ್ಲದೇ ಮೂರು ಸುತ್ತು ಬೆತ್ತಲೆಯಾಗಿಯೇ ಹಾಕಿದಳು. ಆಕೆಯ ನಗ್ನವಾದ ದೇಹವನ್ನು ತದೇಕ ಚಿತ್ತದಿಂದ ದಿಟ್ಟಿಸುತ್ತಿದ್ದ ವೇಮನ; ಮೊದಮೊದಲು ವಸ್ತ್ರಾಲಂಕರಗಳಿಂದ ಸುಂದರವಾಗಿ ಕಾಣುತ್ತಿದ್ದ ವೇಶ್ಯೆ, ನಗ್ನತೆಯಿಂದ ಅಸಹ್ಯಪಟ್ಟುಕೊಂಡು ಲಜ್ಜಿತನಾದ ವೇಮನ ಅಲ್ಲಿಂದ ಪಲಾಯನವಾದ. ಮೂಗುತಿಯನ್ನು ಇಟ್ಟವನೇ ಹೊರಗೆ ಓಡಿದ. ಚಿತ್ತರಂಜನಿಯ ಸಹವಾಸದಿಂದ ಏನೆಲ್ಲ ಕಳೆದುಕೊಂಡ ವೇಮನ. ಈ ಘಟನೆಯಿಂದ ಮರಳಿ ಆಕೆಯ ಮನೆಯ ಹೊಸ್ತಿಲವನ್ನೇ ತುಳಿಯಲಿಲ್ಲ. ಅಂದಿನಿಂದ ಆತ ಮಹಾಯೋಗಿಯಾದ. ಆತನೂ ದಿಗಂಬರನಾದ. ಅದು ಅವನ ಪದ್ಯದಲ್ಲಿ ಕಂಡು ಬರುತ್ತದೆ.

**ತಾಯ ಗರ್ಭದಿಂದ ತಾಂ ಬರುವ ಸಮಯದಿ**
**ಮೊದಲು ವಸ್ತ್ರವಿಲ್ಲ ತುದಿಗುಮಿಲ್ಲ**
**ನಡುವೆ ಬಟ್ಟೆಯುಡುವುದೇಕೆಂದು ತಿಳಿಯಿರಿ**
**ವಿಶ್ವದಾಭಿರಾಮ ಕೇಳು ವೇಮ.**

ಮಲ್ಲಮ್ಮ ಅತ್ತಿಗೆಯಿಂದ ವೇಮನ ಯೋಗಿಯಾದ, ನಿಜವಾದ ಅರ್ಥದಲ್ಲಿ ಸನ್ಯಾಸಿ ವಿರಾಗಿಯಾದ. ಕಚ್ಚುಟವನ್ನು ಬಿಟ್ಟರೆ ತುಂಡು ಬಟ್ಟೆಯನ್ನು ಧರಿಸಲಾರದೇ ಊರು–ಕೇರಿಗಳನ್ನೆಲ್ಲವೂ ಸಂಚರಿಸಿದ. ಹುಟ್ಟಿದಾಗಲೂ ಬಟ್ಟೆಯಿರಲಿಲ್ಲ– ಸತ್ತಾಗಲೂ ಇರುವುದಿಲ್ಲ– ಮಧ್ಯದಲ್ಲಿ ಬಟ್ಟೆ ಏಕೆಂದು ಪ್ರಶ್ನಿಸಿದನು.

**ವೇಮನನ ಪರಿವರ್ತನ ಪರ್ವ: ಮಹಾಯೋಗಿಯ ದಿವ್ಯ ದರ್ಶನ:**

ಅತ್ತಿಗೆ ತಾಯಿಯ ಸ್ವರೂಪಳಾಗಿ ಕುಮಾರಗಿರಿರೆಡ್ಡಿಯ ಮನೆ ತುಂಬಿದ್ದು; ಅವಳ ಕೃಪೆಯಿಂದ. ಚಿತ್ತರಂಜನಿಯ ಸಂಗದಿಂದ ದೂರ ಉಳಿದದ್ದು ಅಲ್ಲದೆ ಅತನ ಮನಸ್ಸೇ ಪರಿವರ್ತನವಾಯಿತು. ವೇಮನನ ಮನಸ್ಸು ದೇವದಾಸಿಯ ಸಂಪರ್ಕದಿಂದ ರೋಷಿ ಹೋಗಿತ್ತು, ಲಜ್ಜಿತವಾಗಿತ್ತು. ಭೋಗದಲ್ಲಿಯೇ ಮೈಮರೆತಿದ್ದ ವೇಮನ ಮಲ್ಲಮ್ಮನ ಮಾರ್ಗದರ್ಶನದಿಂದ ಸತ್ಯದ ದರ್ಶನವಾಗಿ ಅಧ್ಯಾತ್ಮದತ್ತ, ಧ್ಯಾನ–ತಪಸ್ಸಿನತ್ತ ಸಾಗುವಂತೆ ಪ್ರಚೋದನೆಯಾಯಿತು. ತನ್ನನ್ನು ಕುರಿತು ತನಗೇ



ಹೀನ ಭಾವನೆಯುಂಟಾಗಿತ್ತು. ಶಾರೀರಿಕ–ಮಾನಸಿಕವಾಗಿಯೂ ದೌರ್ಬಲ್ಯವುಂಟಾಗಿತ್ತು. ಇದರಿಂದ ಮುಕ್ತಿ ಹೊಂದಲು ಮನಸ್ಸು ಹಾತೊರೆಯುತ್ತಿತ್ತು., ಹಂಬಲಿಸುತ್ತಿತ್ತು. ಆಗ ವೇಮನನಿಗೆ ನೆರವಿಗೆ ಬಂದವನು ಆಪ್ತಮಿತ್ರ, ಬಾಲ್ಯಸ್ನೇಹಿತ ಅಕ್ಕಸಾಲಿಗ ಅಭಿರಾಮವೆಂಬುವವನು. ಆತನಲ್ಲಿ ಮನದಾಳದ ನೋವನ್ನು ತೋಡಿಕೊಂಡ. ತನಗಿನ್ನು ಮೇಲಿನಿಂದ ಲೌಕಿಕ ಸುಖಬೇಡ; ಪಾರಮಾರ್ಥಿಕ ಪರಮಾನಂದ ಸುಖಬೇಕು. ಮತ್ತು ಅದರಿಂದ ಲೋಕಕ್ಕೂ ದಾರಿದೀಪವಾಗಬೇಕೆಂದು ತನ್ನ ಮನದಿಂಗಿತವನ್ನು ಆತನಲ್ಲಿ ತಿಳಿಯಪಡಿಸಿದ. ಆಪತ್ಕಾಲದಲ್ಲಿ ಆಪ್ತಮಿತ್ರ ಸನ್ಮಾರ್ಗ ತೋರಿದ.

ಶ್ರದ್ಧೆಯೇ ಜೀವನದ ಆಧಾರ. ಶ್ರದ್ಧೆಯಿಲ್ಲದಿದ್ದರೆ ಏನನ್ನೂ ಸಾಧಿಸಲಿಕ್ಕಾಗದು. ಶ್ರದ್ಧೆಯೊಂದು ಮಹಾನ್ ಶಕ್ತಿಯದು. ಆಶ್ರಯ ಸ್ಥಾನವಲ್ಲ. ತಾತ್ಕಾಲಿಕ ವೈರಾಗ್ಯದಿಂದ ಶ್ರದ್ಧೆ ಹುಟ್ಟೀತು. ಜೀವನದ ಗುರಿ ಸಾಧನೆಗೆ ನಿಜವಾದ ಶ್ರದ್ಧೆಯ ಜೊತೆ ಜೊತೆಗೆ ಸತತ ಪರಿಶ್ರಮಿಸುವ ಮನೋಬಲ ಬೇಕೇಬೇಕೆಂದು ಸ್ನೇಹಜೀವಿ ಅಭಿರಾಮ ಹೇಳಿದನಲ್ಲದೇ, ಆತನನ್ನು ಪರೀಕ್ಷಿಸಲಾರಂಭಿಸಿದ. ವೇಮನನಲ್ಲಿ ಬಂದಿದ್ದ ಬದಲಾವಣೆಗೆ ಅದೇನು ವೈರಾಗ್ಯದಂತಹ ತಾತ್ಕಾಲಿಕ ವೈರಾಗ್ಯವಾಗಿರಲ್ಲಿಲ್ಲ. ನಿಜವಾಗಿಯೂ ವೇಮನನ ಅಂತರಾಳ ಬೆಂದು ಪರಿಪಕ್ವವಾಗಿತ್ತು. ಪಾರಮಾರ್ಥ ಈತನಿಗೆ ಪ್ರಾಪ್ತವಾಗುವುದರಲ್ಲಿ ಸಂದೇಹವೇ ಇಲ್ಲವೆಂದೆನಿಸಿತು. ಮಿತ್ರ ಅಭಿರಾಮನಿಗೆ ಹಾಗೆಯೇ ಪರಮಾರ್ಥ ಸಾಧನೆಗೆ ನಿರ್ಭಯತೆ ಬೇಕು. ನಿರ್ಭಯತೆಯೆಂದರೆ ಮನೆಯಲ್ಲಿ, ಮನದಲ್ಲಿ, ಜನರಲ್ಲಿ, ಜೀವನದಲ್ಲಿ, ಸಾವಿನಲ್ಲಿ ಎಲ್ಲಿಯೂ ಭಯವಿಲ್ಲದಿರುವ ಸ್ಥಿತಿಯನ್ನು ತಲುಪಿದಾಗ ಪಾರಮಾರ್ಥಿಕ ಯಶಸ್ಸಿನ ಮಾರ್ಗ ಸುಲಭವಾಗುತ್ತದೆಯೆಂಬುದನ್ನು ಅಭಿರಾಮ ವೇಮನನಿಗೆ ಬಣ್ಣಿಸಿದನು. ಈತನ ಹಿತೋಕ್ತಿಯ ಮಾತುಗಳಿಂದಾಗಿ ವೇಮನನ ಮನೋಸ್ಥಿತಿ ಪಾರಮಾರ್ಥಿಕದ ಉನ್ನತ ಮಟ್ಟಕ್ಕೇರಿತ್ತು.

ಸತ್ವ, ರಜೋ, ತಮೋಗುಣಗಳೆಂಬ ತ್ರಿಗುಣಗಳು ಈ ವಿಶ್ವವನ್ನೇ ವ್ಯಾಪಿಸಿವೆ. ಮನಸ್ಸು ಕೂಡ ಈ ತ್ರಿಗುಣಾತ್ಮಕ ಆವರಣದಿಂದ ಆತ್ಮವನ್ನು ಮುಚ್ಚಿಬಿಟ್ಟಿದೆ. ಕ್ರಮವಾಗಿ ತಮದಿಂದ ರಜೋಗುಣಕ್ಕೇರಿ, ರಜೋಗುಣದಿಂದ ಸಾತ್ವಿಕತೆಯ ವಲಯದಲ್ಲಿ ಲೀನವಾಗಿ, ಕೊನೆಗೆ ಅದರಿಂದಲೊ ಬೇರ್ಪಟ್ಟು, ಆತ್ಮ ಸ್ವರೂಪದ ದರ್ಶನ ಪಡೆಯುವ ಪರಮ ಗುರಿಯತ್ತ ವೇಮನ ಸಾಗುತ್ತಿರುವುದನ್ನು ಸಾತ್ವಿಕೆಯ ಸಾಕಾರ ಮೂರ್ತಿಯಾಗಿದ್ದ ಅಭಿರಾಮ ಗುರುತಿಸಿದ. ಗುರುವಿನ ದರ್ಶನಕ್ಕೆ ಇದು ಪಕ್ವ ಮತ್ತು ಸಕಾಲವೆಂದು ಭಾವಿಸಿ; ಗುರುವಿನ ಶೋಧನೆಗಾಗಿ ಅಭಿರಾಮನೂ ವೇಮನನೊಂದಿಗೆ ಸಂಚರಿಸಲಾರಂಭಿಸಿದ. ವಿವಿಧ ಊರು–ಕೇರಿ, ಬೆಟ್ಟದ

ಸಾಲುಗಳನ್ನು ತುಳಿಯುತ್ತ ರಾಜ ಮಹೇಂದ್ರಿಯ ಹೊರವಲಯದ ಬೆಟ್ಟದ ಕಡೆಗೆ ಬರುತ್ತಾರೆ. ಬೆಟ್ಟದ ಶ್ರೇಣಿಯಲ್ಲಿರುವ ಗುಹೆಯೊಂದರಿಂದ ಓಂಕಾರನಾದವು ಕೇಳಲಾರಂಭಿಸಿತು. ಆ ಓಂಕಾರ ನಾದದತ್ತ ವೇಮನನು ಆಕರ್ಷಿತನಾಗಿ ಆಲಿಸುತ್ತ ಅಲ್ಲಿಯೇ ಮೈಮರೆತು ಕುಳಿತ. ವೇಮನನ ಈ ಭಂಗಿಯನ್ನು ಕಂಡು ಚಕಿತನಾದ. ಈತನನ್ನು ಜಾಗೃತಾವಸ್ಥೆಗೆ ತರುವಲ್ಲಿ ಅಭಿರಾಮ ವಿಫಲನಾದ. ಅಷ್ಟರಲ್ಲಿಯೇ ಅಭಿರಾಮ ಅಚ್ಚರಿಗೊಂಡು ಹಿರಿಯರನ್ನು ಕರೆತರಲು ತೆರಳಿದ. ಕೆಲಕಾಲದ ನಂತರ ಗುಹೆಯಿಂದ ದಿವ್ಯ ಪ್ರಕಾಶ ಹೊರಹೊಮ್ಮಿತು. ಅಲ್ಲಿ ಮಹಾಯೋಗಿಯೊಬ್ಬ ಕಾಣಿಸಿಕೊಂಡರು. ಅವರು ವೇಮನನ್ನು ನೋಡಿ; ಬಾ ಮಗು– ಬಹಳೇ ಹೊತ್ತು ನಿನ್ನನ್ನು ನಾನು ಕಾಯಿಸಿದೆಯಲ್ಲವೆ? ಬೇಗ ಬರಬಾರದಿತ್ತೆ? ಎಂದು ಯೋಗಿವರ್ಯ ನುಡಿದರು. ಮುಗ್ಧತೆಯಿಂದ ವೇಮನ ಸುಮ್ಮನಿದ್ದ! ಯೋಗಿಯು ಅಂತಃಕರಣದಿಂದ ತಲೆಯ ಮೇಲೆ ಕೈಯಿಟ್ಟು; ತಾವು ಆರ್ಜಿಸಿದ ತಪಃಶಕ್ತಿಯನ್ನು ವೇಮನನಿಗಿತ್ತು– ಆಶೀರ್ವದಿಸುತ್ತ ಧಾರೆಯೆರೆದರು. ವೇಮನನಿಗೆ ಇದೆಲ್ಲವೂ ಅರಿವಿಗೆ ಬರುವುದಕ್ಕೆ ಮೊದಲೇ "ಓಂ ನಮಃ ಶಿವಾಯ" ಎಂಬ ಓಂಕಾರನಾದದೊಂದಿಗೆ ಕಣ್ಮರೆಯಾಗಿದ್ದ. ಅಂದಿನಿಂದ ಈ ಗುರುವಿನ ಶಿಷ್ಯೋತ್ತಮನಾಗಿ ಆತನಾಶೀರ್ವಾದದ ಬಲವನ್ನು ಮುನ್ನಡೆಸಲು ಪಣ ತೊಟ್ಟ!!

ಆದರೆ ಆ ಯೋಗ ಗುರುವಿನ ಹೆಸರು ಎಲ್ಲಿಯೂ ಉಲ್ಲೇಖವಾಗಿಲ್ಲವಾದುದು ವಿಷಾದನೀಯ! ಆತನ ಕೃಪಾಶೀರ್ವಾದದ ಬಲದಿಂದ ವೇಮನ ಸಂಪೂರ್ಣ ಬದಲವಾಣೆಯಾಗಿದ್ದ. ಮೇಲಾಗಿ ಆತನಿಗೆ ಸಿದ್ಧಿಗಳು ಸುಲಭವಾಗಿ ಸಿದ್ಧಿಸಿದ್ದವು. ಗುರುವಿನ ದಿವ್ಯ ತೇಜ ವೇಮನನ ಮುಖ ಮಂಡಲದಲ್ಲಿ ರಾರಾಜಿಸುತ್ತಿತ್ತು. ನಡೆದುದೆಲ್ಲವನ್ನೂ ಅಭಿರಾಮನಿಗೆ ತಿಳಿಸಿದ. ಸನ್ಮಾರ್ಗದಲ್ಲಿಯೇ ನಡೆಯುವ ನಿರ್ಧಾರವನ್ನು ತಳೆದ. ಜೊತೆಯಾಗಿ ನಡೆದು ನಡೆಸಿದ ಮಿತ್ರ ಅಭಿರಾಮನನ್ನು ಎಂದೆಂದಿಗೂ ಲೋಕ ಮರೆಯದಂತೆ ಮಾಡಲು ವೇಮನ ಮನದಲ್ಲಿ ಅಚ್ಚೊತ್ತಿಸಕೊಂಡ. ಸ್ನೇಹಿತನ ಉಪಕಾರವನ್ನೆಂದೂ ಮರೆಯಬಾರದೆಂಬಂತೆ ತನ್ನ ಪದ ಪದ್ಯಗಳಿಗೆ "ವಿಶ್ವದಾಭಿರಾಮ ಕೇಳು ವೇಮ" ಎಂಬ ಅಂಕಿತವನ್ನು ಇಟ್ಟುಕೊಂಡು ರಚಿಸಿರಬೇಕೆಂಬ ಊಹೆ ನನ್ನದು! ಇದು ಸರಿಯೋ ತಪ್ಪೋ ವಿದ್ವಾಂಸರು ನಿರ್ಧರಿಸಬೇಕಷ್ಟೇ! ಇದು ಆತ್ಮೀಯ ಸ್ನೇಹಿತನ ನೆನಪಿನ ಕಾಣಿಕೆಯೇ ಸರಿ. ಆದರೆ ತಪೋಬಲವನ್ನು ಕರುಣಿಸಿದ ಗುರುವಿನ ಹೆಸರಿಸದಿರುವುದು ವಿಷಾದನೀಯವಾದುದೆಂದೇ ಹೇಳಬೇಕು.

**ಪರಿವ್ರಾಜಕನಾಗಿ ವೇಮನ:**

ಪರಿಪೂರ್ಣ ಯೋಗಿಯಾದ ವೇಮನ ತನ್ನ ಹುಟ್ಟೂರು, ತಂದೆ–ತಾಯಿ–ಬಂಧು–ಬಳಗದ ಪರಿವಾರವೆಲ್ಲವನು ತೊರೆದು ಗುಡ್ಡ–ಬೆಟ್ಟ–ಕಾಡು–ಮೇಡು, ಆ ಊರು– ಈ ಊರು ಎಂದೆನ್ನದೇ ಲೆಕ್ಕಿಸದೇ ಸತ್ಯದ ಹುಡುಕಾಟಕ್ಕಾಗಿ ನಡೆದೇ ಬಿಟ್ಟನಂತೆ! ಮತ್ತೊಂದು ಹೇಳಿಕೆಯೇನೆಂದರೆ ಅವನು ತನ್ನ ಅಣ್ಣ ಭರಮರಡ್ಡಿಯಿಂದ ಕೆಲವು ಭೂಮಿಯನ್ನು ಪಡೆದುಕೊಂಡು ಅದನ್ನು ತಾನೇ ಊಳುತ್ತಾ ಬಸವಾದಿ ಶಿವಶರಣರಂತೆ ಕಾಯಕ ತತ್ಪರನಾಗಿ ಜೀವಿಸಹತ್ತಿದನೆಂದೂ ಹೇಳಲಾಗಿದೆ. ಗುಹೆಯಲ್ಲಿದ್ದ ಶಿವಯೋಗಿಯ ಅನುಗ್ರಹವಾದ ಮೇಲೆ ಆತ ತೀವ್ರ ಬದಲಾವಣೆಯಾದ. ಅವನು ಶಿವಶರಣರಂತೆ ಬಾಳು ಸಾಗಿಸಲು ಮುಂದಾದ. ಅವನು ಸಾಮಾನ್ಯ ಯೋಗಿಗಳಂತೆ ಸಂಸಾರವನ್ನು ತ್ಯಜಿಸಿ ಭಿಕ್ಷೆಯ ಮೇಲೆ ಅವಲಂಬಿಸಲಿಲ್ಲವೆಂದೂ ಉಲ್ಲೇಖವಿದೆ. ಲಿಂಗಾಯತ ಶಿವಯೋಗಿಯಂತೆ ಕಾಯಕದಿಂದಲೇ ಉಪಜೀವಿಸುವವನಾಗಿದ್ದನು. ಅಂದಿನಿಂದ ವೇಮನನು ಸ್ವತಂತ್ರ ಧೀರ ಯೋಗಿಯಾಗಿ, ಶಿವಯೋಗಿಯಾಗಿ, ಚರಜಂಗಮನಾಗಿ ಸಂಚರಿಸಿ ಆಂಧ್ರ ತಮಿಳುನಾಡು– ಕರ್ನಾಟಕದ ತುಂಬೆಲ್ಲ ಸಂಚರಿಸಿ ತಮ್ಮ ಉನ್ನತ ವಿಚಾರಗಳಿಂದ ಬೆಳಗಿ ಯೋಗ ಸಾಮ್ರಾಜ್ಯ ಕಟ್ಟಿದರೆಂಬುದು ಅವನ ಚೌಪದಗಳಿಂದ ತಿಳಿದು ಬರುತ್ತದೆ.

**ಕಳ್ಳಗುರು ಕಟ್ಟುವನೆಲ್ಲ ಕರ್ಮಗಳನು**
**ಮಧ್ಯಮ ಗುರು ಕಟ್ಟುವ ಮಂತ್ರ ತಂತ್ರ**
**ಉತ್ತಮ ಗುರು ಕಟ್ಟುವನು ಯೋಗ ಸಾಮ್ರಾಜ್ಯದ**
**ವಿಶ್ವದಾಭಿರಾಮ ಕೇಳು ವೇಮ**

ಎಂಬ ಪದ್ಯ ಇಂದಿನ ಸರ್ವಧರ್ಮಗಳ ಗುರುಗಳಿಗೂ ಸಹ ಮಾರ್ಗದರ್ಶಕವಾಗಿದೆ. 'ಏಳು ಮತಗಳಲಿ ಎಣಿಸಿ ನೋಡಿದಾಗ–ಮತ್ತೆ ಲಿಂಗಮತವೇ ಮಿಗಿಲಿಹುದು' ಎಂದು ಮಹಾಯೋಗಿ ವೇಮನನ ವಚನ ಸಂದೇಶವನ್ನು ಲಿಂಗವಂತರು ಕಣ್ತೆರೆದು ನೋಡುವಂತಿದೆ.

ಯೋಗಿಯಾದ ಮೇಲೆ ವೇಮನನು ಕೊಂಡವೀಡು, ತಂದೆ–ತಾಯಿ, ಪರಿವಾರವೆಲ್ಲವನ್ನು ತೊರೆದು ನಡೆದೇ ಬಿಟ್ಟನು. ಒಂದು ಮಾತನ್ನು ತಂದೆ–ತಾಯಿ–ಅಣ್ಣ–ಅತ್ತಿಗೆಗೂ ಹೇಳಲಿಲ್ಲವಂತೆ! ಮಗನ ದಿಗಂಬರತ್ವವನ್ನು ತಾಯಿಯು ಒಪ್ಪದಾದಳು. ತಾಯಿ–ಮಗನ ಅಗಲುವಿಕೆಯಲ್ಲಿ ಸಾಕಷ್ಟು ಅನುತಾಪವಿತ್ತು. ರಾಜವೈಭವದಲ್ಲಿದ್ದ ಮಗನನ್ನು ಬಹು ಪ್ರೀತಿ–ಮಮತೆಯಿಂದ ಬೆಳೆಸಿದ್ದಳು. ತನ್ನ ಮಗ ವೇಮನನು ದೇವದಾಸಿಯ ಸಂಗದೊಡನಾಟದಲ್ಲಿದ್ದಾಗ, ರಾಜ ಕುಟುಂಬಕ್ಕೆ ಆ ವೃತ್ತಿ ರೂಢಿಗತವಾದುದರಿಂದ ಅವಳ ಮನಸ್ಸು ಕ್ಷೋಭೆಗೊಂಡಿರಲಿಲ್ಲ. ತನ್ನ ನಾದಿನಿ ಮಲ್ಲಾಂಬೆಯ ಮಗಳಾದ ಮಲ್ಲಮ್ಮನ ಬುದ್ಧಿ ಕೌಶಲ್ಯದಿಂದ ಮಗನು ಸನ್ಮಾರ್ಗದ ಹಾದಿ ಹಿಡಿದಾಗ ಸಮಾಧಾನದ ಉಸಿರು ಬಿಡುವಂತಾಗಿತ್ತು. ಇನ್ನೇನು

ಎಲ್ಲವೂ ಸರಿ ಹೋಗುತ್ತದೆಯೆನ್ನುವಷ್ಟರಲ್ಲಿಯೇ ವೇಮನನ ದೀಕ್ಷೆ-ದಿಗಂಬರತ್ವಗಳ ಆಘಾತಕರ ಸುದ್ದಿಯಿಂದ ತಾಯಿಯು ವಿಹ್ವಲವಾಗಿಬಿಟ್ಟಳು. ಇಷ್ಟೆಲ್ಲವಾದ ಬಳಿಕ, ದಿಗಂಬರದಲ್ಲಿದ್ದ ಮಗನನ್ನು ನೋಡುವುದೇ ಬೇಡವೆಂದು ಆತ ವಾಸವಾಗಿರುವ ಗವಿಯ ಕಡೆಗೂ ಹೋಗಿರಲಿಲ್ಲ. ಕೊನೆಗೆ ಮನಸ್ಸಿನ ಸಮಾಧಾನಕ್ಕಾಗಿ ಕಾಶಿಯಾತ್ರೆಯನ್ನು ಕೈಕೊಂಡಳೆಂದು ತಿಳಿದು ಬರುತ್ತದೆ.

**ಲೋಕ ಸಂಚಾರಿ ವೇಮನ:**

ಸಂತ-ಮಹಂತರನೇಕರು ಈ ಲೋಕವೇ ನನ್ನ ಮನೆ ಇಲ್ಲಿರುವವರೆಲ್ಲರೂ ನನ್ನ ಬಂಧು-ಬಳಗದವರು, ಇವನಾರವ ಇವನಾರವ ಎಂದೆನ್ನದೆ ಇವರು ನಮ್ಮವರು ಇವರು ನಮ್ಮವರು ಎನ್ನುತ್ತಲೇ ಬಾಳಿ ಲೋಕ ಕಲ್ಯಾಣದ ಮಣಿಹ ಹೊತ್ತು ಬಂದವರು. ಧ್ಯಾನ-ತಪಸ್ಸು-ಯೋಗ ಸಾಧನೆಯಲ್ಲಿ ತಲ್ಲೀನನಾದ ವೇಮನ ಅಲ್ಲಲ್ಲಿ ಯೋಗ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿದ. ಕೊಂಡವೀಡುವಿನಿಂದ ತಂಜಾವೂರು ಮಧ್ಯದಲ್ಲಿರುವ ಹಲವಾರು ಗ್ರಾಮಗಳ ಸಮೀಪವಿರುವ ಗುಡ್ಡ ಬೆಟ್ಟಗಳ ಗುಹೆ-ಗಂಪ್ವರಗಳಲ್ಲಿ, ಧರ್ಮಶಾಲೆ। ಛತ್ರಗಳಲ್ಲಿ, ಆಲದ-ಬೇವಿನ-ಹುಣಸೇ ಮರದ ನೆರಳಿನಲ್ಲಿರುವ ಬಯಲಿನಲ್ಲಿಯೇ ವಾಸಿಸುತ್ತಿರಲಿಲ್ಲ. ತಮಗಾಗಿ ಒಂದು ಮಠ-ಮಂದಿರವನ್ನು ಕಟ್ಟಿಸಲಿಲ್ಲ, ಕಟ್ಟಿಸಲು ಆಸ್ಪದವನ್ನು ಕೊಡಲಿಲ್ಲ. ವೇಮನರು ಎಲ್ಲಿ ವಾಸವಾಗುತ್ತಿದ್ದರೋ ಅಲ್ಲಿ ಸತ್ಸಂಗಕ್ಕೆಂದು, ತತ್ತ್ವ- ಜಿಜ್ಞಾಸೆಗೆಂದು ಜನ ಸೇರುತ್ತಿತ್ತು. ಕೂಡಿದ ಜನತೆ ನೀವೆಲ್ಲಿಯವರೆಂದು ಕೇಳಿದರೆ ವೇಮನ ಒಗಟಿನ ರೂಪದಲ್ಲಿ ಹೀಗೆನ್ನುತ್ತಿದ್ದರು.

**ಊರು ಕೊಂಡವೀಡು ವಾಸ ಪಶ್ಚಿಮವೀಧಿ**
**ಮೂಗ ಚಿಂತಪಲ್ಲೆ ಮೊದಲ ಮನೆಯು**
**ಎಟ್ಟಿ ರೆಡ್ಡಿ ಕುಲವು ಅದನೇನು ಹೇಳ್ವುದು**
**ವಿಶ್ವದಾಭಿರಾಮ ಕೇಳು ವೇಮ**

ಎನ್ನುತ್ತಿದ್ದರು. ದೇವರು ಕಣ್ತೆರೆದರೆ ಎಲ್ಲವೂ ಸರಿ ಹೋಗುತ್ತದೆಯೆಂದೆನ್ನುತ್ತಿದ್ದರು. ತಾವು ಸಂಕಲ್ಪಿಸಿದರೆ ಅದೆಲ್ಲ ಸಾಧ್ಯ ಸ್ವಾಮಿ? ಎಂದೊಬ್ಬ ಹಿರಿಯ ಭಕ್ತ!

ಅದಕ್ಕೆ ವೇಮನನ ಉತ್ತರವಿಂತಿದೆ- ಮಳೆ ಬಾರದ್ದಕ್ಕೆ ಕಳವಳಗೊಂಡ ಹಿರಿಯ ಭಕ್ತನು ಕೇಳಿದುದಕ್ಕೆ ಪ್ರತ್ಯುತ್ತರವಿಂತಿದೆ.

**ಹನಿಯು ಬೀಳುವಂದ, ಹರಣ ತೊಲಗುವಂದ**
**ತಿಳಿಯಲಾರ ಘನನು ತಾನಿರಲು**
**ತಿಳಿಯಲಾಗ ಕಲಿಯುಗ ಉಳಿಯುವುದೆಂತು?**
**ವಿಶ್ವದಾಭಿರಾಮ ಕೇಳು ವೇಮ**



**ಆತ್ಮದೊಳಗೆ ಶಿವನ ಅರಿತು ಸಲೆ ಶೋಧಿಸಿ**
**ನಿಶ್ಚಲಾಗಿ ಭಕ್ತಿ ನಿಲಿಸಿದವನು**
**ಸರ್ವ ಮುಕ್ತನಿಹನು ಸರ್ವ ತಾನಾಗುವ**
**ವಿಶ್ವದಾಭಿರಾಮ ಕೇಳು ವೇಮ.**

ನೆರೆದವರೆಲ್ಲರೂ ಮೌನ ತಾಳಿದರು. ವಾತಾವರಣದ ಪ್ರಶಾಂತತೆಯು ಮೂಡಿ ಗಾಢವಾಯಿತು. ಒಂದು ವಿಚಾರ ಇನ್ನೊಂದು ವಿಚಾರದ ಒಂದು ಘಟನೆ ಇನ್ನೊಂದು ಘಟನೆಯ ಮಧ್ಯಂತರ ಅವಧಿಯ ಮಾನಸಿಕ ಕಲ್ಪನೆಯ ಕಾಲವಷ್ಟೆ! ವೇಮನರ ಸೇವಾ ಕಾರ್ಯದಲ್ಲಿ ಪರಮ ಶಿಷ್ಯರಾಗಿ ರಾಮರೆಡ್ಡಿ ಮತ್ತು ನೀಲಕಂಠ ಎಂಬಿಬ್ಬರು ಸದಾ ಸನ್ನದ್ಧರಾಗುತ್ತಾರೆ. ಇವರು ಭಿಕ್ಷಾಟನೆ ಮಾಡಿ ತಂದು ವೇಮನರಿಗೆ ಪ್ರಸಾದ ಮಾಡಿಸುತ್ತಿದ್ದರೆಂದುದಾಗಿ ಎಸ್. ಆರ್. ಪಾಟೀಲರು ಸಂಪಾದಿತ ಗ್ರಂಥದಲ್ಲಿ ಕಂಡರಣೆಗೊಂಡಿದೆ. ಯೋಗಿವರ್ಯರು ಸದಾವಕಾಲವೂ ಧ್ಯಾನ, ತಪಸ್ಸು-ಚಿಂತನೆಗಳಲ್ಲಿಯೇ ಮಗ್ನರಾಗುತ್ತಿದ್ದರೆ ಆಗ ಅನೇಕ ಪವಾಡಗಳನ್ನು ಬೀರಿದ್ದುಂಟು! ಅದು ಇಲ್ಲಿ ಅಪ್ರಸ್ತುತವೆನಿಸುತ್ತದೆ.

ಲೋಕ ಸಂಚಾರಿ ಯಾರಿಗೂ ಹೆದರಲಾರನೆಂಬಂತೆ ವೇಮನ ಅಲೆದಾಡಿದ ಊರು-ಕೇರಿ, ಗಿರಿ-ಗಂಪ್ವರ-ಗುಹೆ-ಧರ್ಮಛತ್ರ- ಆಲ-ಬೇವು- ಹುಣಸೆಮರ, ಈ ಮುಂತಾದವುಗಳ ಲೆಕ್ಕವಿಟ್ಟವರಾರು? ಆದರೂ ಅವರು ತಂಜಾವೂರಿನಿಂದ ಗುಂಟುಪಲ್ಲಿಗೆ, ನೆಲ್ಲೂರು, ಗಂಡಿಕೋಟ, ರಾಜ ಮಹೇಂದ್ರಗಿರಿಗೆ, ಚಂದನೂಲು, ನೆಲ್ಲಚೆರುವು, ಕಟಾರ್ಲುಪಲ್ಲಿ, ಬಳ್ಳಾರಿಯ ಅಲಿಪುರಕ್ಕೆ ಬಂದು ತಂಗಿದರು. ಚಂದನೂರು ಮತ್ತು ಕಟಾರ್ಲುಪಲ್ಲಿ - ಪಾಮೂರುಗಳಲ್ಲಿ ಯೋಗ ಧ್ಯಾನದ ತರಬೇತಿಯ ಕೇಂದ್ರಗಳನ್ನು, ಪ್ರಯೋಗ ಶಾಲೆಗಳನ್ನು ಸ್ಥಾಪಿಸಿದರು. ಸತ್ಸಂಗಗಳನ್ನು ಮೇಳೈಸಿದರು. ಪಾಮೂರು ಗುಹೆಯಲ್ಲಿಯೇ ವಾಸಿಸಿದರು. ಅಲ್ಲಿಯೂ ಈ ತರಬೇತಿಯ ಕೇಂದ್ರವನ್ನು ಸ್ಥಾಪಿಸಿದರು. ಇವರಿರುವೆಡೆಯಲ್ಲ ಭಕ್ತಸ್ತೋಮ ಸೇರುತ್ತಿತ್ತು. ಅನೇಕರು ಯೋಗ-ಧ್ಯಾನಕ್ಕಾಗಿ ವೇಮನರಿಂದ ದೀಕ್ಷೆ ಪಡೆದರು. ಎಲ್ಲ ಜಾತಿಯವರಿದ್ದರು. ಸಾಯಂಕಾಲ ಸತ್ಸಂಗದ ಸವಿಜೇನು ನಡೆಯುತ್ತಿತ್ತು. ಅಲ್ಲಿ ಯೋಗಾಭ್ಯಾಸದ ಶುಚಿ-ರುಚಿ ಯಶಸ್ವಿಯೂ ಆಯಿತು. ಅನೇಕರಿಗೆ ವೇಮನ ಮಹಾಯೋಗಿಯ ದಿವ್ಯ ದರ್ಶನವಾಗಿ ಅವರ ಮನೆತನವೇ ಉದ್ಧಾರವಾಗುವಂತಾಯ್ತು ಎಂದು ಬೇರೆ ಹೇಳಬೇಕಾದುದಿಲ್ಲ. ಸಕ್ಕರೆಗೆ ಇರುವೆ ಮುತ್ತುವಂತೆ ಶ್ರೀ ವೇಮನರ ಮಹಾನ್ ದರ್ಶನಕ್ಕೆಂದು ಜನ ವಿಪರೀತ ಸಂಖ್ಯೆಯಲ್ಲಿ ಬರುತ್ತಿತ್ತು. ನೆರೆದವರೆಲ್ಲರೂ ಭೂಮಿಗೆ ಬಂದ ಭಗವಂತ ಎಂದು ಹಣೆ ಹಚ್ಚಿ ನಮಿಸುತ್ತಿದ್ದರು.

ಯೋಗ ಬಲದಿಂದ ವೇಮನರ ದೇಹವು ಗಟ್ಟಿ ಮುಟ್ಟಾಗಿದ್ದರೂ ವಯಸ್ಸು ಸರಿಯುತ್ತ ಬಂದಿತು. ಅರುವತ್ತೂರರ ವಸಂತ ಕಾಲ. ಅವರು ವಿವಿಧ ಊರುಗಳಿಗೆ ಹೋಗಿ,ಅಲ್ಲಿ ತಿಂಗಳೆರಡು ತಿಂಗಳು ಇದ್ದು ಬರುತ್ತಿದ್ದರಾದರೂ ಮಳೆಗಾಲದಲ್ಲಿ ಮಾತ್ರ ಪಾಮೂರಿನ ಗುಹೆಯಲ್ಲಿಯೇ ವಾಸಿಸುತ್ತಿದ್ದರು. ಪಾಮೂರ ಗ್ರಾಮವೇ ಅವರಿಗೆ ಆಪ್ಯಾಯಮಾನವಾಗಿತ್ತು. ಅಲ್ಲಿಯೇ ವೇಮನರ ಕಾರ್ಯಚಟುವಟಿಕೆ ಸೀಮಿತವಾಗಿತ್ತು. ಯೋಗಿವರ್ಯರು ಹೆಚ್ಚು ಹೆಚ್ಚಾಗಿ ಅಂತರ್ಮುಖಿಗಳಾದಂತೆ, ಅವರ ಪ್ರಭಾವ, ಪವಾಡ ಹೆಚ್ಚು ಹೆಚ್ಚುತ್ತಾ ನಡೆಯಿತು. ಮುಂದೆ ಬರಬರುತ್ತಾ ಮುಂದಿನ ನಾಲ್ಕಾರು ವರ್ಷಗಳಲ್ಲಿ ವೇಮನರ ತತ್ತ್ವವು ಸಾಕಷ್ಟು ಪ್ರಚಾರ ಪಡೆಯಿತು. ವೇಮನ ಪಾಮೂರಿನಲ್ಲಿರುತ್ತ ಕ್ರಿಷ್ಟಿ ಪಾಡ್, ಮಿನಿಕೊಂಡ, ಚಿಟ್ವೇಲ, ಕೊಂಡವೀಡು, ಬಳ್ಳಾರಿ,ಕರ್ನೂಲಗಳಿಗೂ,ಇನ್ನಿತರ ಪೂರ್ವ ಪರಿಚಿತ ಪ್ರದೇಶಗಳಿಗೂ ವರ್ಷದಲ್ಲಿ ಒಂದೆರಡು ಸಲವಾದರೂ ಭೆಟ್ಟಿ ಕೊಡುತ್ತಿದ್ದರು. ಮೌನ, ಧ್ಯಾನ, ವ್ಯಾಖ್ಯಾನಗಳ ಮೂಲಕ ಸಾಧಕರ ಮನದಲ್ಲಿರುವ ಸಂಶಯಗಳನ್ನು ನಿವಾರಿಸುತ್ತಿದ್ದರು. ಒಗಟು–ಒಗಟಾಗಿ ಪದಗಳಲ್ಲಿ ಹೇಳುತ್ತಿದ್ದರು. ಈ ಮಧ್ಯೆ ನೆಲ್ಲಚರುವು, ಕಟಾರ್ಲುಪಲ್ಲಿಗಳಿಗೆ ಒಂದೆರಡು ಬಾರಿ ಹೋಗಿ ಬಂದಿದ್ದರು. ತಮ್ಮ ಕೊನೆಯ ದಿನಗಳು ಅಂದರೆ ಅರುವತ್ತೆಂಟನೆಯ ವಯಸ್ಸಿನವರೆಗೂ ಅವರು ಕಟಾರ್ಲುಪಲ್ಲಿಯಲ್ಲಿಯೇ ನೆಲೆಸಿದರು. ಅಲ್ಲಿಂದ ಬೇರೆ ಕಡೆಗೆ ಎಲ್ಲಿಯೂ ಹೋಗಲಿಲ್ಲ.

**ಯೋಗಿಯ ನಿರ್ವಾಣ:**

೧೪೮೦ ರ ಕಾಲವಾಗಿತ್ತು. ವೇಮನರು ತಮ್ಮ ದೇಹ ತ್ಯಾಗದ ವಿಷಯವನ್ನು ಪರಮ ಶಿಷ್ಯರಾಮರೆಡ್ಡಿಗೆ ತಿಳಿಸಿದ್ದರು. ಅವರ ಆಣತಿಯಂತೆ ಸಮಾಧಿ ರಚನೆಯೂ ಸಿದ್ಧತೆಯಾಗಿತ್ತು. ಅದೂ ಕಟಾರ್ಲುಪಲ್ಲಿಯ ಹೊರವಲಯದ ದಿನ್ನೆಯ ಮೇಲೆ, ಅಸಂಖ್ಯಾತ ಜನರು ಅಲ್ಲಿ ಸೇರಿದ್ದರು. ಆನರು ಸಮಾಧಿ ಸ್ಥಳವನ್ನು ಕಣ್ಣಾರೆ ಕಂಡು ನಿಬ್ಬೆರಗಾದರು. ವೇಮನರು ಅಂದು ತಮ್ಮ ಕುಟೀರದಲ್ಲಿ ಆ ದಿನ ವಿಶೇಷ ಸ್ನಾನ ಮಾಡಿ, ನಿತ್ಯದಂತೆ ಧ್ಯಾನಾದಿ ಕ್ರಿಯೆಗಳನ್ನು ಮುಗಿಸಿದರು. ರಾಮರೆಡ್ಡಿ ಕೊಟ್ಟ ಒಂದು ಬಟ್ಟಲು ಹಾಲು ಸೇವಿಸಿದರು. ಆತ ಅವರಿಗೆ ಹಾಲಿನ ಬಟ್ಟಲು ಕೊಡುವಾಗ ಇದೇ ಕೊನೆಯ ಸೇವೆಯೆಂದು ನೆನಪಾಗಿ ಕಣ್ಣೀರಿಟ್ಟ. ಹೊರಗೆ ಜನರ ಗದ್ದಲವಿತ್ತು. ಮಹಾಯೋಗಿ ವೇಮನ ಯೋಗಿಗಳಿಗೆ ಜಯವಾಗಲಿ!! ಪರಂಜ್ಯೋತಿ ವೇಮನ ಚಿರಾಯುವಾಗಲಿ, ಎಂಬ ಘೋಷಣಾ ವಾಕ್ಯಗಳು ಕೇಳಿ ಬರುತ್ತಿದ್ದವು. ವೇಮನರು ತಮಗಾಗಿ ಸಿದ್ಧಪಡಿಸಿದ ಸಮಾಧಿ ಸ್ಥಳದತ್ತ ಹೆಜ್ಜೆ ಹಾಕಿದರು. ಜನರೂ ಅವರೊಂದಿಗೆ ಹಿಂಬಾಲಿಸಿದರು: ಕಣ್ಣೀರಿಡುತ್ತಾ– 'ನಮ್ಮನ್ನು ಅನಾಥರನ್ನಾಗಿ ಮಾಡಿದೆಯಾ ತಂದೆ? ನಮ್ಮನ್ನು ತೊರೆಯದಿರು, ತೊರೆಯದಿರು



ಎಂದು ಗೋರ್ಗರೆದರು. ಸಮಾಧಿಯನ್ನು ಪ್ರವೇಶಿಸಿ, ಕುಳಿತಲ್ಲಿಯೆ ಕಣ್ಣು ತೆರೆದರು. ನೆರೆದ ಜನಸ್ತೋಮದತ್ತ ಕಣ್ಣು ಬೀರಿದರು. ವರದ ಹಸ್ತವಿತ್ತು ಅಭಯ ಮುದ್ರೆ ದಯಪಾಲಿಸಿದರು. ಇದರಿಂದ ಜನತೆಗೆ ವಿದ್ಯುತ್ ಸಂಚಾರವಾದಂತಾಯಿತು. ಗಂಭೀರತೆ ಪಸರಿಸಿತು. ವೀರಾಸನದಲ್ಲಿಯೇ ಕುಳಿತು ಇನ್ನೊಮ್ಮೆ ಜನತಾ ಜನಾರ್ಧನನಿಗೆ ನಮಿಸಿ 'ಓಂ ನಮಃ ಶಿವಾಯ' ಎಂದು ಶಿವ ಪಂಚಾಕ್ಷರಿ ಮಂತ್ರ ಪಠಿಸಿ ಕಣ್ಣು ಮುಚ್ಚಿದರು.

ಅನಂತರದಲ್ಲಿ ರಾಮರೆಡ್ಡಿಯು ಮುಂದಿನ ವಿಧಿ–ವಿಧಾನಗಳನ್ನು ಪೂರೈಸಿದರು. ಕೂಡಿದ ಜನತೆ ಒಕ್ಕೊರಲಿನಿಂದ–

**ವೇದಾತೀತನು ವೇಮನ ಯೋಗಿ ಕಾಣಾಽ**
**ವೇಮನ ಮಾತೇ ವೇದವು ಕಾಣಾಽ**
**ವೇಮನೆಂಬ ಯೋಗಿ ವಾಸಿಸಿದ ಲೋಕದಿ**
**ಪೂಜೆ ಸಲ್ಲಿಸಿದವರಿಗೆ ಪುಣ್ಯ ಪುರುಷರಿರಾ**
**ಸಲಿಸಿದಷ್ಟು ಪೂಜೆ ಸುಖ ಶ್ರೇಯ ಲಭ್ಯ**
**ವಿಶ್ವದಾಭಿರಾಮ ಕೇಳು ವೇಮ.**

ಎಂದು ಪದ–ಪದ್ಯಗಳನ್ನು ಉಚ್ಚರಿಸುತ್ತಾ ವೇಮನಯೋಗಿ ಮಹಾಯೋಗಿ ಚಿರಾಯುವಾಗಲಿ. ಅವರ ಕೃಪಾಶೀರ್ವಾದ ನಮ್ಮೆಲ್ಲರ ಮೇಲಿರಲಿ; ಎಂದು ಘೋಷಿಸಿದರು.

ವೇಮನರು ಸಮಾಧಿ ಸ್ಥಿತಿಯಲ್ಲಿದಾಗಲೂ ಹೇಳಿದ ಪದಗಳು ಇಂತಿವೆ.

೧ **ಹುಟ್ಟುವವರು ಯಾರು? ಹುಟ್ಟಿದವರು ಯಾರು?**
**ಹುಟ್ಟಿ ಹುಟ್ಟದಂಥ ಪುರುಷರಾರು?**
**ಹುಟ್ಟಿ ಹುಟ್ಟದಿಹುದ ಬೋಧಿಸಲು ಕಾಣೆಭೋ**
**ವಿಶ್ವದಾಭಿರಾಮ ಕೇಳು ವೇಮ.**

೨ **ಬದುಕುವವರು ಯಾರು? ಬದುಕದವರು ಯಾರು?**
**ಬದುಕಿ ಬದುಕದಂಥ ಪ್ರಾಣಿ ಯಾರು?**
**ಬದುಕು ಇರದ ಭ್ರಮೆಯಳಿದು ಕಾಣಿರೋ**
**ವಿಶ್ವದಾಭಿರಾಮ ಕೇಳು ವೇಮ.**

೩ **ಕಟ್ಟುವವರಾರು? ಕಟ್ಟದವರು ಯಾರು?**
**ಕಟ್ಟಿ ಕಟ್ಟದಂಥ ಕರ್ಮಿ ಯಾರು?**
**ಗಟ್ಟಿ ಹಿಡಿದು ಲೇಸ, ಕಣ್ಣು ಬಿಟ್ಟು ನೋಡಿಕೋ.**
**ವಿಶ್ವದಾಭಿರಾಮ ಕೇಳು ವೇಮ.**

೪ **ನೀಡುವವರು ಯಾರೋ? ನೀಡದವರು ಯಾರೋ?**
**ನೀಡಿ ನೀಡದಂಥ ನಿಷ್ಠರಾರೋ?**
**ಪಟ್ಟು ಹಿಡಿದು ಇದರ ಗುಟ್ಟ ಭಾವಿಸಿಕೋ?**
**ವಿಶ್ವದಾಭಿರಾಮ ಕೇಳು ವೇಮ.**

ಎಂದು ಉಸುರಿದವರೇ ಕಣ್ಣು ಮುಚ್ಚುತ್ತಾ ಮುಚ್ಚುತ್ತಾ 'ಓಂ ಶಾಂತಿಃ ಓಂ ಶಾಂತಿಃ ಓಂ ಶಾಂತಿಃ ಎಂದು ಕೊನೆಯುಸಿರೆಳೆದರು. ಸಮಾಧಿಯಲ್ಲಿಯೇ ಚಿನ್ಮಯಾನಂದ ಸುಖಿಯಾದರು.

~೦~

# ೩

# ಮಹಾಯೋಗಿ ವೇಮನರ ಪದಗಳು : ವಿವೇಚನೆ

ತೆಲುಗು ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಮಹಾನ್ ಚಿಂತಕ ವೇಮನ ಚೌಪದಗಳಲ್ಲಿ ಸಹಜವೆಂಬಂತೆ ಸಹಸ್ರ ಸಹಸ್ರಗಟ್ಟಲೇ ರಚಿಸಿದ ಮಹಾಕವಿ. ಆತನ ಎಲ್ಲ ಪದ್ಯಗಳೂ ಮಹೋನ್ನತ ಗುಣವನ್ನು ಹೊಂದಿವೆ. ಪಂಡಿತರೂ ಮೆಚ್ಚಿ ಅಹುದಹುದು ಎನ್ನುವಂತಿವೆ. ಜನಸಾಮಾನ್ಯರಂತೂ ತಲೆದೂಗುವಂತಿವೆ. ವೇಮನ ಆಶುಕವಿ: ಇವನ ಚೌಪದಿಗಳು ಅಷ್ಟೊಂದು ಸತ್ವಯುತ. ಅಟಲವೇದಿ, ಕಂದ, ಸೀಸ ಮತ್ತು ತೇಟಗಳೆಂಬ ಛಂದೋ ಪ್ರಕಾರಗಳಲ್ಲಿದ್ದು; ಅವು ಜನರಾಡುವ ತೆಲುಗಿನ ನುಡಿಗಡಣಗಳಲ್ಲಿಯೇ ಇವೆ. ತೆಲುಗು ದೇಶದ ಜನಸಾಮಾನ್ಯರು ವೇಮನ ಪದ್ಯಗಳನ್ನು ಕಂಠಪಾಠ ಮಾಡಿ ಸಮಯಾನುಸಾರ ಅವುಗಳನ್ನು ಹೇಳಿ ಯಾವುದಕ್ಕೂ ಉದಾಹರಣೆ ನೀಡುತ್ತಾರೆ. ಇವರ ಶೈಲಿ ಸುಲಭ ಮತ್ತು ಜನಸಾಮಾನ್ಯರದ್ದು. ಪದ್ಯಗಳ ಅರ್ಥ ತಾತ್ಪರ್ಯಗಳು ಸುಲಭ ಗ್ರಾಹ್ಯವಾಗುವಂತಿವೆ. ಪ್ರತಿ ಪದ್ಯವನ್ನು "ವಿಶ್ವದಾಭಿರಾಮ ಕೇಳು ವೇಮ" ಅಂಕಿತದೊಂದಿಗೆ ವೇಮನ ಸಮಾರೋಪಗೊಳಿಸುತ್ತಾನೆ. ನಾಲ್ಕು ಸಾಲಿನ ಪದ್ಯಗಳಲ್ಲಿ ಅನುಭವಾಮೃತ ತುಂಬಿ ಇದು ಒಳ್ಳೆಯದು, ಇದು ಒಳ್ಳೆಯದಲ್ಲ ಎಂಬುದನ್ನು ಉದಾಹರಣೆಯೊಂದಿಗೆ ವೇಮನ ಬಿಂಬಿಸಿದ್ದಾರೆ. ಆಡು ಮುಟ್ಟದ ಸೊಪ್ಪಿಲ್ಲ ವೇಮನ ರಚಿಸಲಾರದ ವಿಷಯಗಳೇ ಉಳಿದಿಲ್ಲವೆಂದು ಹೇಳಲು ಅಡ್ಡಿಯಿಲ್ಲ. ಜನರ ಹಿತೋಪದೇಶಗಳೊಂದಿಗೆ ಜನೋಪಯೋಗಿ ಪದ್ಯಗಳು ಇಲ್ಲಿ ಉದಾಹರಣೆ–ಗಳೊಂದಿಗೆ ಹರಳುಗಟ್ಟಿವೆ. ಜನಪದ, ಶಿಕ್ಷಣ, ಕೃಷಿ, ಕಾಯಕ, ದಾನ, ಧರ್ಮ, ಅರ್ಥ, ಕಾಮ, ಮೋಕ್ಷ, ರಾಜಕೀಯ, ಸಮಾಜ, ರಾಜಾಡಳಿತೆ, ಸರ್ಕಾರ, ತೀರ್ಥಯಾತ್ರೆ, ಕ್ಷೇತ್ರ, ದೇವರು, ಗುಡಿ–ಗುಂಡಾರ, ಗೃಹಸ್ಥರ ಬಾಳು, ಸ್ತ್ರೀ (ಮಹಿಳೆ), ಕರ್ಮ, ಕರ್ಮಫಲ, ಸಂಗ, ಸಜ್ಜನರ ಸಂಗ, ಸತ್ಸಂಗ, ಧ್ಯಾನ, ಯೋಗ, ತಪ, ಜ್ಞಾನ, ಅಜ್ಞಾನ, ಮಾತು, ಪ್ರೀತಿ, ಮಮತೆ, ಗುರು, ಶಿಷ್ಯ, ಬಂಧು–ಬಳಗ, ಮಿತ್ರವರ್ಗ, ಅರಿಷಡ್ವರ್ಗಗಳು, ಅರ್ಥ ಸಂಗ್ರಹ, ಕೆಟ್ಟ ಸ್ನೇಹ, ಬ್ರಹ್ಮ ವಿದ್ಯೆ, ಮೇಲು–ಕೀಳರಿಮೆ, ಶೂದ್ರ, ಪುರೋಹಿತ ವರ್ಗ, ಒಕ್ಕಲಿಗ, ಶ್ರೀಮಂತಿಕೆ, ಮಾನವ–ದಾನವ, ಕಾಪು–ಬಡತನ, ಸಿರಿತನ, ಚತುರ್ವರ್ಣ, ಜಾತಿ–ವಿಜಾತಿ, ಮಾತಿನ

ಒಲುಮೆ, ಕಾಮ, ಸಂಸಾರ ಕಲಹ, ದಾಂಪತ್ಯದಲ್ಲಿ ವಿರಸ, ಚೋರತನ, ಜಾರತನ, ವೇಶ್ಯೆಯರು, ವಿಟಪುರುಷರು, ದೇವ ದಾಸಿಯರು, ಜೀವನ ಮತ್ತು ಸಾಧನೆ; ಮೋಕ್ಷ ಮಾರ್ಗ, ಗುರುದೀಕ್ಷೆ– ಬೋಧನೆ, ಯೋಗ, ಅಷ್ಟಾಂಗಯೋಗಗಳು, ಗುರು–ಶಿಷ್ಯರ ಸಂಬಂಧ, ಧ್ಯಾನ, ಪೂಜೆ, ಯೋಗಾಭ್ಯಾಸ, ಸಾಧು ಲಕ್ಷಣ, ಸಹಜ ಸಮಾಧಿ, ಜೀವನ್ಮುಕ್ತಿಯ ಸ್ಥಿತಿ, ಅವಧೂತ ಚರ್ಯೆ, ಅಧ್ಯಾತ್ಮದ ಸುಖಬೋಧೆ, ಪಾಪ–ಪುಣ್ಯ, ಸ್ವರ್ಗ–ನರಕ, ಅಧ್ಯಾತ್ಮದ ಅನುಸಂಧಾನ ಈ ಮುಂತಾಗಿ– ನೂರಿನ್ನೂರು ವಸ್ತು– ವಿಷಯಗಳ ಕುರಿತಾಗಿ ಮಹಾಯೋಗಿ ವೇಮನರು ತಮ್ಮ ಪದ–ಪದ್ಯಗಳಲ್ಲಿ ನಿರೂಪಿಸಿದ್ದಾರೆ. ಇಂತಹ ಹಲವಾರು ಕ್ಷೇತ್ರಗಳ ದಿವ್ಯ ದರ್ಶನ ಮಾಡಿಸುತ್ತವೆ ವೇಮನಯೋಗಿಯ ಪದ–ಪದ್ಯಂಗಳು.

ಕಾಪು ಕೃಷಿ ಕುಟುಂಬದಲ್ಲಿ ಜನಿಸಿದ ವೇಮನ ಓದಿದ್ದು, ಬರೆದದ್ದು ಅಷ್ಟಕ್ಕಷ್ಟೆ! ಅಂತೆಯೇ ಬುದ್ಧಿಗೆ ತೋಚಿದಾಗಲೆಲ್ಲ ಈತ ಪದ್ಯಗಳಲ್ಲಿ ಹೇಳಿದ್ದಾನೆಯೆ ಹೊರತು ಸ್ವತಃ ಬರೆದಿಲ್ಲ. ಎಷ್ಟೊಂದು ನೀತಿಯ ಮಾತುಗಳನ್ನು ಈತ ಹೇಳುತ್ತಾನಲ್ಲ ಎಂದುಕೊಂಡ ಅಭಿಮಾನಿಗಳು ಬರೆದುಕೊಂಡರು. ಹಲವಾರು ಸಂದರ್ಭಗಳಲ್ಲಿ ಇವನ ಸುತ್ತಮುತ್ತ ಪದ್ಯ ಬರೆದುಕೊಳ್ಳುವವರೇ ಸೇರಿರುತ್ತಿದ್ದರಂತೆ. ಈ ಮಹಾನುಭಾವನ ಹತ್ತಿರವೇ ಇರಬೇಕು ಎಂಬ ಹಂಬಲವುಳ್ಳವರಿದ್ದರು. ಅಂದರೆ ಪದ್ಯಗಳನ್ನು ಯಥಾವತ್ತಾಗಿ ಬರೆದುಕೊಳ್ಳಲು ಸಾಧ್ಯ ಎಂಬ ಹೆಚ್ಚುಗಾರಿಕೆ ಅವರದು. ಎಂ. ದೇವರಕೊಂಡಪ್ಪ ೧೦೦೪ ವೇಮನ ಪದ್ಯಗಳ ಪುಸ್ತಕ ಹೊರತಂದದ್ದು ಮೆಚ್ಚಲೇಬೇಕಾದುದು. ಹಾಗೆಯೇ ಅವರಿವರಿಂದ ಸಂಗ್ರಹ– ಸಂಪಾದನೆ ಮಾಡಿ ಪ್ರಕಟಿಸಿದ ದಿ॥ ಎಸ್. ಆರ್. ಪಾಟೀಲರು ೩೪೧೨ ಪದ್ಯಗಳನ್ನು ಹೊರತಂದದ್ದು ಶ್ಲಾಘನೀಯ. ಜನರಲ್ಲಿನ ಮೂಢ ನಂಬಿಕೆ, ಶೋಷಣೆ, ಅನೀತಿ, ದುರಾಚಾರ, ಧರ್ಮಾಚರಣೆ, ಇವೇ ಹಲವಾರು ವಿಷಯಗಳ ಕುರಿತು ಅಟವೆಲದಿ ಛಂದಸ್ಸಿನಲ್ಲಿ ಪದ್ಯ ಹಾಡಿದ್ದು ವೇಮನನ ವಿಶೇಷತೆ.

ವೇಮನರ ಪದ: ಪದ್ಯಗಳು ಕೇವಲ ಮೂರ್‍ನಾಲ್ಕು ಸಾವಿರ ಮಾತ್ರ ಲಭ್ಯವಾಗಿದ್ದು; ಇವರ ಪದ್ಯಗಳ ಸಂಶೋಧನ ಕಾರ್ಯ ತೆಲುಗರಲ್ಲಿ ನಡೆಯಬೇಕಾಗಿದೆ. ಸ್ವತಃ ವೇಮನರೇ ಹೇಳಿರುವಂತೆ ಹದಿನೈದು ಸಾವಿರ, ಹಲವು ಸಾವಿರ ಪದ್ಯಗಳನ್ನು ರಚಿಸಿದ ಬಗೆಯನ್ನು ತಮ್ಮ ಪದ್ಯಗಳಲ್ಲಿ ಹೀಗೆ ಹೇಳಿದ್ದಾಗಿದೆ.

೧ **ಶ್ರೀಕರ ಶಿವತತ್ತ್ವ ಶೀಲನೈ ವೇಮನನ**
**ಹದಿನೈದು ಸಾವಿರ ಪದ್ಯಗಳನು**
**ಲೋಕದಲ್ಲಿ ಪರಿಸೆ ಪಾಕೃತರು ದಡ ಸೇರಲ್ಕೆ**
**ವಿಶ್ವದಾಭಿರಾಮ ಕೇಳುವೇಮ.**



೨ **ವೇಮ ಹಾಡಿದ ಹಲ ಸಾಸಿರ ಪದ್ಯಗಳ**
**ತಪ್ಪನುಳಿದು ಕಂಡು ಒಪ್ಪತಿಳಿದು**
**ಗುಣ ಗುರಿಯರಿತೋದಿ ಗಳಿಸು ವಿದ್ಯೆ ಬುದ್ಧಿ**
**ವಿಶ್ವದಾಭಿರಾಮ ಕೇಳು ವೇಮ.**

೩ **ಸಾಸಿರ ಪದ್ಯಗಳ ಸದ್ಭಕ್ತಿ ವಿವೇಕದಿ**
**ಪಠಿಸುವಂಥ ಪರಮ ಭಕ್ತ ಜನಕೆ**
**ಅವಗತವದು ಮೋಕ್ಷ ಅವರಂಗೈಯೊಳಗೆ**
**ವಿಶ್ವದಾಭಿರಾಮ ಕೇಳು ವೇಮ.**

೪ **ಸಾಸಿರ ವಿಧಗಳರಿ ವೇಮನ ಪದ್ಯಗಳು**
**ಅರ್ಥವೀವವನೆ ಅರಸಿ ನೋಡೆ**
**ನೋಡ ನೋಡಲುಂಟು ಅದ್ಭುತ ಜ್ಞಾನವು**
**ವಿಶ್ವದಾಭಿರಾಮ ಕೇಳು ವೇಮ.**

೫ **ನೀತಿ– ವೈರಾಗ್ಯ – ಭಕ್ತಿ – ವಿನೀತ – ಜನರಿಗೆ**
**ಘಾತುಕರಿಗಲ್ಲದೆ, ಜ್ಞಾನ ಸಂಕಲಿತ ಜನಕೆ**
**ಬರೆದಿರುವಂಥ ಪದ್ಯಗಳು ಸಾವಿರ ಸಂಖ್ಯೆ**
**ಚೇತನ ಹೊಂದಿ ವೇಮನ ಸಾರಿದಿಹದಿ.**

ಇವೆಲ್ಲವನ್ನು ಗಮನಿಸಿದರೆ ಸಾಕಷ್ಟು ಪದ್ಯಗಳ ರಾಶಿಯೇ ಇದ್ದುದು ಕಂಡು ಬರುತ್ತದೆ. ಅವುಗಳನ್ನು ಬೆಳಕಿಗೆ ತರುವ ಕಾರ್ಯ ಇಂದಿನವರ ಮೇಲಾಗಿದೆ. ವಿವಿಧ ವಿಷಯಗಳ ಕುರಿತಾಗಿ ಆಗಿನ ಕಾಲ ಘಟ್ಟಕ್ಕೆ ತಕ್ಕಂತೆ ಹೇಳಿದವುಗಳಾದರೂ ಇಂದಿಗೂ, ಎಂದೆಂದಿಗೂ ಮಾನವನ ಬದುಕಿನ ಮಾರ್ಗದರ್ಶಿಕೆಗಳಾಗಿವೆ. ಯಾವತ್ತೂ ಮೆಲುಕು ಹಾಕುವಂತಿವೆ.

ಜ್ಞಾನೋದಯವಾದ ನಂತರ ತನ್ನವರನ್ನೆಲ್ಲ ತೊರೆದು, ದಾರಿ ತಪ್ಪಿ ನಡೆಯುವವರನ್ನು ಸನ್ಮಾರ್ಗದ ಮೇಲೆ ಮುನ್ನಡೆಸಿದ ಕೀರ್ತಿ ವೇಮನರದು. ಈತ ಬಹು ಸ್ವಾಭಿಮಾನಿ. ತಪ್ಪದೇ ಕರ, ಕಂದಾಯ ಪಾವತಿಸುವವರು ಹಾಲಿನಂಥ ಮನಸ್ಸುಳ್ಳವರು. ಪರರಿಗಾಗಿ ಎತ್ತಿ– ಬಿತ್ತಿ ಬೆಳೆಯುವವರು ಕಾಪು ಜನರು ಎಂದು ತನ್ನ ವಂಶಸ್ಥರನ್ನು ಸಮರ್ಥಿಸಿಕೊಂಡಿದ್ದಾರೆ ವೇಮನ. ಸಾಧ್ವಿ ಶಿರೋಮಣಿಯಂತಹ ಪತ್ನಿ ಇದ್ದರೆ ಅದೇ ಸ್ವರ್ಗ ಸುಖ, ಸ್ವರ್ಗವೆಂಬುದು ಬೇರಿಲ್ಲ ಕಾಣಿರೋ ಎಂದಿದ್ದಾನೆ. ಶೀಲವಿಲ್ಲದ ಹೆಂಡತಿಯ ಸಹವಾಸ ಯಮದೂತನ ಸಖ್ಯ ಮಾಡಿದಂತೆ ಎಂದುದಾಗಿ ಪದ್ಯದಲ್ಲಿ ಹೇಳಿ ಆತಂಕಪಟ್ಟಿದ್ದಾನೆ. ಸಂತ ವೇಮನರ ಪದ್ಯಗಳು ಜನಸಾಮಾನ್ಯರ,

ಬಲ್ಲಿದರ, ಶ್ರೀಮಂತರ ನಾಲಿಗೆಯಲ್ಲಿ ಹರಿದಾಡುತ್ತಾ ಮುದ ನೀಡುತ್ತಿರುವುದು ಸಣ್ಣ ಮಾತೇನಲ್ಲ. ವೇಮನರ ಪ್ರತಿಯೊಂದು ಪದ್ಯ ವೇದವಾಕ್ಯವಿದ್ದಂತೆ. ವೇಮನ ಏನನ್ನೇ ಹೇಳಿರಲಿ, ಆದರೆ ನಮ್ಮ ಕಾಯಕ ನಾವು ಬಿಡುವುದಿಲ್ಲವೆಂದು ಕೆಲವರು ಅಸತ್ಯ, ಅನಾಚಾರ, ಭ್ರಷ್ಟಾಚಾರ, ಶೋಷಣೆಯಲ್ಲಿ ತೊಡಗಿರುತ್ತಾರಲ್ಲ ಅವರು ಈಗಲಾದರೂ ತಪ್ಪು ತಿದ್ದಿಕೊಂಡರೆ ಬಾಳು ಹಸನಾದೀತು!! ಕೆಲವೇ ಕೆಲವು ಪದ್ಯಗಳನ್ನು ಕೊಟ್ಟು ವಿಶದೀಕರಿಸಲು ಪ್ರಯತ್ನಿಸಲಾಗಿದೆ.

ಮಾತು ಹೇಗಿರಬೇಕೆಂಬುದಕ್ಕೆ ವೇಮನ ಕೊಡುವ ಪದಗಳು ಇಂತಿವೆ.

೧ **ಭಾಷೆಯಾಡದಿರಲು ದೇಶ ಮೆಚ್ಚದಯ್ಯ**
**ಭಾಷೆಯಾಡುವಾಗ ಬೇಕು ಹೊಣೆಯು**
**ಭಾಷೆ ಹಿರಿಮೆಯರಿತು ಈಶನರಿಯಬೇಕು**
**ವಿಶ್ವದಾಭಿರಾಮ ಕೇಳು ವೇಮ.**

೨ **ಮಾತು ಮುನ್ನ ಅರಿತು ಮತ್ತೋರ್ವನ ನುಡಿಗೆ**
**ಪ್ರತಿ ನುಡಿಯೆ ಅಮಿತ ಸಂತಸಕರ**
**ಮನವರಿಯದೆ ಒಳಗೊಳಗೆ ತಳಮಳವೇಕೆ?**
**ವಿಶ್ವದಾಭಿರಾಮ ಕೇಳು ವೇಮ.**

೩ **ಡೋಂಗಿ ಮಾತನಾಡೆ ದೊರಕವುದೇ ಮೋಕ್ಷ?**
**ಆಗು ಹೋಗದಂಥ ಕೂಗು ಹೊಲ್ಲ**
**ಸದ್ಗುರುವಿನ ಚಿನ್ಹೆಯೆಲ್ಲ – ದುರ್ಗುಣಿಯರು**
**ವಿಶ್ವದಾಭಿರಾಮ ಕೇಳು ವೇಮ.**

೪ **ಅಲ್ಪನಾಡುತ್ತಿದ್ದ ಆಡಂಬರದ ನುಡಿ**
**ಒಳ್ಳೆಯವನಾಡುವ ಮಧುರ ನುಡಿ**
**ಮೊಳಗುವುದೇ ಹೊನ್ನು ಕಂಚು ಧ್ವನಿಸುವಂತೆ**
**ವಿಶ್ವದಾಭಿರಾಮ ಕೇಳು ವೇಮ.**

ಮಾತು– ಮಾತಿಂಗೆ ಹೋರುವುದು ಬೇಡ, ವಾದ–ವಿವಾದಗಳೂ ಬೇಡ. ಮಾತು ವಿನಯದಿಂದ ಕೂಡಿರಬೇಕು. ಇಬ್ಬರಿಗೂ ನೆಮ್ಮದಿ– ಸಮಾಧಾನ ಮೂಡು ವಂತಿರಬೇಕು. ಎದುರಾಳಿಯ ಮಾತಿನ ಮರ್ಮವನ್ನರಿತು ಮಾತನಾಡುತ್ತಿರಬೇಕು. ವ್ಯವಹಾರಿಕವಾಗಿಯೂ ಯಾರಿಗೂ ನೋವಾಗದಂತಿರಬೇಕೆಂಬುದಾಗಿ ಮಾತಿನ ಮಾಲೆಯನೇ ತನ್ನ ಪದ್ಯಗಳಲ್ಲಿ ಪೋಣಿಸಿದ್ದಾನೆ.



೧ **ಮಾತು ಎಲ್ಲ ಸುಳ್ಳು ಮನಸು ಮತ್ತೆ ಡೊಂಕು**
**ಇಂತಿಪ್ಪ ಪ್ರಾಣಿಗೇಕೆ ಬದುಕು?**
**ಮಾತು ಸತ್ಯವಿರಲು ಮತ್ತೆ ಶತಾಯುಷಿಯು**
**ವಿಶ್ವದಾಭಿರಾಮ ಕೇಳು ವೇಮ.**

೨ **ಅಧಿಕ ಜನರ ಜೊತೆಗೆ, ಆಪ್ತ ಜನರ ಜೊತೆಗೆ**
**ಪರದ ಗುರುತನರಿತು ವೇಳುತಿರಲು**
**ಬರುವುದು ಖೊಟ್ಟಿತನ; ಹೆಚ್ಚಿ ಗಾಂಭೀರ್ಯವು**
**ಮಹಿಮೆ ಹಾನಿಯುಂಟು, ಮಹಿಲಿ ವೇಮ.**

೩ **ಉಡಾಫೆಯ ಬಾಯಿ ಉಬ್ಬಿಕೊಂಡು ಇಹುದು**
**ಅದನು ಇದನು ತಿನಲು ಮೊದಲು ಮಾಳ್ಪ**
**ಮರಳದಿನಿತು ಬುದ್ಧಿ; ಮರ್ಯಾದೆ ಹೋಹುದು**
**ವಿಶ್ವದಾಭಿರಾಮ ಕೇಳು ವೇಮ.**

ಹೀಗೆ ಬೇಕಾದಷ್ಟು ಮಾತಿನ ಬಗೆಗೆ ವೇಮನನ ಪದ್ಯಗಳಿವೆ. ಸುಳ್ಳು ನುಡಿಯುತ್ತ, ಕೊಂಕು ಮನಸ್ಸು ಹೊಂದಿದವನ ಬಾಳು ಏತಕ್ಕಾಗಿ? ಸತ್ಯ ಪರನಾಗಿರಲು ಮಾತ್ರ ಅವನು ಪೂರ್ಣಾಯುಷಿಯಾಗುತ್ತಾನೆ. ಮಾತು ಮಿತವಾಗಿರಬೇಕು ಮತ್ತು ಹಿತಮಿತವಾಗಿರಬೇಕು. ನಿಜ ಮಹಾತ್ಮರೊಡನೆ ಮಾತ್ರ ನಿಜವನ್ನು ಆಡಬೇಕು. ಹಾಗೆ ಮಾಡದೆಯೇ ಸಿಕ್ಕ ಸಿಕ್ಕವರೊಡನೆ, ತನ್ನ ಆಪ್ತರೊಡನೆ ಪ್ರತಿಷ್ಠೆಗೋಸುಗ ಪರವನ್ನು ಕುರಿತು ಗಳಪಿದರೆ, ಕೇಡು ತಪ್ಪದು. ಇದರಿಂದ ಮಹಿಮೆಗೆ ಹಾನಿಯುಂಟೆಂದ ವೇಮನ. ಉಡಾಫೆಯ ಮಾತುಗಳನ್ನಾಡುವುದು ಉಚಿತವಲ್ಲ. ಬಾಯಿತುಂಬ ಮೃಷ್ಟಾನ್ನ ಸವಿಯುವುದಕ್ಕಾಗಿಯೋ? ಅಂತಹ ನಾಲಗೆಯ ರುಚಿಯವನಿಗೆ ಬುದ್ಧಿಯೂ ಬರದು, ಮರ್ಯಾದೆಯೂ ಹಾಳು. ಹೀನ ಬುದ್ಧಿಯ ಮಾತುಗಳಿಂದ ತನಗೂ ಕೇಡು, ಇತರರಿಗೂ ಹಾನಿ ವೃದ್ಧಿಯಾಗುತ್ತದೆ ಎಂಬುದರ ಎಚ್ಚರಿಕೆಯನ್ನು ವೇಮನನು ಈ ಪದ್ಯಗಳ ಮೂಲಕ ಅರುಹಿದ್ದಾನೆ.

ತೀರ್ಥಯಾತ್ರೆ ಮಾಡುವವ, ಗುಡಿ–ಗುಂಡಾರಗಳನ್ನು ಸುತ್ತುವವರನ್ನು ಕಂಡು ಹೇಳಿದ ವೇಮನರ ಪದಗಳು ನಮಗೆ ದಾರಿದೀಪದಂತಿವೆ. ಅವುಗಳನ್ನು ಅರಿತು ಆಚರಿಸಿದವರ ಬಾಳು ಸ್ವರ್ಗ ಸುಖವಾಗುತ್ತದೆ. ಇಲ್ಲದಿರೆ ನರಕ ಯಾತನೆಯೇ ಗತಿ!

೧ **ಕಲ್ಲು ಬೊಮ್ಮಗೇಕೆ ಕೆಲ ಬಣ್ಣದ ವಸ್ತ್ರ**
**ಗುಡಿ ಗೋಪುರವೆಲ್ಲ ಕಂಭ ಮತ್ತೆ**

**ಬಟ್ಟೆ ಅನ್ನ ತಾನು ಬಯಸುತಿಹನೇ ದೇವ?**
**ವಿಶ್ವದಾಭಿರಾಮ ಕೇಳು ವೇಮ.**

೨ **ಕೂಳು ಹಾಳು ಮಾಡಿ ಗುಡಿಯನೆ ಆಶ್ರಯಿಪ**
**ಅಂತೆ ಬ್ರಹ್ಮ ಬರೆದ ಅವರ ಹಣೆಗೆ**
**ತೊಯಜಾಕ್ಷಿಯ ಸೇರೆ ದೋಷಗಳೇನುಂಟು?**
**ವಿಶ್ವದಾಭಿರಾಮ ಕೇಳು ವೇಮ.**

೩ **ಸುತ್ತಿ ಗೋಪುರಗಳ, ಸ್ನಾನಗಟ್ಟೆ ತೇರು**
**ಪತ್ರಿವನ ಗುಡಿಗಳು ಪೊಳೆಯುತಿಹವು**
**ದೇವನ ಬಳಿಗೆ ಹೋಗೆ ದೈನ್ಯ ಪಟ್ಟುಕೊಳ್ಳುವ**
**ವಿಶ್ವದಾಭಿರಾಮ ಕೇಳು ವೇಮ.**

೪ **ದೇವ ಗುಡಿಗಳಲ್ಲಿ ತೀರ್ಥ ಕ್ಷೇತ್ರದಲ್ಲಿ**
**ಮೂಲವರಿಯದಿರಲು ಮುಕ್ತಿಯಿಲ್ಲ**
**ಆತ್ಮ ಮೂಲವನರಿಯದೆ, ಅದನೆಂತು ತಿಳಿವನು?**
**ವಿಶ್ವದಾಭಿರಾಮ ಕೇಳು ವೇಮ.**

೫ **ಶಿವನೆಂದು ಭ್ರಮಿಸಿ ಶಿಲೆಗೆ ಶರಣೆಂಬಿರಿ**
**ಮೂರ್ಖ ಜೀವಿಗಳೇ ಮೋಹ ಬಿಡಿರಿ**
**ಜೀವದೊಳಿರುತಿಹುದು ಶಿಲೆಯೊಳಗೇನುಂಟು?**
**ವಿಶ್ವದಾಭಿರಾಮ ಕೇಳು ವೇಮ.**

೬ **ಶಿವನು ಇರುವನೆನುತೆ; ಶಿಲೆಗಳಿಗೆರಗುವ**
**ಮೂರ್ಖ ಜೀವಿಗಳೇ ಮೋಹ ಅಳಿಯಿರಿ**
**ಜೀವಿಯಲ್ಲಿಯೇ ಹೊರತು ಶಿಲೆಯೊಳಗೇನುಂಟು?**
**ವಿಶ್ವದಾಭಿರಾಮ ಕೇಳು ವೇಮ.**

೭ **ಬ್ರಹ್ಮಾಂಡವೇ ದೇಹ, ಪ್ರಾಣವೆನಲು ಗಾಳಿ**
**ಕಣ್ಣುಗಳು ರವಿಚಂದ್ರ, ಗೌರವವಿದು**
**ಇದಕ್ಕಿಂತ ಬ್ರಹ್ಮ ಇರುವುದೇನು ಬೇರೆ?**
**ವಿಶ್ವದಾಭಿರಾಮ ಕೇಳು ವೇಮ.**

೮ **ತನ್ನಾತ್ಮದಲ್ಲಿ ದೈವವಿರುವಾಗ**
**ತೀರ್ಥಯಾತ್ರೆಗೆಂದು ಇಳೆಯ ತಿರುಗುವ ನರ**



**ಗಂಧದ ಕಡ್ಡಿಗಳನು ಕತ್ತೆ ಹೊತ್ತ ಚಂದ**
**ವಿಶ್ವದಾಭಿರಾಮ ಕೇಳು ವೇಮ.**

೯ **ದೇಹದೊಳಗೆ ಇಷ್ಟದೇಹಿ ದೇವರನ್ನು**
**ಕಂಡುಕೊಂಡ ಬುಧರು ತೀರ್ಥಯಾತ್ರೆ**
**ಗೆಯ್ಯರಯ್ಯ ಜಗದಿ; ಆತ್ಮರೂಪ ತಿಳಿದು**
**ವಿಶ್ವದಾಭಿರಾಮ ಕೇಳು ವೇಮ.**

ಈ ಮುಂತಾದ ಪದ್ಯಗಳನ್ನು ನಿರುಕಿಸಿದರೆ ದೇಹವೇ ದೇವಾಲಯ, ಅರಿವೇ ಗುರು, ಆತ್ಮವೇ ಪರಮಾತ್ಮ, ಶುದ್ಧ ಮನಸ್ಸಿನಿಂದ ನೀವಿರುವ ಸ್ಥಳದಲ್ಲಿಯೇ ಧ್ಯಾನ– ನಾಮಸ್ಮರಣೆ ಮಾಡುತ್ತ. ಕಾಯಕದೊಳು ತೊಡಗಿ ತಾನುಂಡು, ದೇವನಿಗರ್ಪಿಸಿ, ಉಳಿದುದನ್ನು ದಾಸೋಹ ಮಾಡಬೇಕು. ಅಂದಾಗ ಅದು ದೇವರಿಗೆ ತಲುಪಿದಂತೆ. ಇಲ್ಲದ ದೇವರನ್ನು ತಲೆಯಲ್ಲಿ ಸೃಷ್ಟಿಸಿಕೊಂಡು ತೀರ್ಥಯಾತ್ರೆ ಮಾಡುವುದರಿಂದ ದಣಿವು ಬರುವುದೇ ಹೊರತು ಯಾವುದೇ ಪ್ರತಿಫಲ ಸಿಗಲಾರದೆಂದು ವ್ಯಂಗೋಕ್ತಿಯಲ್ಲಿ ನುಡಿದಿದ್ದಾರೆ ವೇಮನಯೋಗಿ. ಶಿವನು ಶಿಲೆಯಲ್ಲಿಲ್ಲ, ಕಲ್ಲು ಕಟ್ಟಿಗೆಯ ಮೂರ್ತಿಗಳಲ್ಲಿಲ್ಲ, ಗುಡಿ–ಗುಂಡಾರಗಳಲ್ಲಿಯೂ ಇಲ್ಲ; ಆತನಿರುವದು ಜೀವಿಗಳಲ್ಲಿ, ಸಕಲ ಚರಾಚರ ಪ್ರಾಣಿ– ಪಕ್ಷಿ– ಕೀಟಾದಿಗಳಲ್ಲಿ, ದೀನ– ದಲಿತ– ಅನಾಥರಲ್ಲಿರುವನು. ಅವರಿಗೆ ಅನ್ನ– ಜ್ಞಾನ ದಾಸೋಹವನ್ನು ಮನಃ ಪೂರ್ವಕವಾಗಿ ಮಾಡಿದ್ದೇಯಾದರೆ, ಅದು ದೇವರಿಗೇ ಸಲ್ಲುತ್ತದೆ ಎಂಬ ಉದಾತ್ತ ನೀತಿಯ ಮಾತನ್ನಾಡಿದ್ದಾರೆ ವೇಮನ.

ಮೈಲಾರ ಸುತ್ತಿ ದಣಿಯುವುದಕ್ಕಿಂತ ಮನೆಯೊಳಿರುವ ಅಥವಾ ಹೆತ್ತ ತಾಯಿ–ತಂದೆ– ಗುರು–ಹಿರಿಯರನ್ನು ಮನಃ ಪೂರ್ವಕವಾಗಿ ಸೇವೆ ಮಾಡುವುದರಿಂದ ದೇವರಿಗೆ ಸಲ್ಲುತ್ತದೆ. ಕಾಶೀ–ರಾಮೇಶ್ವರಕ್ಕೆ ಹೋಗುವುದಕ್ಕಿಂತ ಮನೆಯಲ್ಲಿರುವ ತಂದೆ– ತಾಯಿಗಳೇ ಕಾಶಿ ರಾಮೇಶ್ವರವಿದ್ದಂತೆ; ಮಕ್ಕಾ–ಮದೀನಾ ಇದ್ದಂತೆ ಎಂದುದಾಗಿಯೂ ಕೆಲವು ಪದ್ಯಗಳ ಮೂಲಕ ವೇಮನ ಹೇಳಿರುವರು.

೧ **ತಾಯಿ–ತಂದೆ ತಿಳಿಯೆ ಮೊದಲ ಗುರುವು**
**ಪಾರ್ವತಿ ಭವರೆಲ್ಲ ಪರಮ ಗುರುವು**
**ಕೂಲಿಕೊಳ್ಳುವವನ ಗುರುವೆನಲು ದ್ರೋಹವು**
**ವಿಶ್ವದಾಭಿರಾಮ ವೇಮ ಕೇಳು.**

೨ **ತಾಯಿಯೇ ಪಾರ್ವತಿಯು ತಂದೆಯೇ ಶಂಭುವು**
**ಪ್ರಮಥ ಗಣವು ಅಖಿಲ ಬಂಧು ಬಳಗ**

**ತಾನು ಹುಟ್ಟಿದ ಮನೆ ತನಗೆ ಕೈಲಾಸವು**
**ವಿಶ್ವದಾಭಿರಾಮ ವೇಮ ಕೇಳು.**

**೩ ತಾಯಿ– ತಂದೆಯರೇ ತನಗೆ ಗುರುವು ದೈವ**
**ತಾಯಿ–ತಂದೆಯರೇ ತನಗೆ ಜೋಡು**
**ತಾಯಿ– ತಂದೆಯಿಂದ ತನುವು ಆಯಿತಲ್ಲ**
**ವಿಶ್ವದಾಭಿರಾಮ ಕೇಳು ವೇಮ.**

**೪ ತಾಯಿ–ತಂದೆ ಹಿತರು ಬಂದು–ಬಳಗವೆಲ್ಲ**
**ಒಳಿತು ಕೋರಿ ಪರನ ಇರವ ನೋಡಿ**
**ಕನ್ನೆ ಕೊಡುವರಷ್ಟೆ? ಭಾಗ್ಯ ಕೊಡಲರಿಯರು**
**ವಿಶ್ವದಾಭಿರಾಮ ಕೇಳು ವೇಮ.**

ಈ ನಾಲ್ಕು ಚೌಪದಿಗಳನ್ನು ಗಮನಿಸಿದರೆ ತಾಯಿಯೇ ಮನೆಯ ಮೊದಲ ಗುರು ಮತ್ತು ಅರಿವು ಮೂಡಿಸುವ ದೇವತೆ. ತಂದೆಯೂ ಬಂಧು, ಮಾರ್ಗದರ್ಶಕ ಇಬ್ಬರೂ ಹೆತ್ತ ಮಗುವಿನ ಪಾಲನೆ–ಪೋಷಣೆ ಮಾಡಿ ವಿದ್ಯಾ–ಬುದ್ಧಿ ಸಂಸ್ಕಾರಗಳನ್ನು ನೀಡುವರು. ಮಗು ಬೆಳೆದು ದೊಡ್ಡದಾದ ಮೇಲೆ ತಂದೆ–ತಾಯಿಗಳ ಋಣವನ್ನು ತೀರಿಸಬೇಕಾದದ್ದು ಆತನ /ಆಕೆಯ ಕರ್ತವ್ಯ. ಅಲ್ಲದೇ ತಾಯಿ–ತಂದೆಗಳಲ್ಲಿಯೇ ದೇವರನ್ನು ಕಾಣು, ಗುರುವನ್ನಾಗಿ ಸ್ವೀಕರಿಸಿ ನಿಮ್ಮ ಬದುಕನ್ನು ಚೆನ್ನವಾಗಿಸಿಕೊಳ್ಳಿರೆಂದು ಹಿತ ನುಡಿದ ಬಗೆಯು ಇವುಗಳಲ್ಲಿ ಕೆನೆಗಟ್ಟಿದೆ.

**ಒಕಲಿಗ (ಕಾಪು) :**

ಒಕ್ಕಲುತನ ಮಾಡುವವರು ಮೃದು ಸ್ವಭಾವದವರು, ಆದರೆ ಚಳಿ, ಮಳೆ, ಗಾಳಿ, ಬಿಸಿಲೆನ್ನದೆ ಕಠಿಣ ಪರಿಶ್ರಮದಿಂದ ದುಡಿದು, ದೇಶದ ಜನತೆಗೆ ಅನ್ನ ಹಾಕುವವರು. ಇವರು ಪರರಿಗಾಗಿ ಉತ್ತಿ ಬಿತ್ತಿ ಧಾನ್ಯ ಬೆಳೆದು ದೊರೆಗೆ, ಅಥವಾ ಸರ್ಕಾರಕ್ಕೆ ವಶವಾಗುತ್ತಾರೆಂದು ಯೋಗಿ ವೇಮನ ವ್ಯಂಗ್ಯವಾಗಿ ನುಡಿದಿದ್ದಾರೆ. ರೈತ ಬೆಳೆದ ಧಾನ್ಯವನು ಅಧಿಕಾರಿ ವರ್ಗದವರುಂಡು ಅವನಿಗೇ ದ್ರೋಹ ಬಗೆಯುತ್ತಾರೆಂದು ಅಂದು ೧೫ ನೇ ಶತಮಾನದಲ್ಲಿ ಹೇಳಿದ ಮಾತು ಇಂದಿಗೂ ಸತ್ಯವೆನಿಸುತ್ತದೆ. ಕುಲಕರ್ಣಿ ಅಥವಾ ತಲಾಠಿ, ಮಾಮಲೇದಾರ, ಶಿರಸ್ತೇದಾರರು ಇಲ್ಲಸಲ್ಲದ ಆರೋಪ ಮಾಡಿ ಅವರಿಂದ ಹಣ ಕೀಳುತ್ತಾರೆಂಬುದನ್ನು ನಾವೀಗಲೂ ಕಾಣುತ್ತೇವೆ. ಲಂಚ ವಂಚನೆಯ ಜಾಲ ಎಗ್ಗಿಲ್ಲದೇ ನಡೆಯುತ್ತ ಬಂದಿದೆ. ಅದಕ್ಕೇಂದೇ ಕಂಡ ಸತ್ಯವನ್ನು ವೇಮನ ತನ್ನ ಪದ್ಯಗಳಲ್ಲಿ ಹೇಳಿದ್ದು ಹೀಗಿದೆ–



**ಕರಣಿಕ ಧನಿಕನಿರಲು, ಕಾಪುರೆಲ್ಲ ಕೂಡಿ**
**ಬಾಗುತಿಹರು, ಮನಸು ಬಂದ ಹಾಗೆ,**
**ನಿಷ್ಠುರ ಕರಣಿಕನಿರಲು, ನಿನ್ನ ಮಕ್ಕಳೆನುವರು**
**ವಿಶ್ವದಾಭಿರಾಮ ಕೇಳು ವೇಮ.**

**ಪರರಿಗಾಗಿ ಭೂಮಿ ಉತ್ತಿ ಬಿತ್ತಿ ಬೆಳೆದು**
**ಅವನಿಪತಿಗೆ ವಶ್ಯವಾಗಿ ಇಹನು,**
**ಹಾಲಿನಂಥ ಕುಲ ಜನವನು ಕಾಪು ಅರಿಯೆ**
**ವಿಶ್ವದಾಭಿರಾಮ ಕೇಳು ವೇಮ.**

**ಬೆಳೆವ ಮಾನಗಳಿಗೆ, ಬೈಗುಳದ ಮಾತಿಗೆ**
**ಕಾಪು ಜಗಳಗಳಿಗೆ ಖಡ್ಗದಂತೆ**
**ಮೂರು ಮಾನೆಯ ಮೇಲೆ ಮೂರು ಜಗಗಳೆನಲು**
**ವಿಶ್ವದಾಭಿರಾಮ ಕೇಳು ವೇಮ.**

**ಶೇಖ, ಸಯ್ಯದ ಮೊಗಲ, ಶೋಭಿತ ಪಠಾಣರು,**
**ತುರುಕರು ದೊರೆತನವ ತಾವು ಮಾಡಿ,**
**ಬರುಬರುತ ರೈತ ಬಂಧುವಾದ ಪೂಜ್ಯ**
**ವಿಶ್ವದಾಭಿರಾಮ ಕೇಳು ವೇಮ.**

ರೈತ ದೇಶದ ಬೆನ್ನೆಲುಬು ಇದ್ದಂತೆ, ಆತನಿದ್ದರೆ ಸುಸಮೃದ್ಧಿ; ಇಲ್ಲದಿರೆ ಇತರರ ಬವಣೆ ಹೇಳತೀರದು. ಆಳ್ವಿಕೆಯ ಪ್ರಭುಗಳೂ ರೈತನಿಗೆ ತಲೆಬಾಗಬೇಕು. ಏಕೆಂದರೆ ಕಾಸಿದ್ದರ ಕೈಲಾಸವೆಂಬುದು ಹುಸಿ ನೋಡಾ! ಏಕೆಂದರೆ ಕೈ ಕೆಸರಾದರೆ ಮಾತ್ರ ಬಾಯಿಗೆ ಮೊಸರಲ್ಲವೇ? ಆತ ಒಕ್ಕದಿರೆ ಬಿಕ್ಕುವುದು ಈ ಜಗವೆಲ್ಲ ಎಂಬ ಮಾತು ಪ್ರಸಿದ್ಧವಾಗಿದೆ. ಅದು ಕಾರಣ ತುರುಕರು ಈ ದೇಶದ ಅಧಿಪತಿಗಳಾಗಿ ಬಂದರು, ದೊರೆಗಳಾಗಿ ಆಳಿದರು. ದರಬಾರ ನಡೆಸಿ ಕೊನೆಗೆ ರೈತರಿಗೆ ಶರಣಗತರಾಗಿ, ರೈತ ಬಂಧುವಾಗಿ ತಳವೂರಿದರು.

**ಕೃತಜ್ಞತೆ, ಸಮದರ್ಶಿತ್ವ– ಸಂಯಮಃ**

ಒಬ್ಬನು ತನಗೆ ಮಾಡಿದ ಒಳಿತನ್ನು ಸ್ಮರಿಸುವುದು ಸಜ್ಜನಿಕೆಯ ಲಕ್ಷಣ. ಉಪಕಾರ ಸ್ಮರಣೆಯಿಂದ ಸದ್ಭಾವವುಂಟಾಗುತ್ತದೆ. ಪರಸ್ಪರರಲ್ಲಿ ಪ್ರೀತ್ಯಾದರಗಳು ವರ್ಧಿಸುತ್ತವೆ. ತಮಗೆ ಒಳಿತು ಮಾಡಿದಾಗ, ಅದನ್ನು ಮರೆಯಬಹುದೆಂಬ ಹೆದರಿಕೆಯಿಂದ ಬೇಗನೇ ಪ್ರತ್ಯುಪಕಾರ ಮಾಡಿ ಸಜ್ಜನರು ಮರ್ಯಾದೆಯನ್ನು ಕಾಣುವರು ಎಂಬುದಾಗಿ ವೇಮನರು ತಮ್ಮ ಪದಗಳಲ್ಲಿ ಹೇಳಿದುದು ಹೀಗೆ–

**ಮರೆವೆಯೆಂದು ತಿಳಿದು, ಮನದಿ ಸುಜನರೆಲ್ಲ**
**ಯಾರೋ ಗೆಯ್ದ ಮೇಲ್ಮೈ ಎಂಥದಿರಲಿ?**
**ಮರಳಿ ಮೇಲ್ಮೆ ಬಗೆದು ಮರ್ಯಾದೆ ಕಾಣುವುದು**
**ವಿಶ್ವದಾಭಿರಾಮ ಕೇಳು ವೇಮ.**

**ಮರೆಯಬೇಕು ಪಾಪ ಸಂಗತಿ,**
**ಮರೆಯುತಿರಬೇಕು ಯುದ್ಧವ ಮತ್ತಿ ಜಗದೋಳ್**
**ಮರೆಯಬೇಕು ಪರರ ದೋಷವ**
**ಮರೆಯಬೇಡ ಪರರ ಮೇಲ್ಮೆಯ ಮಹಿಯಲಿ ವೇಮ.**

**ತನಗಿತ್ತ ವಸ್ತು ಪರರಿಗಿತ್ತುದೊಂದೆ**
**ಕಾಣದನುಭವಿಸುತಿರೆ, ಕಡು ಚೋದ್ಯವು?**
**ತನ್ನ ಸತಿಯ ಮಾರಿ ದಾಸಿ ರಕ್ಷಿಪ ರೀತಿ.**
**ವಿಶ್ವದಾಭಿರಾಮ ಕೇಳು ವೇಮ.**

ಅಪಕಾರ ಅಥವಾ ಪಾಪವೆಸಗಿದವರನ್ನು, ಪರರ ದೊಷವನ್ನು, ಯುದ್ಧವನ್ನು ಮರೆಯಬೇಕು. ಆದರೆ ಪರರುಪಕಾರವನ್ನೆಂದೂ ಮರೆಯಬೇಡ ಎಂದುದಾಗಿ ವೇಮನ ಎಚ್ಚರಿಕೆ ನೀಡಿದ್ದಾನೆ. ಸರ್ವರಲ್ಲೂ ಸಮಾನತೆಯನ್ನು ಕಾಣು ಮನುಜನೇ ಹೆಂಡತಿ, ಮಕ್ಕಳು, ಪತಿ; ಪತ್ನಿಯಲ್ಲಿ ಆತ್ಮವು ಒಂದೇಯಾಗಿರುತ್ತದೆ. ಭಿನ್ನತೆಯಿರುವುದು ಕೇವಲ ರೂಪದಲ್ಲಿ ಮಾತ್ರ. ಇದೇ ರೀತಿ ಧರೆಯಲ್ಲಿರುವ ಜೀವ–ಜಂತುಗಳನ್ನು ತನ್ನಂತೆಯೇ ಕಾಣು ಅವರಿವರೆನ್ನದೇ ಎಲ್ಲರೂ ನನ್ನವರೆಂಬ ಭಾವವಿರಲಿ. ಇದುವೇ ಸಮದರ್ಶಿತ್ವ.

ನಾನೇ ಬೇರೆ, ಇತರರು ಬೇರೆ ಎಂಬ ಭಾವ ಇರಲೇಬಾರದು. ಪರರನ್ನು ತನ್ನಂತೆಯೇ ಕಾಣುವುದು. ಹೆಣ್ಣುಮಕ್ಕಳನ್ನು ತಾಯಿ, ಸಹೋದರಿಯರಂತೆ ಕಾಣುವುದು. ತನ್ನಂತೆಯೇ ಭಾವಿಸುವುದು ಸಮದೃಷ್ಟಿಯ ಸಿದ್ಧಾಂತ. ಅದರಂತೆ ಎಲ್ಲರನ್ನೂ ಸಮನಾಗಿ ನೋಡುವವನೆ ಯೋಗಿಯೆನಿಸಿಕೊಳ್ಳುತ್ತಾರೆ ಎಂದಿದ್ದಾರೆ ವೇಮನ. ಸಮಭಾವ ತಾಳುವುದೇ ಸಂಯಮ ಜೀವನ.

ವೇಮನರೆಂದಂತೆ–

**ಸುತ ಸತಿ–ಪತಿಗಳಲಿ, ಸಕಲರಲ್ಲಿ ಆತ್ಮ**
**ಮೇಲಾಗಿಯೇ ಇದ್ದು ಮೆರೆಯುತಿಹುದು**
**ಬೇರೆ ಬೇರೆಯಾಗಿ ಬೆಳಗುವುದು ರೂಪದಿ**
**ವಿಶ್ವದಾಭಿರಾಮ ಕೇಳು ವೇಮ.**



**ತನ್ನ ಹಾಗೆ ಅರಿಯೆ, ಧರೆಯ ಜೀವಜಂತು**
**ಬಗೆಯೆ, ತನ್ನ ಹಾಗೆ ಬದುಕು ಅಲ್ವೆ?**
**ಜ್ಞಾನಿ ಜ್ಞಾನಿ ಕೊಲಲು ಏನು ಕಾರಣಯ್ಯ**
**ವಿಶ್ವದಾಭಿರಾಮ ಕೇಳು ವೇಮ.**

**ಅನ್ಯರಿಗೆ ಬರುತಿಹ ಆಪತ್ತು ತನ್ನವೆಂದು**
**ಎನ್ನುವಾತ ಜಗದಿ ಇರುವಂಥವ**
**ಎಷ್ಟೋ ಅವನ ಒಳಗೆ ಇಹ–ಪರವಿರೆ ಲೇಸು**
**ಕಾಣುವವನು ಮಿಗಿಲು ಘನನು ವೇಮ.**

**ಸಮವು ಆದ ದೃಷ್ಟಿ, ಸಮವಾಗಿಯೆ ನಿಲಿಸಿ**
**ಬಾಹ್ಯರು ಜಗಳ ತೊರೆದು, ಭದ್ರವಾಗಿ**
**ಬೆಳಗ ನೋಡು, ಬಟ್ಟ ಬಯಲಾಯ್ತು ಬ್ರಹ್ಮ**
**ವಿಶ್ವದಾಭಿರಾಮ ಕೇಳು ವೇಮ.**

**ಸಕಲ ಜೀವಿಗಳನು ಸಮನಾಗಿ ನೋಡುವನು**
**'ಅವನ' ಕ್ರಮವ ತಿಳಿಯೆ, ಅವನೇ ಯೋಗಿ**
**'ಅವನ' ನೀವೆನುವುದು; ಅನ್ಯನನ್ನು ಅಲ್ಲ.**
**ವಿಶ್ವದಾಭಿರಾಮ ಕೇಳು ವೇಮ.**

ಮನುಷ್ಯನೆಂದ ಮೇಲೆ ಕೋಪ–ತಾಪ ಕ್ರಿಯೆಗಳು ಇರುವುದು ಸಹಜ. ಆದರೆ ಅವುಗಳನ್ನು ಅಂಕಿತದಲ್ಲಿಟ್ಟುಕೊಂಡು ಮತ್ತೊಬ್ಬರೊಂದಿಗೆ ವರ್ತಿಸುವುದು ಕ್ಷೇಮವೆಂದುದಾಗಿ ಸಂಯಮದ ಭಾಗದಲ್ಲಿ ವೇಮನ ಹೇಳಿದ್ದು ಹೀಗೆ–

**ಅರಿಕೆಯರಿತು ಮಾತು ಆಡಲು ಅರಿತಾಗ**
**ಸಣ್ಣ ದೊಡ್ಡತನದ ಗಣನೆಯೇಕೆ?**
**ಬಾಲ ಹಿಡಿದ ದೀಪ ಬೆಳಗದೆ ಬಹುವಾಗಿ?**
**ವಿಶ್ವದಾಭಿರಾಮ ಕೇಳು ವೇಮ.**

**ಕೋಪದಿಂದ ನರಕ ಕೂಪವನು ಸೇರುವ**
**ಕೋಪದಿಂದ ಗುಣವು ಕೊಂಚವಹುದು**
**ಬಾಳು ಕೋಪದಿಂದ ಕೀಳು ಆಗುತಿಹದು**
**ವಿಶ್ವದಾಭಿರಾಮ ಕೇಳು ವೇಮ.**

'ಕೋಪ ತನ್ನ ವೈರಿ ಶಾಂತ ಪರರ ವೈರಿ' ಎಂಬ ಗಾದೆಯಂತೆ ಕೋಪವು ಅಪಾಯವನ್ನು ತಂದೀತೆ ಹೊರತು ಶಾಂತತೆಯನ್ನಲ್ಲವೆಂದು ಹೇಳಿದ್ದಾನೆ ಕವಿ. ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು ಎಂಬಂತೆ, ಉಳ್ಳವರು ಇಲ್ಲದ ಕಡು ಬಡವರಿಗೆ, ದೀನ ದಲಿತರಿಗೆ ಅನ್ನದಾನವನು ಮಾಡಿದರೆ ದೇವರಿಗೇ ಅರ್ಪಿಸಿದಂತಾಗುತ್ತದೆ ಎಂದುದಾಗಿ ವೇಮನಯೋಗಿಯು ಹೇಳಿರುವನು.

**ಉಣ್ಣುವ ಬಾನದೊಳು ಇನಿತು ದೈವಕಿಡಲು**
**ಪುಣ್ಯ ಲೋಕಕವನು ಪೋಗುತಿಪ್ಪ**
**ಅನ್ನ ದಾನಕ್ಕಿಂತಮಿನ್ನು ದಾನವಿಲ್ಲ**
**ವಿಶ್ವದಾಭಿರಾಮ ಕೇಳು ವೇಮ.**

**ಅನ್ನವಿಡುವುದಕ್ಕಿಂತ ಮಿನ್ನು ದಾನವಿಲ್ಲ**
**ಏನು ಗೆದ್ದೊಡೇನು ಎಣಿಕೆ ಇರದು**
**ಅನ್ನವೆಷ್ಟು ಜೀವ ಆಧಾರವಪ್ಪುದು**
**ವಿಶ್ವದಾಭಿರಾಮ ಕೇಳು ವೇಮ.**

**ಹಸಿವು ಆಗಿ ಬಂದಿರುವಂಥ ಪರದೇಶಿಗೆ**
**ಹಿಡಿಯಾದರೂ ಅನ್ನ ಕೊಡುವುದಿಲ್ಲ**
**ಸೂಳೆ ಮಗನು ಮತ್ತೆ ಸೂಳೆಗೀಯುತಿಪ್ಪ**
**ವಿಶ್ವದಾಭಿರಾಮ ಕೇಳು ವೇಮ.**

**ಅಖಿಲ ದಾನಕ್ಕಿಂತ ಅನ್ನ ದಾನ ಮೇಲು**
**ಹಡೆದವರಿಗಿಂತ ಹೆಚ್ಚು ಯಾರು?**
**ಎನ್ನ ಗುರುವಿಗಿಂತ ಯಾರು ಹೆಚ್ಚು ಅಲ್ಲ!**
**ವಿಶ್ವದಾಭಿರಾಮ ಕೇಳು ವೇಮ.**

**ದಾನ ಕೇಳುವವನು ಧರಣಿಯೊಳಗಧಮನು;**
**ದಾನ ಕೇಳದವನು ದೈವ ಸಮನು**
**ದಾನ ಕೊಡದಿರುವವ ಧನ್ಯನಲ್ಲ ನೋಡು**
**ವಿಶ್ವದಾಭಿರಾಮ ಕೇಳು ವೇಮ.**

**ಕೊಡುವವರು ಯಾರೋ? ಕೊಡದವರು ಯಾರೋ?**
**ಕೊಟ್ಟು ಕೊಡದ ಅಂಥ ದಿಟ್ಟ ಯಾರೋ?**
**ಪಟ್ಟು ತಪ್ಪದಿದ್ದು ಭಾವಿಸಿ ನೋಡಿರೋ**
**ವಿಶ್ವದಾಭಿರಾಮ ಕೇಳು ವೇಮ.**



ಹೀಗೆ ವೇಮನಯೋಗಿಯು ದಾನದ ಮಹತ್ವ ಮತ್ತು ಮಹಿಮೆಯನ್ನು ಬಹು ಸಾರವತ್ತಾಗಿ ಹೇಳಿರುವನು. ದಾನ ಕೊಡುವದು ಅದೆಷ್ಟು ಮಿಗಿಲಾದುದೋ ದಾನ ಪಡೆಯಲಾರದುದು ಮಿಗಿಲು ಅಷ್ಟೇ ಅಲ್ಲ ದೈವ ಸಮಾನವಾದುದು ಎಂದು ಹೊಸ ಆಯಾಮವನ್ನು ಸಾರಿದ್ದಾರೆ. ಎಲ್ಲರೂ ದುಡಿದುಂಡು ಸುಖದಿಂದ ಬಾಳಬೇಕು ಎಂದು ಬಣ್ಣಿಸಿದ್ದಾನೆ. ಎಲ್ಲ ದಾನಕ್ಕಿಂತ ಅನ್ನ ದಾನ ಮೇಲು, ಗುರುವಿಗಿಂತ ಅಧಿಕರು ಯಾರೂ ಇಲ್ಲವೆಂಬಂತೆ! ದಾನ ಕೊಡಬೇಕು. ನೀಡಬೇಕು ಇದರಿಂದ ಪುಣ್ಯ ಪ್ರಾಪ್ತಿಯಾಗುತ್ತದೆಂಬುದಾಗಿ ಬಣ್ಣಿಸಿದ್ದುದನ್ನು ಮೇಲಿನ ಪದಗಳಲ್ಲಿ ನಾವು ಕಾಣುತ್ತೇವೆ.

ಯೋಗವೆಂದರೆ ಕೂಡುವುದು ಎಂದರ್ಥ, ಅಂದರೆ ಜೀವ ಶಿವ ಒಂದಾಗುವುದು. ಅದು ಶಿವನ ಕುರಿತು ಧ್ಯಾನ–ತಪಸ್ಸು– ಸ್ತುತಿ ಮಾಡುತ್ತಲೇ ಮುಕ್ತಿ ಹೊಂದುವುದಕ್ಕೆ ಯೋಗವೆನ್ನುವರು. ಅದಕ್ಕೆ ಯೋಗಾಯೋಗವೂ ಒದಗಿ ಬರಬೇಕು. ನಮ್ಮ ಹಣೆಬರಹವಿದ್ದಂತಾಗಲಿ ಎಂದರಾಗದು. ಅದಕ್ಕೆ ಶುದ್ಧ ಮನಸ್ಸಿನಿಂದ ಸತತ ಪ್ರಯತ್ನವೂ ಬೇಕೆಂದು ಕವಿ ವೇಮನ ಹೇಳಿದ್ದು.

**ಬೇಡವೆನಲು ಬಿಡದು; ಬೇಕು ಎನಲು ಬರದು**
**ತಾನು ಮಾಡಿದಂಥ ದಾನ ಫಲವು**
**ಹೃದಯದಲ್ಲಿ ದುಃಖಪಡದಿರುವುದೇ ಯೋಗ**
**ವಿಶ್ವದಾಭಿರಾಮ ಕೇಳು ವೇಮ.**

**ಅರಿತೊಡೆ ಸುಖ ಹೊಂದಿ, ದುಃಖವ ತಿಳಿಯದಿರಲು**
**ವಿಧಿಯ ದೂರಲು ಫಲವೇನು? ವಿನತಿ ಮಾಡಿ,**
**ಬುದ್ಧಿಗೆ ಹೊಳೆಯೆ, ಪರಿಪೂರ್ತಿ ಹೊಂದಿರಯ್ಯ!**
**ಅಂತೆ ತೆಪ್ಪಗಿರಲುಬಹುದೆ? ಆಗ ವೇಮ.**

**ಲೋಭ–ಮೋಹದಿಂದ ಲಾಭ ಪ್ರಾಪ್ತಿಯಿರದು**
**ನೆನೆದ ಕಾರ್ಯವೆಲ್ಲ ನೆರವೇರವು**
**ತಾವೊಂದು ಬಗೆದರೆ ದೈವದ ಬಗೆಯೊಂದು**
**ವಿಶ್ವದಾಭಿರಾಮ ಕೇಳು ವೇಮ.**

**ತನಗೆ ಭಾಗ್ಯವಿರಲು ದಕ್ಕುವುದೆಲ್ಲದಿರೆ**
**ಇರುವ ಭಾಗ್ಯವೆಲ್ಲ ಇಲ್ಲವೆಂದು**
**ನಂಬಿಕೊಂಡು ನೋಳ್ಪ, ನರನೆ ಆದ ಯೋಗಿ**
**ವಿಶ್ವದಾಭಿರಾಮ ಕೇಳು ವೇಮ.**

**ತನಗೆ ಪ್ರಾಪ್ತಿ ಇರದೆ ದಾತ ನೀಡನಲ್ಲ!**
**ಪರರ ದೂರುತಿಹುದು, ಬುದ್ಧಿಗೇಡು**
**ಧನ ಹೀನನಿಹಗೆ ತನ್ನ ಕಷ್ಟ ತೋರ್ಕು**
**ವಿಶ್ವದಾಭಿರಾಮ ಕೇಳು ವೇಮ.**

**ತನಗೆ ಪ್ರಾಪ್ತಿಯಿಲ್ಲ: ದಾತರು ಕೊಡರೆಂದು**
**ದೋಷ ಬುದ್ಧಿಯಿಂದ ದೂರಲೆಲ್ಲ;**
**ಮೂಗು ಡೊಂಕು ನೋಡು, ಮೂಗುತಿ, ದೂರುವುದೆ?**
**ವಿಶ್ವದಾಭಿರಾಮ ಕೇಳು ವೇಮ.**

ಈ ಮೇಲಿನ ಪದಗಳನ್ನು ಗಮನಿಸಿದರೆ ಲಾಭ ಪ್ರಾಪ್ತಿಗಾಗಿ ದಾನ ಮಾಡುವುದಲ್ಲ. ಹಸಿದು ಬಳಲಿ ಬಂದರೆ ಅಂಥವರಿಗೆ ದಾನ ಮಾಡಿದರೆ ಅಧಿಕವಾಗುವುದೆಂದರ್ಥ. ತನಗೆ ಕೊಡುವ ಭಾಗ್ಯವಿರಲು– ಪಡೆಯುವವರ ಭಾಗ್ಯವೂ ಇರಬೇಕಲ್ಲವೆ? ಅದು ಸತ್ಯ–ಧರ್ಮ ವೃತದಿಂದ ಕೂಡಿರಬೇಕು. ಭಾರತ ಹೇಳುತಿಹ ಹಲವು ಧರ್ಮಗಳೊಳು ಸತ್ಯ ನಿಷ್ಠೆಗೆ ಸಮ ಸತ್ಯವೊಂದೆ, ಭೂಮಿ ದಾನದಿಂದ ಮಿನ್ನ ಕಾಂತಿ ಬೆಳಕು. ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯವನ್ನು ದಾನ ಮಾಡಿದರೆ ಮಾತ್ರ ಪುಣ್ಯ ಫಲಿಸುವುದೆಂದಿದರ ತಾತ್ಪರ್ಯ. ದಾನ ಧರ್ಮ ಮಾಡುವವರಲ್ಲಿ ಮತ್ತು ಪಡೆಯುವವರಲ್ಲಿ ಪವಿತ್ರ ಭಾವನೆಯಿರಬೇಕೆಂದಿದ್ದಾರೆ. ಕಲ್ಲು ದೇವರಿಗೆ ಎರಗುವುದನ್ನು ಬಿಡಿರಿ ಎಂಬುದಕ್ಕೆ–

**ಹೃದಯದಲ್ಲಿ ಇರುವ ಈಶನನು ತಿಳಿಯದೆ**
**ಶಿಲೆಗಳಿಗೆ ಮಣಿಯುವ ಜೀವಿಗಳೇ**
**ಶಿಲೆಯೊಳೇನು ಉಂಟು? ಜೀವಿಯಲ್ಲಿ ಹೊರತು**
**ವಿಶ್ವದಾಭಿರಾಮ ಕೇಳು ವೇಮ.**

**ಕಳ್ಳಗುರು ಕಟ್ಟುವನೆಲ್ಲ ಕರ್ಮಗಳನು**
**ಮಧ್ಯಗುರು ಕಟ್ಟುವ ಮಂತ್ರ–ತಂತ್ರ**
**ಉತ್ತಮ ಕಟ್ಟುವನು ಯೋಗ ಸಾಮ್ರಾಜ್ಯವ**
**ವಿಶ್ವದಾಭಿರಾಮ ಕೇಳು ವೇಮ.**

**ಶಿಲೆ ಪ್ರತಿಮೆ ತಂದು ಸಮವು ರಾಜಗೆಂದು**
**ಪೂಜೆಗೈವ ನರನು ಬುದ್ಧಿಗೇಡಿ**
**ಭಾವದಲ್ಲಿ ಪರವ ಭಾವಿಸಿ ತಿಳಿಯನೆ?**
**ವಿಶ್ವದಾಭಿರಾಮ ಕೇಳು ವೇಮ.**



**ಪೂಜೆ ಮಾಡಿ ಮಾಡಿ ಪೂಜಾರಿಯಾಗುವ:**
**ಪೂಜ್ಯ ವಸ್ತುವೆಂದು ಭೂಮಿಯಲ್ಲಿ**
**ಎಲ್ಲಿ ಪೂಜಿಸುವುದು? ಎಲ್ಲ ದಿಶೆಯಲಷ್ಟೆ**
**ವಿಶ್ವದಾಭಿರಾಮ ಕೇಳು ವೇಮ.**

**ಧರೆಯ ದೇವಾಲಯದಂಟು ಬಿಟ್ಟಿರುವವ:**
**ತನುವ ಗುಂಡಿಯ ಮಾಡಿ, ತನ್ನ ನಿಲಿಸಿ**
**ಲೋಕ ಬುದ್ಧಿ ಬಿಟ್ಟು ಅವಲೋಕಿಸು ತನ್ನೊಳಗೆ**
**ವಿಶ್ವದಾಭಿರಾಮ ಕೇಳು ವೇಮ.**

ಹೇ ಮನುಜನೇ ನಿನ್ನೊಳಗೆ ಆತ್ಮ–ಪರಮಾತ್ಮನಿರಲು, ಕಲ್ಲು–ಮಣ್ಣಿನ ಗುಡಿ ಕಟ್ಟಿ ಶಿಲೆಯ ಕೂಡಿಸಿ, ದೇವರೆಂದು ಕಲ್ಪಿಸಿ, ಪೂಜಿಸಿ, ಪ್ರಯಾಸಪಡುವಿ. ಕಾಶಿಯಲ್ಲಿಲ್ಲ ಯಾವ ಗುಡಿ –ಗುಂಡಾರಗಳಲ್ಲಿಲ್ಲ. ನೀನೇ ದೇವನಿದ್ದಿ! ದೇವರಾಗುವ ಶಕ್ತಿಯಿರುವಾಗ ಮತ್ತೇಕೆ ಕಲ್ಲು ದೇವರಿಗೆ ಕೈಯ ಮುಗಿಯುವಿ? ಎಂದು ಕಟಕಿ ನುಡಿಯಿರೆ; ಭಾವದಲ್ಲಿ ಪರವ ಭಾವಿಸಿ ತಿಳಿದು ನಡೆಯೆಂದು ವೇಮನನು ಹೇಳಿರುವನು.

**ಮೇಲು–ಕೀಳು–ಜಾತಿ–ವಿಜಾತಿ;**

ಈ ಪೃಥ್ವಿಯಲ್ಲಿ ಜನಿಸಿದ ಮನುಜ ಕುಲವೊಂದೇ! ಯಾರೂ ಮೇಲಲ್ಲ. ಯಾರೂ ಕೀಳಲ್ಲ. ಎಲ್ಲರೊಳಗೊಂದಾಗಿ ಬದುಕುವುದೇ ಉತ್ತಮರೆಂದ ವೇಮನ. ಅಂತಹ ವಿಚಾರಧಾರೆಗಳುಳ್ಳ ಪದಗಳು ಬೇಕಾದಷ್ಟಿವೆ. ಆದರೆ ಕೆಲವು ಪದ್ಯಗಳ ಮೂಲಕ ಹೇಳಲು ಪ್ರಯತ್ನಿಸಿರುವೆನು. ಅಲ್ಲದೆ ಸಮಾಜದಲ್ಲಿ ಕೆಲವರನ್ನು ಮೇಲಿನವರೆಂದೂ, ಬೇರೆ ಕೆಲವರನ್ನು ಕೆಳಗಿನವರೆಂದೂ ಮಾಡಿಕೊಂಡಿರುವುದು. ಇದು ನಿಜದ ಅರಿವಲ್ಲ. ಈ ತಾರತಮ್ಯ ಗಣನೆಗೆ ಇರುವ ಅಳತೆಗೋಲು ಯಾವುದು? ಎಂದು ಪ್ರಶ್ನಿಸಿದ್ದಾನೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರಗಳೆಂಬವು ಚತುರ್ವಿಧ ಪುರುಷಾರ್ಥಗಳು ಜಾತಿಯಲ್ಲ. ಅವು ಅವರವರು ಮಾಡುವ ಕಾಯಕದಿಂದ ಮಾಡಿಕೊಂಡವು. ಬಸವಣ್ಣನವರು ನೂರಾರು ಕಾಯಕದವರನ್ನು ಒಂದು ಗೂಡಿಸಿ ಅನುಭವ ಮಂಟಪವನ್ನು ಕಲ್ಯಾಣದಲ್ಲಿ ನಿರ್ಮಿಸಿ, ಕಾಯಕ ದಾಸೋಹಗಳನ್ನು ಜಾರಿಗೊಳಿಸಿದ್ದುದರಿಂದ ಅಂದು ಬಿಜ್ಜಳನ ಸಾಮ್ರಾಜ್ಯ ಅಧಃ ಪತನವಾಯಿತೇನೋ ನಿಜ, ಆದರೆ, ಬಸವಣ್ಣನಿಂದ ಕಲ್ಯಾಣ ರಾಜ್ಯವಾಯಿತು. ಆದುದರಿಂದ ಮೇಲು ಕೀಳೆಂಬ ತಾರತಮ್ಯ ಭಾವನೆಯು ಸಲ್ಲದು. ಜಾಣನು ಸರ್ವರನ್ನು ಸಮಭಾವದಿಂದ ನೋಡುತ್ತಾನೆ. ಗುಣದಿಂದ ಹೀನನಾದವನಿಗೆ ಇರಲಿಕ್ಕೆ ಇಂಬುಗೊಟ್ಟರೆ, ಅದರಿಂದ ಯಾರಿಗೇ ಆಗಲಿ ಹಾನಿ ಬರುವುದು. ಇದನ್ನೆಲ್ಲ ತಿಳಿಯಬೇಕು. ತಾನು ಯಾರು?

ಎಂಬುದನ್ನು ತಿಳಿಯಬೇಕು. ತನ್ನ ಗುಣ-ಕರ್ಮಗಳೇ ತನ್ನ ಇರುವಿಗೆ ಕಾರಣವೆಂಬುದನ್ನು ತಿಳಿಯಬೇಕೇ ಹೊರತು ಮೇಲು-ಕೀಳು-ಧನ-ಕನಕ-ಅಧಿಕಾರದಿಂದಲ್ಲವೆನ್ನುತ್ತಾರೆ ಸಂತ ವೇಮನ. ಕೆಲವು ಪದಗಳಲ್ಲಿ ಹೀಗಿದೆ-

**ಕುಲದ ಮೇಲ್ಮೆಯುಳ್ಳ, ಗೋತ್ರ ಮೇಲ್ಮೆಯುಳ್ಳ**
**ಜಾಣ್ಮೆಯಿಂದ ಜಂಭ ಪಡುವ ಜನರು,**
**ಐಶ್ವರ್ಯವಂತರ ಅಡುಗೆಯವನ ಸುತರೆ**
**ವಿಶ್ವದಾಭಿರಾಮ ಕೇಳು ವೇಮ.**

**ಕುಲವು ಇಲ್ಲದವನು ಕನಕದಿಂದ ಮೇಲು**
**ಕನಕವಿಲ್ಲದವನ ಕುಲವು ಕೀಳು**
**ಕುಲದಕ್ಕಿಂತ ಮಿಗಿಲು ಕನಕ ಮುಖ್ಯವಿಹುದು**
**ವಿಶ್ವದಾಭಿರಾಮ ಕೇಳು ವೇಮ.**

**ಉಚ್ಚ ನೀಚವೆನದೆ ಉಂಟು ಮನದಿ ಸತತ**
**ತೊಡಕು ಇರದ ತಿಳಿದು ತಿಳಿದು ಬೆಳಗಿ**
**ನೇರ ನೋಳ್ಪದೆಲ್ಲ ನೆರೆ ಜಾಣ ವಿದ್ಯೆಯು**
**ವಿಶ್ವದಾಭಿರಾಮ ಕೇಳು ವೇಮ.**

**ಹರಳು ಸರವು, ಹೊನ್ನು ಹುಟ್ಟಿಸುವ ವಿದ್ಯೆಯು,**
**ಕಾಯ ಪುಷ್ಟಿ ವಿಪುಲ ಕೂಡಿ ಇರಲು**
**ಕುಲವು ಯಾವುದಿರಲಿ, ಘನನೆಂದು ಕರೆವರು**
**ವಿಶ್ವದಾಭಿರಾಮ ಕೇಳು ವೇಮ.**

**ಮೇಲು-ಕೀಳು ಎನಲು, ಮತ್ತೆ ಯಾರಿಗೇನು?**
**ತನುವು ನಿತ್ಯವಹುದೆ? ತಥ್ಯವರಿಯೆ**
**ಅರಿತು ಅರಿಯದಿಹರು ಏನು ಎನ್ನಬಹುದು?**
**ವಿಶ್ವದಾಭಿರಾಮ ಕೇಳು ವೇಮ.**

ಕುಲಕುಲವೆಂದೇಕೆ ಹೊಡೆದಾಡುವಿರಿ? ನನ್ನ ಕುಲ ಹೆಚ್ಚು, ನನ್ನ ಕುಲವೇ ಮೇಲು ಎಂದು ಹೊಡೆದಾಡುವವರು ಅಧಮರು ಎನ್ನುತ್ತಾರೆ ಸಂತರು. ಕೂಳಿನಿಂದೇನು? ಕುಲದಿಂದಲಿನ್ನೇನು? ಭೂಮಿಯಿಂದೇನು? ದೇಹಕಾಗಿ, ನರನು ಪಡುವ ಈ ಪಾಡು ನಗೆಯಪಾಟಲಾದುದು ನೋಡಾ! ಎಂದಿದ್ದಾರೆ ವೇಮನ. ಬರಿದೆ ಹೋಯ್ತು ಕುಲವು, ಬಿರುದು-ಬಾವಲಿ ನುಂಗಿತು ಕುಲವು, ಎಲ್ಲಿ ಜೀವರು ಅನುಭವಿಸುವವರು



ಕುಲವ, ಇಂಥ ಕುಲವ ಸತತವೂ ಇಹಪರಗಳಲ್ಲಿ ಹಿಡಿದುಕೊಂಡಂಥ ಜನಕೆ ಹಿರಿಮೆಯಿರುವುದೆಂದರು ವೇಮನ.

**ಇಷ್ಟು ಜಾತಿಗಳಲಿ 'ನಾನು' ಜಾತಿ ಮುಖ್ಯ**
**ತಿಳಿವು ಉಳ್ಳ ಜನರು ತಾವು ಹೆಚ್ಚು**
**ತಿಳಿವು ಇಲ್ಲದವರು ಯಾವ ಜಾತಿಯಿರಲಿ**
**ಹೀನ ಜಾತಿಯೆಣಿಕೆ ತಿಳಿಯೋ ವೇಮ.**

**ಜಾತಿಯೊಳಗೆ ಮೇಲು-ಜಾತಿ ಕೀಳು ಎಲ್ಲಿ?**
**ನಿಜವರಿಯದೆ ತಿರುಗಲೇನು ಫಲವು?**
**ಇದನರಿತ ಮನುಜರ ಕುಲವೇ ಮಿಗಿಲುಕಣಾ**
**ವಿಶ್ವದಾಭಿರಾಮ ಕೇಳು ವೇಮ.**

**ಬರಿದೆ ದೊಡ್ಡಸ್ತಿಕೆಯ, ಬಿಡುವ ವಿಧವರಿಯದ**
**ನರನೆ ಹೊರತು, ಮನುಜನೆನಿಸಿ ಹುಟ್ಟಿ**
**ಕೀಳು-ಮೇಲರಿದೆ, ಕೆಳಗೆ ಬಿದ್ದ ನೋಡು**
**ವಿಶ್ವದಾಭಿರಾಮ ಕೇಳು ವೇಮ.**

**ಹೀನ ಜಾತಿಯವರಿಗೆ ನಿಲಲಿಂಬುಗೊಟ್ಟರೆ**
**ಹಾನಿ ಬರುವುದೆಂಥವನೇ ಇರಲಿ.**
**ಹೊಟ್ಟೆ ಸೇರಿದ ನೊಣ, ಹಾಗೆ ಹೀಗೆನಿಸದೆ?**
**ವಿಶ್ವದಾಭಿರಾಮ ಕೇಳು ವೇಮ.**

ಇವೆಲ್ಲ ಪದ- ಪದ್ಯಗಳನ್ನು ಗಮನಿಸಿದಾಗ ಕುಲ-ಜಾತಿ-ಭೇದ ಭಾವ ಸಲ್ಲದು. ನಾವೆಲ್ಲರೂ ದೇವನ ಆಳುಗಳು, ಆತನು ಆಡಿಸುವ ಸೂತ್ರದ ಗೊಂಬೆಗಳಿದ್ದಂತೆ. ಹೀನ ಗುಣಗಳನ್ನು ಕಳಚಿ ಹಾಕಿ, ನಾನು-ನೀನು, ಮೇಲು-ಕೀಳು, ಬಡವ-ಬಲ್ಲಿದ, ಧನಿಕ-ದರಿದ್ರ,- ಈ ತಾರತಮ್ಯ ಮಾಡುವುದೇ ಸರಿಯಲ್ಲ. ಆ ದೇವನ ಎದುರಿಗೆ ಎಲ್ಲರೂ ಸರಿಸಮಾನರು. ಕುಲದ ಲೆಕ್ಕವೇನೆಂದರೆ ಗುಣವೇ ಪ್ರಧಾನವೆಂದಿದ್ದಾರೆ ಕವಿ ವೇಮನ. ಕುಲಕ್ಕಿಂತಲೂ ಸ್ವಂತ ನಡತೆಯೇ ಮುಖ್ಯ:

ಒಳ್ಳೆಯ ಆಚಾರ ವಿಚಾರವಿದ್ದವನೇ ಶೀಲವಂತ, ಶ್ರೇಷ್ಠ ಕುಲವಂತ. ಪರರ ವಸ್ತುವನ್ನು ಮುಟ್ಟಬಾರದು. ಪರರ ಆಸ್ತಿಯನ್ನು ಕೂಡ ಸ್ವಂತ ಆಸ್ತಿಯೆಂಬಂತೆ ಸಂರಕ್ಷಿಸಬೇಕು. ನೀತಿಯಿಂದ ನಡೆಯಬೇಕು. ನೀತಿಯೇ ಜ್ಯೋತಿಯಾಗಿ ಮಾರ್ಗ ತೋರಬೇಕು. ಹಾಗೆ ಮಾಡದಿದ್ದರೆ ಮನಸ್ಸು ನಿರ್ಮಲವಾಗದು. ಇನ್ನು ಮನವು ಶುದ್ಧಿಯಾಗದೆ ಪರಮ ಪದವು ಲಭಿಸದು. ಸುಳ್ಳು ಮಾತನಾಡಬಾರದು, ಸತ್ಯಪಥವನ್ನು

ಬಿಡಬಾರದು. ನುಡಿ-ನಡೆ ಶುದ್ಧವಿರದಿದ್ದರೆ ಆತ ಚಾಂಡಾಲನೇ ಸರಿ ಎಂದಿದ್ದಾರೆ. ನಿನಗೆ ಅನಾನುಕೂಲ ತಾಣಗಳಲ್ಲಿ ಅಲ್ಪನೆಂದುಕೊಳ್ಳಲು ಮುಜುಗರ ಬೇಡ. ಕನ್ನಡಿಯಲ್ಲಿ ಕರಿಯು ಕಿರಿದಾಗಿ ಕಂಡರೇನಂತೆ? ಬೇರೆಯವರ ತಪ್ಪನ್ನು ಎಣಿಸುವ ಮುನ್ನ, ಸ್ವಂತದ ದೋಷಗಳನ್ನು ಸರಿಪಡಿಸಿಕೊಳ್ಳಬೇಕು. ಇಂತಹ ನೀತಿಯ ಮಾತುಗಳಿಗಾಗಿ ವೇಮನನ ಗೀತೆಯಿಂತಿದೆ-

**ನೀತಿ ಜ್ಯೋತಿಯಿರದೆ, ನಿರ್ಮಲವೆಂತಹುದು**
**ಪರಮ ಪದವು ಎಂತು? ಎಲ್ಲಿ ಇಹುದು?**
**ಧನ ತನಗಿರಲೇನು? ದೈವ ಫಲ ದೊರೆಪುದೆ?**
**ವಿಶ್ವದಾಭಿರಾಮ ಕೇಳು ವೇಮ.**

**ನುಡಿಯು ಶುದ್ಧವಿರದೆ, ನೀಚ ಚಂಡಾಲನು,**
**ಪ್ರೇಮ ಶುದ್ಧಿಯಿರದೆ, ಪಾತ್ರನೆಂತು?**
**ತೋರಲು ಹಣೆ ಭಕ್ತ, ತೋಳ ಬಾಯಿಯವನು**
**ವಿಶ್ವದಾಭಿರಾಮ ಕೇಳು ವೇಮ.**

**ಮಡಿವಾಳನು ಒಗೆದು; ಮತ್ತೆ ಬೇಸರಿಯದೆ**
**ಮೈಲಿ ತೊಳೆದು, ಬಟ್ಟೆ ಮಡಿ ಮಾಡುವ**
**ಬುದ್ಧಿ ಹೇಳುವವನು, ಗುದ್ದಿ ಹೇಳಲೇನು?**
**ವಿಶ್ವದಾಭಿರಾಮ ಕೇಳು ವೇಮ.**

**ಸುಳ್ಳು ನುಡಿವುದಕಿಂತ ಕೀಳು ಮತ್ತೆ ಇಲ್ಲ.**
**ಕಷ್ಟವೆಂದೂ, ಕೀಳುಗೊಳಿಸುತಿಹುದು**
**ದ್ವಿಜನೆನಲು, ಅರಿಯೆ ತಲೆ ತಿರುಕನವನಲಾ**
**ವಿಶ್ವದಾಭಿರಾಮ ಕೇಳು ವೇಮ.**

ಹೀಗೆ ವೇಮನಯೋಗಿಯು ಬಿತ್ತಿದ ನೀತಿಯ ಬಿತ್ತುಗಳು ಗೀತ ಮಾತುಗಳಾಗಿ ತೆಲುಗರ-ಕನ್ನಡಿಗರ ಮನವನ್ನು ಸೂರೆಗೊಳಿಸಿವೆ. ಸತ್ಯ, ನೀತಿ, ಪ್ರಾಮಾಣಿಕತೆ ಮತ್ತು ಪರೋಪಕಾರ ಗುಣಗಳನ್ನು ಅಳವಡಿಸಿಕೊಂಡು ಬದುಕಿರೆಂದು ಜನತೆಗೆ ಹಿತ ನುಡಿದಿದ್ದಾನೆ.

~0~



೪

# ಸರ್ವಜ್ಞ ಕವಿ: ಜೀವನ ದರ್ಶನ

ತಮಿಳು ಸಾಹಿತ್ಯದಲ್ಲಿ 'ತಿರುವಳ್ಳುವರ್ ಕವಿ'ಗೂ, ತೆಲುಗು ಭಾಷೆಯಲ್ಲಿ 'ವೇಮನ ಕವಿಗೂ', ಮಹಾರಾಷ್ಟ್ರ ವಾಙ್ಮಯದಲ್ಲಿ ರಾಮದಾಸ ಮುನಿಗೂ, ಹಿಂದೀ ಸಾಹಿತ್ಯದಲ್ಲಿ ಕಬೀರದಾಸನಿಗೂ ಇರುವ ಸ್ಥಾನವೇ ಕನ್ನಡ ಸಾಹಿತ್ಯದಲ್ಲಿ ಸರ್ವಜ್ಞ ಮೂರ್ತಿಗೂ ಇದೆಯೆಂದು ಈಗಾಗಲೇ ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ತಿರುವಳ್ಳುವರ್ ಮಹರ್ಷಿಯ ನೀತಿಬೋಧೆಯೂ, ವೇಮನನ ಲೋಕಾನುಭವವೂ, ರಾಮದಾಸನ ಮಾರ್ಮಿಕತೆಯೂ, ಕಬೀರರ ಉದಾರಭಾವವೂ ಸರ್ವಜ್ಞ ಕವಿಯ ವಚನಗಳಲ್ಲಿ ಇವೆಲ್ಲ ಲಕ್ಷಣಗಳು ಕಾಣಬರುತ್ತದೆಯೆಂದು ಹೇಳಿಕೆಯಿದೆ. ಈ ಕವಿಶ್ರೇಷ್ಠರ ವಚನಗಳನ್ನು ಓದುವುದರಿಂದ ಈ ಮಾತುಗಳು ಮನದಟ್ಟಾಗುತ್ತವೆ. ಕನ್ನಡ ಸಾರಸ್ವತ ಲೋಕದಲ್ಲಿ ನಮ್ಮೆಲ್ಲರ ಗಮನ ಸೆಳೆಯುವವರೆಂದರೆ ಕನ್ನಡಿಗರ ಕಣ್ಮಣಿ, ತ್ರಿಪದಿ ಬ್ರಹ್ಮ, ಜನಪದ ಕವಿ, ನೀತಿ ಕವಿ, ಆಶುಕವಿ, ಸರ್ವಜ್ಞಮೂರ್ತಿ. ಸಮಾಜದ ಒಳಿತಿಗಾಗಿ, ಉತ್ತಮಿಕೆಗಾಗಿ ಶ್ರಮಿಸಿದ ಸುಧಾರಣವಾದಿ ಮತ್ತು ಮಹಾನ್ ಚಿಂತಕ. ಜಗತ್ತಿನ ಲೌಕಿಕ ಸುಖ-ಭೋಗಗಳಿಗೆ, ಸ್ವಾರ್ಥಕ್ಕೊಳಗಾಗದೆ, ಕಾಮಕ್ಕೆ, ಅಹಂ-ಪ್ರತಿಷ್ಠೆಗಳಿಗೊಳಗಾಗದ, ಸ್ವಂತ ಹೆಸರಿಗೆ ಸಹ ಅಂಟಿಕೊಳ್ಳದ ನಿರ್ಲಿಪ್ತ, ನಿರಾಭಾರಿ ವ್ಯಕ್ತಿಯಾಗಿದ್ದರೂ ಜ್ವಲಂತ ಸಾಮಾಜಿಕ ಕಾಳಜಿಯಿದ್ದವನು. ಸರ್ವ ಸಮಾನತೆ, ಸಾಮಾಜಿಕ ನ್ಯಾಯಕ್ಕೆ ಸದಾ ಮಿಡಿಯುವ, ತುಡಿಯುವ ಹೃದಯವಂತಿಕೆಯುಳ್ಳವನು. ಈತ ಆಶುಕವಿ, ದರ್ಶಕ ಅಥವಾ ದಾರ್ಶನಿಕ ಕವಿ. ದರ್ಶಕರು ಸಾಮಾನ್ಯವಾಗಿ ಕಣ್ಣಿಗೆ ಮರೆಯಾದುದನ್ನು ಕಂಡುಕೊಂಡು ಅನ್ಯರೂ ಅದನ್ನು ಕಾಣುವಂತೆ ಮಾಡುವರು. ಸರ್ವಜ್ಞ ಅಂಥ ದರ್ಶಕ ಕವಿ. ಎಲ್ಲ ಕವಿಗಳಲ್ಲಿಯೂ ದರ್ಶಕ ಶಕ್ತಿಯಿದ್ದೇಯಿರುವುದಾದರೂ ದರ್ಶಕ ಜಾತಿಯವರು ವರ್ಣನಾ ವಿಸ್ತಾರಕ್ಕೆ ಕೈ ಚಾಚದೆ, ತಾವಾಯಿತು ತಮ್ಮ ದರ್ಶನವಾಯಿತು-ಎಂದು, ಕಿರು ಮಾತುಗಳಲ್ಲಿ ತಮ್ಮ ಕಾವ್ಯ ಮುಗಿಸುವವರು. ಅಂತೆಯೇ ಇಂಥವರ ಮಾತಿಗೆ ಮಿಂಚಿನ ಹೊರಗು, ಖಡ್ಗದ ಹರಿತವಿರುತ್ತದೆ. ಕಣ್ಣು ಸಣ್ಣದಾದರೂ ಕಂಡದ್ದು ಸಣ್ಣದಿರದು-ಎಂಬಂತೆ, ಈ ಕಿರು ಮಾತುಗಳಲ್ಲಿ ಹಿರಿದಾದ ಅರ್ಥ ಹುದುಗಿರುತ್ತದೆ. -ಬೀಜದಲ್ಲಿ ಮರ ಹುದುಗಿರುವಂತೆ ಎಂದು

ಹೇಳಿದ ವರಕವಿ ಬೇಂದ್ರೆಯವರ ಮಾತು ದರ್ಶಕ ಕವಿ ಸರ್ವಜ್ಞನಿಗೆ ಸಮಂಜಸವಾಗುತ್ತದೆ. ದರ್ಶಕ ಕವಿಗಳ ಕಣ್ಣು ಸೂಕ್ಷ್ಮದರ್ಶಕ, ದೂರದರ್ಶಕ, ಪಾರದರ್ಶಕ, ಅಪಾರ ದರ್ಶಕವಾದದ್ದು ಎಂದು ಹೇಳಿದರೆ ತಪ್ಪಲ್ಲ.

ಇಂಥ ಮಹಾಕವಿಗಳನ್ನು ಸಾಧು–ಸಂತ ಶರಣರನ್ನು, ಶೂರ ಪುರುಷರನ್ನು ತತ್ತ್ವವಿದರನ್ನು, ಕಲಾವಿರದರನ್ನು, ಹದಿಬದೆಯರನ್ನು, ಮಹಾದಾನಿಗಳನ್ನು ಹಡೆದ ಕರ್ನಾಟಕ ಮಾತೆಯು ಸರ್ವಜ್ಞಮೂರ್ತಿಯನ್ನು ಹೆತ್ತು ಸಂಪೂರ್ಣ ಭಾಗ್ಯವಂತೆಯಾದಳು, ಸರ್ವಜ್ಞನ ಸವಿನುಡಿಯನ್ನು ಲಾಲಿಸುವ ಭಾಗ್ಯವು ದೊರೆತುದುದಕ್ಕಾಗಿ ಕನ್ನಡಿಗರೆಲ್ಲರೂ ಹೆಮ್ಮೆ ಮತ್ತು ಹರ್ಷಪುಳಕಿತರಾಗಿದ್ದಾರೆ. ಇಂಥ ಸರ್ವಜ್ಞ ಮೂರ್ತಿಯಾದ ಕವಿಯ ಕಾಲ, ದೇಶ, ತಂದೆ–ತಾಯಿ, ಜನನ, ಜೀವನ ಸಂದೇಶ ವ್ಯಕ್ತಿತ್ವ ಇವೇ ಮೊದಲಾದವುಗಳ ಪರಿಚಯ ಮಾಡಿಕೊಳ್ಳಬೇಕೆಂದು ಓದುಗರು ಅಪೇಕ್ಷಿಸುವುದು ಸ್ವಾಭಾವಿಕವಾಗಿದೆ. ಅಂಥ ಮಾಹಿತಿಯನ್ನು ಒದಗಿಸಿಕೊಟ್ಟವರು ರೆವ್ಹರೆಂಡ್ ಉತ್ತಂಗಿ ಚೆನ್ನಪ್ಪನವರು. ಸರ್ವಜ್ಞ ಮೂರ್ತಿಯ ವಿಚಾರವಾಗಿ ಅಧಿಕಾರ ವಾಣಿಯಿಂದ ಮಾತನಾಡುವ ಮತ್ತು ಬರೆಯುವ ಯೋಗ್ಯತೆಯುಳ್ಳವರಲ್ಲಿ ಶ್ರೀ ಉತ್ತಂಗಿಯವರೇ ಅಗ್ರಗಣ್ಯರು. ಸರ್ವಜ್ಞನ ವಚನಗಳನ್ನು ಸಂಗ್ರಹಿಸಲಿಕ್ಕೆ, ಸಂಸ್ಕರಿಸಲಿಕ್ಕೆ, ಅವುಗಳ ಅಂತರಂಗಗಳನ್ನು ಅರಿತು ಬಹಿರಂಗಪಡಿಸಲಿಕ್ಕೆ ಹಾಗೂ ಅವನ ಗ್ರಂಥವನ್ನು ಸುಂದರವಾಗಿಯೂ, ಬಂಧುರವಾಗಿಯೂ ಪ್ರಕಟಿಸಲಿಕ್ಕೆ ಅವರಷ್ಟು ಶ್ರಮಿಸಿದವರಿಲ್ಲ. ಸಾಧಿಸಿದವರಿಲ್ಲ. ಮೆಚ್ಚಿಕೊಂಡವರಿಲ್ಲ. ವೆಚ್ಚ ಮಾಡಿದವರಿಲ್ಲ. ಸರ್ವಜ್ಞನ ವಚನಗಳ ಶ್ರೇಷ್ಠ ಗ್ರಂಥ ಪ್ರಕಟಗೊಳ್ಳಬೇಕಾದರೆ ಸಂಗ್ರಹಿಸಿದ ಎರಡು ಸಾವಿರ ವಚನಗಳನ್ನು ನಲವತ್ತು ಸಾವಿರ ಸಲ ಓದಿರುವರಂತೆ. ಅದು ಕಾರಣ ಸರ್ವಜ್ಞನ ಪರಿಚಯ ಮಾಡಿಕೊಟ್ಟಂತಹ ಉತ್ತಂಗಿ ಚೆನ್ನಪ್ಪನವರು ಆಧುನಿಕ ಸರ್ವಜ್ಞ ಮೂರ್ತಿಯೇ ಸರಿ! ಇಂಥ ಸರ್ವಜ್ಞ ಮೂರ್ತಿಯ ಜೀವನ ಚರಿತ್ರೆಯನ್ನು ಕೇಳುವದು ಕುತೂಹಲವಲ್ಲವೆ?

'ಸರ್ವಜ್ಞ' ಎಂಬುದರ ಅರ್ಥ ಎಲ್ಲವನು ಬಲ್ಲವನು ಅಥವಾ ತಿಳಿದವನು ಎಂದರ್ಥ. ಅಂತೆಯೇ ಈ ಹೆಸರಿಗೆ ತಕ್ಕಂತೆಯೇ ಇದ್ದ ಕವಿಯೀತ. ಸುಮಾರು ೫೦೦ ವರ್ಷಗಳ ಹಿಂದೆ ತ್ರಿಪದಿಯ ಸಾಲುಗಳಲ್ಲಿ ಕಟ್ಟಿಟ್ಟಿರುವ ಬುತ್ತಿ ಇಂದಿಗೂ ತಾಜಾ,ಪರಿಶುದ್ಧ, ಲೋಕದ ಡೊಂಕು ತಿದ್ದುವುದೇ ಈತನ ಹಂಬಲ. ತಪ್ಪು, ತಪ್ಪಿತಸ್ಥರನ್ನು ಕಂಡೊಡನೆ ತ್ರಿಪದಿ ವಚನದಲ್ಲಿ ಅವರ ಬುದ್ಧಿಯ ಮಾತು. ಈತನು ೧೫ ರಿಂದ ೧೬ ನೇಯ ಶತಮಾನದ ನಡುವಿನ ಗಡುವಿನಲ್ಲಿದ್ದ ಕವಿ. ಉತ್ತಂಗಿಯವರು ೧೬ ನೆಯ ಶತಮಾನದಲ್ಲಿದ್ದವನೆಂದು ತರ್ಕಿಸಿದರೆ; ಸರ್ವಜ್ಞನ



ಸಂದೇಶವನ್ನು ಬರೆದ ಚೆಚ್ಚುಕೋರರು ಅದಕ್ಕೆ ಬೆಂಬಲ ಸೂಚಿಸಿದ್ದಾರೆ. ಸಂಪಾದನೆಯ ಸಿದ್ಧವೀರಣಾರ್ಯರು ಇವನ ವಚನಗಳನ್ನು ಸಂಗ್ರಹಿಸಿರುವುದನ್ನು ನೋಡಿದರೆ ಕವಿಯು ೧೬ ನೇ ಶತಮಾನಕ್ಕಿಂತ ಪೂರ್ವದವನಾಗಿರಬೇಕೆಂದು ಹೇಳಿದ್ದಾರೆ. ಎಷ್ಟು ಪೂರ್ವದವನೋ ಎಂಬುದನ್ನು ತಿಳಿಯುವುದು ಕಠಿಣ. ವೇಮನ–ಸರ್ವಜ್ಞರ ಸಮಾಗಮವಾಗಿತ್ತು ಎಂದು ಊಹಿಸುವುದಾದರೆ ಸರ್ವಜ್ಞನು ೧೫ ನೆಯ ಶತಮಾನದಲ್ಲಿದ್ದನೆಂಬುದಾಗಿ ತಿಳಿಯಬಹುದು.

ಧಾರವಾಡ ಜಿಲ್ಲೆಯ ಇಂದಿನ ಹಿರೇಕೆರೂರ ತಾಲೂಕಿನ ಮಾಸೂರು ಗ್ರಾಮದಲ್ಲಿದ್ದ ಬಸವರಸನೆಂಬ ಆರಾಧ್ಯ ಬ್ರಾಹ್ಮಣನು ತನ್ನ ಪತ್ನಿ ಮಲ್ಲಮ್ಮನೊಂದಿಗೆ ಬಾಳು ಸಾಗಿಸುತ್ತಿದ್ದನು. ಅನೇಕ ವರ್ಷಗಳಿಂದಲೂ ಸಂತಾನ ಪ್ರಾಪ್ತವಾಗಲಿಲ್ಲವೆಂಬ ಕೊರಗು ಬಸವರಸನನ್ನು ಕಾಡುತ್ತಿತ್ತು. ಮಲ್ಲಮ್ಮನಂತೂ ಮಕ್ಕಳಿಲ್ಲದ್ದಕೆ ದುಃಖಿತಪ್ತಳಾಗಿದ್ದಳು. ಪುತ್ರಾಕಾಂಕ್ಷಿಯಾದ ಆತನ ಕಾಶಿಯ ವಿಶ್ವೇಶ್ವರನನ್ನು ಧ್ಯಾನಿಸಿಕೊಂಡು, ಆತನ ಸನ್ನಿಧಿಗೆ ಹೋಗಿ ಆ ಸ್ವಾಮಿಯ ಅನುಗ್ರಹವನ್ನು ಪಡೆಯಬೇಕೆಂದು ಹಂಬಲಿಸಿದ. ಅದೇ ದಿನ ರಾತ್ರಿ ಕನಸಿನಲ್ಲಿ ಪುತ್ರ ಸಂತಾನದ ಆಶೀರ್ವಾದ ಸಿಕ್ಕಿತು. ಖುದ್ದಾಗಿ ಕಾಶಿಗೆ ಹೋದ. ವಿಶ್ವನಾಥನ ದರ್ಶನ ಪಡೆದುಕೊಂಡು ಸಂತೋಷದಿಂದ ಹಿಂತಿರುಗಿದನು. ದಾರಿಯಲ್ಲಿ ಅಂಬಲೂರಿಗೆ ಬಂದು ಕಾಲಕರ್ಮ ಸಂಯೋಗದಿಂದ ಕುಂಬಾರ ಮಾಳಿಯವಳನ್ನು ಕಂಡು, ಅವಳಲ್ಲಿ ಗರ್ಭದಾನವನ್ನು ಮಾಡಿ ತನ್ನ ಊರಿಗೆ ಹೊರಟು ಹೋದನು. ಈ ಕುಂಬಾರ ಮಾಳಿಯ ಹೊಟ್ಟೆಯಲ್ಲಿಯೇ ಸರ್ವಜ್ಞಮೂರ್ತಿಯು ಉದಿಸಿದುದು. ಕುಂಬಾರ ಸಾಲೆಯಲ್ಲಿ ಜನಿಸಿದ್ದುದರಿಂದ ಇವನಿಗೆ ಸಾಲೆಯ 'ಸರ್ವಜ್ಞ' ನೆಂದೂ ಹೆಸರು ಬಂದಿತು. ಬಸವರಸ ತಂದೆಯಾದರೆ– ಕುಂಬಾರ ಮಾಳಿ ಹೆತ್ತ ತಾಯಿ. ಮಲ್ಲಮ್ಮನು ಸಾಕು ತಾಯಿ. ಈತನ ಮೊದಲ ಹೆಸರು ಪುಷ್ಪದತ್ತ, ಬೆಳೆಬೆಳೆದಂತೆಲ್ಲ ಅನುಭವದ ಆಗರವಾಗಿ, ಸರ್ವರೊಳಗೆ ಒಂದೊಂದು ವಿದ್ಯೆಯ್ನನು ಕಲಿತು ವಿದ್ಯೆಯ ಪರ್ವತವೇ ತಾನಾಗಿ, ವಚನಕಾರನಾಗಿ ಅರಳಿದಾಗ ಸರ್ವಜ್ಞನಾದ. ಇದು ತನ್ನ ವಚನಕ್ಕೆ ಅಂಕಿತವೂ ಆಯಿತು. ಆತನೇ ತನ್ನದೊಂದು ವಚನದಲ್ಲಿ ಹೇಳಿದಂತೆ–

**ಒಬ್ಬನಲ್ಲದೆ ಜಗಕೆ ಮತ್ತೆ ಇಬ್ಬರುಂಟೆ?**
**ಒಬ್ಬ ಸರ್ವಜ್ಞ ಕರ್ತನು–ಜಗಕೆಲ್ಲ**
**ಒಬ್ಬನೇ ದೈವ ಸರ್ವಜ್ಞ**

ಎಂದಂತೆ ನನ್ನ ಕಾವ್ಯನಾಮ ಸರ್ವಜ್ಞ ಇರಬಹುದು. ಆದರೆ ಜಗತ್ತಿನಲ್ಲಿ ಒಬ್ಬನೇ ಒಬ್ಬ ಸರ್ವಜ್ಞನಿದ್ದಾನೆ. ಸೃಷ್ಟಿ, ಸ್ಥಿತಿ, ಲಯಗಳಿಗೆಲ್ಲ ಅವನೇ ಕಾರಣ. ಅವನೊಬ್ಬನೇ

ಭಗವಂತ, ಜಗದೀಶ್ವರ ಎಂದುಲಿದ ಉದಾರ ಹೃದಯಿ ಈತ. ಈ ಕವಿಯ ಜನನದ ಕುರಿತು ಕಟ್ಟು ಕಥೆಯೆಂದು,ಇದು ನಿರಾಧಾರವಾದುದೆಂದೂ, ಊಹೆ ಮಾತ್ರವೆಂದು ಜರಿದವರುಂಟು. ಈತನ ಬಗೆಗೆ ಲೌಕಿಕ ಜೀವನದ ವಿವರಗಳೊಂದೂ ದೊರೆಯುವುದಿಲ್ಲ. ಆದರೆ ದೊರೆತಿರುವ ಸಂಗತಿಗಳಿಗೂ ಯಾವ ಐತಿಹಾಸಿಕ ಆಧಾರಗಳೂ ಇಲ್ಲ. ಆತನ ತ್ರಿಪದಿಗಳೇ ಆಕರ ಸಾಮಗ್ರಿ, ಆಧಾರ ಒದಗಿಸುತ್ತವೆ. ಬಸವಾದಿ ಶರಣರಂತೆ ಸರ್ವಜ್ಞನು ತನ್ನನ್ನು ತಾ ಶಿವ ಸಂತಾನದವನೆಂದೂ ಹೇಳಿಕೊಂಡಿರುವನು. ತ್ರಿಪದಿಗಳ ಪ್ರಾರಂಭದ ವಚನಗಳಲ್ಲಿಯೇ ನಾವಿದನ್ನು ಕಾಣಬಹುದು.

**೧ ಮುನ್ನ ಕೈಲಾಸದಲಿ ಪನ್ನಗಧರನ ಆಳು**
**ಎನ್ನಯ ಹೆಸರು ಪುಷ್ಪದತ್ತನು ಎಂದು**
**ಮನ್ನಿಪರು ದಯದಿ ಸರ್ವಜ್ಞ**

**೨ ಅಂದಿನ ಪುಷ್ಪದತ್ತ ಬಂದ ವರರುಚಿಯಾಗಿ**
**ಮುಂದವ ಸಾಲೆ ಸರ್ವಜ್ಞನೆಂದೆನಿಸಿ**
**ನಿಂದವನು ನಾನೇ ಸರ್ವಜ್ಞ**

**೩ ತಂದೆ ಬಸವರಸ–ತಾಯಿ ಮಳಲಾದೇವಿ**
**ಇಂದು ಶೇಖರನ ವರಪುತ್ರ – ಧರಣಿಗೆ**
**ಬಂದು ಜನಿಸಿದ ಸರ್ವಜ್ಞ**

**೪ ತಂದೆ ಹಾರುವನಲ್ಲ– ತಾಯಿ ಮಾಳಿಯೂ ಅಲ್ಲ**
**ಚಂದ್ರಶೇಖರನ ವರಪುತ್ರ ನಾ ನಿಮ್ಮ**
**ಕಂದನಲ್ಲೆಂಬೆ ಸರ್ವಜ್ಞ!**

**೫ ಮಾಳನೂ ಮಾಳಿಯು– ಕೂಳಿತ್ತ ಹೆಮ್ಮೆಯಲಿ**
**ಕೇಳಲೆನ್ನಾರ ಮಗನೆಂದು ನಾ ಶಿವನ**
**ಮೇಳದವನೆಂದೆ ಸರ್ವಜ್ಞ!**

**೬ ಗಂಡು ತನ್ನದು ಎಂದು– ಲೆಂಡಸುತನೆಂಬುವಳು**
**ಖಂಡಪರಶುವಿನ ವರಪುತ್ರ ಆನು ನೆರೆ**
**ಕಂಡುದನೆ ನುಡಿಯುವೆ ಸರ್ವಜ್ಞ!**

ಮೇಲಿನ ತ್ರಿಪದಿಗಳನ್ನು ಗಮನಿಸುವುದಾದರೆ ಮಾಸೂರಿನ ತಂದೆ–ಅಬ್ಬಲೂರಿನ ತಾಯಿ–ಶಿವನ ಕರುಣೆಗಳ ಫಲವೇ ಸರ್ವಜ್ಞನು. ಕೊನೆಯ ವಚನದಲ್ಲಿ ಸರ್ವಜ್ಞ



ಬಾಲಕನಾಗಿದ್ದಾಗಿನ ಸ್ವಭಾವವು ಪ್ರಕಟವಾಗುತ್ತದೆ. ಸರ್ವಜ್ಞನು ತಾನು ಶಿವಪ್ರಸಾದದಿಂದ ಹುಟ್ಟಿದ ಮೂಲಕ ನಿಮಿತ್ತ ಕಾರಣರಾದ ಬಸವರಸನೂ, ಕುಂಬಾರ ಮಾಳಿಯೂ ತನ್ನ ನಿಜ ತಂದೆ–ತಾಯಿಗಳಲ್ಲವೆಂದೂ, ತಾನೂ ಶಿವನ ಮಗನಾದುದರಿಂದ ಪಾರ್ವತಿಯೇ ತನಗೆ ತಾಯಿಯೆಂದೂ ಹೇಳುತ್ತಾನೆ. ಅಷ್ಟೆ ಅಲ್ಲದೆ ತನಗೆ ಜನ್ಮವನ್ನು ಕೊಟ್ಟ ಮಾಳಿಗೆ ತಾನು ಎಂದಿಗೂ ತಾಯಿಯೆಂದು ಕರೆಯಲಿಕ್ಕಿಲ್ಲವೆಂದೂ, ಒಂದು ಪಕ್ಷದಲ್ಲಿ ಹೀಗೆ ಕರೆಯಬೇಕಾದಲ್ಲಿ ಪರಸ್ತ್ರೀಯರೆಲ್ಲರನ್ನು ತಾಯಿಯೆಂದು ಕರೆಯುವ ಅರ್ಥದಲ್ಲಿಯೇ ಈ ಪದ ಪ್ರಯೋಗ ಮಾಡಿದ್ದೇನೆ ಎಂದೂ ಹೇಳುತ್ತಾನೆ.

**ತಾ, ಎಂದೆನಲ್ಲದೆ– ತಾಯಿ ನಾನೆಂಬೆನೆ?**
**ತಾಯಿಯೆಂದಾನು ನುಡಿದೇನು, ಪರಸ್ತ್ರೀಯ**
**ತಾಯಿಯೆಂದೆಂಬ ಸರ್ವಜ್ಞ!**

ಇದರಿಂದ ಅವನ ಸ್ವಭಾವವು ಎಂಥಾದ್ದೆಂದು ಗೊತ್ತಾಗುತ್ತದೆ. ಈ ಸ್ವಭಾವವು ಅವನು ಬಾಲಕನಾಗಿರುವಾಗಲೇ ಗೊತ್ತಾಯಿತೆಂದು ತಿಳಿಯುತ್ತದೆ. ಈ ಗುಣಕ್ಕಾಗಿ ಅವನು ಎಳೆಯ ಪ್ರಾಯದಲ್ಲಿಯೇ ಮನೆಯಿಂದ ಹೊರಗೆ ಹಾಕಲ್ಪಟ್ಟನು. ಅಂದಿನಿಂದ ಅವನು ವೈರಾಗ್ಯವನ್ನು ತಾಳಿ ಏಕಾಂಗಿಯಾಗಿ ಕನ್ನಡಿಗರ ಮೇಲ್ಮೆಗಾಗಿ ತನ್ನ ಜೀವನ ಕಾಲವನ್ನೇ ಕಳೆದಂತೆ ಕಂಡು ಬರುತ್ತದೆ.

ಸರ್ವಜ್ಞರು ಕನಿಷ್ಠ ೫೦ ವರುಷ ಕಾಲವಾದರೂ ಬದುಕಿರಬಹುದೆಂದು ತಿಳಿಯುವದು. ಬಾಲ್ಯದಿಂದಲೂ ಇವನು ಪಾಪಕೃತಿಗಳಿಗೆ ನಿಷ್ಠೂರನಾದುದರಿಂದ ಮನೆಯರಿಗೆ ಬರ್ಷಣನಾಗಿ ಹೊರಗೆ ಹಾಕಲ್ಪಟ್ಟನು. ಸರ್ವಜ್ಞನು 'ಹಿಂಡನಗಲಿದ ಗಜದಂತೆ' ಆತ ಎಲ್ಲಿ ಇದ್ದನು? ಯಾರಲ್ಲಿ ವಿದ್ಯಾಭ್ಯಾಸ ಮಾಡಿದನು? ಇವನಿಗೆ ಶಿವದೀಕ್ಷೆಯನ್ನು ಕೊಟ್ಟ ಗುರು ಯಾರು? ಎಷ್ಟು ವರ್ಷ ಇವನು ಬಾಳಿದ? ಯಾವೆಡೆಯಲ್ಲಿ ಐಕ್ಯನಾದ? ಇವನ ಸಮಾಧಿ ಸ್ಥಳವೆಲ್ಲಿ? ಇತ್ಯಾದಿ ಸಂಗತಿಗಳನ್ನು ಕಾಲಪುರುಷನ ತನ್ನ ಬ್ರಹತ್ ಗರ್ಭದೊಳಗೆ ಅಡಗಿಸಿಕೊಂಡಿದ್ದಾನೆ. ಸಾಹಿತ್ಯಾಸಕ್ತರೂ, ಇತಿಹಾಸ ಪಂಡಿತರೂ ಈ ರಹಸ್ಯಗಳನ್ನರಿಯಲಿಕ್ಕೆ ತವಕಗೊಂಡಿದ್ದರೂ ಮಾರ್ಗ ತೋರದೇ ಹೋಗಿದೆ. ಹೀಗಿದ್ದರೂ ಕವಿಯ ವಚನಗಳನ್ನು ಓದಿದ ಅನುಭವದ ಮೇಲಿಂದ ನಾವು ಕೆಲವು ಸಂಗತಿಗಳನ್ನು ಊಹಿಸಬಹುದಷ್ಟೇ!

ಸರ್ವಜ್ಞನು ಕುಂಬಾರ ಸಾಲೆಯನ್ನು ಅತಿ ಚಿಕ್ಕವನಿರುವಾಗಲೇ ಬಿಟ್ಟು ಹೊರಟನಂತೆ, ಆಗ ಅನೇಕ ಗುರುಗಳನ್ನು ಸಂದರ್ಶಿಸಿದನು. ಸಿಕ್ಕ ಮಠಗಳಲ್ಲಿ ಆಶ್ರಯ ಹೊಂದಿದನು. ಇಡೀ ದಕ್ಷಿಣ ಭಾರತವನ್ನು ಸಂಚರಿಸಿ ತೀರ್ಥಯಾತ್ರೆ

ಮಾಡಿದನು. ಅಲ್ಲಿ ಹಲವು ವಿದ್ವಾಂಸರನ್ನು, ಯೋಗಿಗಳನ್ನೂ, ಸನ್ಯಾಸಿಗಳನ್ನೂ, ಮುನಿಗಳನ್ನು ಕಂಡನು. ಅವರೆಲ್ಲರಿಂದಲೂ ಉಪದೇಶಾಮೃತವನ್ನು ಸವಿದನು. ಗರ್ವದಿಂದಿರದೇ ಸರ್ವರೊಳಗೊಂದೊಂದು ವಿದ್ಯೆದ ಪರ್ವತವೇ ಆಗಿ– ಸರ್ವಜ್ಞನೆಂದೆನಿಸಿಕೊಂಡು ನೆಚ್ಚಿ ಒಂದೂರೊಳಗಿರದೆ, ಒಬ್ಬರಿಚ್ಚೆಯಲ್ಲಿರದೇ, ಅವರು ಹೇಳಿದಂತೆ ನಡೆಯದೇ ಸನ್ಮಾರ್ಗದ ಹಾದಿ ಹಿಡಿದು, ಸತ್ಯ–ಪ್ರಾಮಾಣಿಕನಾಗಿ, ಮಂಡೆ ಬೋಳಿಸಿಕೊಂಡು, ಮೈಮೇಲೆ ತುಂಡುಗಂಬಳಿ ಹೊದೆದು, ಹಿಂಡನಗಲಿದ ಗಜದಂತೆ, ಊರೂರು ತಿರುಗುತ್ತ ಕರಡಿಕಪ್ಪರ ಹಿಡಿದು, ತಿರಿವರಿಂ ಸಿರಿವಂತರಾರು? ಎಂದು ಹೇಳಿಕೊಂಡು ದೇಶ ಸಂಚಾರ ಮಾಡುತ್ತ, ಕನ್ನಡಿಗರ ಕಳೆಯನ್ನು ಕೊಂಡಾಡುತ್ತ. ಜನರಿಗೆ ನಾನಾ ಪ್ರಕಾರದ ರೀತಿ–ನೀತಿ, ಜೀವನದ ಕ್ರಮಗಳನ್ನು ಬೋಧಿಸುವುದರ ಮೂಲಕ ಲೋಕ ಸೇವೆ ಮಾಡುತ್ತ ಜೀವನವನ್ನು ಶ್ರೀ ಗಂದದಂತೆ ಸವೆಯಿಸಿ ಕಡೆಗೆ ಶಿವಯೋಗ ಸಮಾಧಿಯಲ್ಲಿ ಲಿಂಗೈಕ್ಯನಾದನೆಂದು ತೋರುತ್ತದೆ.

ಸರ್ವಜ್ಞನು ಬ್ರಾಹ್ಮಣನಿಂದ ಜನಿಸಿದರೂ ಕೂಡ ಇವನು ಬ್ರಾಹ್ಮಣರಲ್ಲಿ ಬೆರೆಯಲಿಲ್ಲವೆಂದು ತೋರುವುದು. ಇವನು ವೀರಶೈವ ದೀಕ್ಷೆ ಪಡೆದರೂ ದೀಕ್ಷೆ ಕೊಟ್ಟ ಗುರುಗಳಾರೆಂದು ತಿಳಿಯಲಿಲ್ಲ. ಸರ್ವಜ್ಞನು 'ಸೋಮಶಂಕರ ಗುರು' ವಿನಲ್ಲಿ ಉಪದೇಶಾಮೃತವನ್ನು ಪಡೆದು ವೈರಾಗ್ಯಶಾಲಿಯಾದನೆಂದು ತಿಳಿದು ಬರುತ್ತದೆ. ಬಸವಾದಿ ಶರಣರ ವಚನಗಳನ್ನು ಅನುಸರಿಸಿದಂತೆ, ಅವರ ಜೀವನಾದರ್ಶದ ನೆರಳಿನಲ್ಲಿಯೇ ನಡೆದವನು. ಎಷ್ಟೊ ಕಡೆಗಳಲ್ಲಿ ಸರ್ವಜ್ಞನು ಬಸವಣ್ಣನವರ ವಚನಗಳನ್ನು ಇದ್ದಕ್ಕಿದ್ದಂತೆಯೇ ತೆಗೆದುಕೊಂಡದ್ದು ಕಂಡು ಬರುತ್ತದೆ. ಏಕೇಶ್ವರವಾದ, ಏಕದೇವೋಪಾಸನೆ, ಮೂರ್ತಿಪೂಜೆಯಿಲ್ಲದಿರುವಿಕೆ, ಅವಿವೇಕ ನಿರಸನ, ಅಹಿಂಸಾ ಪ್ರತಿಪಾದನೆ, ಜಾತಿ ಭೇದ ನಿವಾರಣೆ, ಕ್ಷುದ್ರ ದೇವತಾ ತಿರಸ್ಕಾರ, ಶಿವಾಧಿಕ್ಯ ಸ್ಥಾಪನೆ, ಖಂಡಿತವಾದಿತ್ವಗಳನ್ನು ವಚನಕಾರರಿಗಿಂತಲೂ ಸುಂದರವಾದ, ಸರಳ ಶೈಲಿಯ ಕನ್ನಡದಲ್ಲಿ ಸರ್ವಜ್ಞನು ಪ್ರತಿಪಾದಿಸಿದ್ದಾನೆ. ಈತ ಕನ್ನಡ ನಾಡಿಗೆ ಶ್ರೇಷ್ಠವಾದ ಕವಿಯಾಗಿ ಚಿರಕಾಲ ಉಳಿಯುವಂತಹ ಸಾಹಿತ್ಯವನ್ನು ನೀಡಿ ಅಮರನಾಗಿರುವನು. ಸರ್ವಜ್ಞನ ಮಾತಿನಲ್ಲಿಯೇ ಹೇಳುವುದಾದರೆ ಸರ್ವಜ್ಞನ, ಜಾತಿಯು ಮಾನವ ಜಾತಿಯು, ಅವನ ಮತ ದೇವಮತ. ಅವನ ಕಾಲವು ಸರ್ವ ಕಾಲವು ಎಂದು ಅರಿತುಕೊಂಡವರಿಗೆ ಸರ್ವಜ್ಞನ ನಿಜವಾದ ಸೊಗಸು ಅರ್ಥವಾಗುತ್ತದೆ.

**ತ್ರಿಪದಿ ಛಂದಸ್ಸಿನ ಆಯ್ಕೆ:**

ಸರ್ವಜ್ಞನು ಆಶುಕವಿ. ಆತ ಜನರಾಡುವ ಮಾತುಗಳನ್ನೇ ತನ್ನ ವಚನಗಳನ್ನು ರಚಿಸಿದ್ದುಂಟು. ಅಂದರೆ ಯಾವುದಾದರೊಂದು ವಿಷಯವು



ನೆನಪಾದೊಡನೆಯೇ ಅದರ ಮೇಲೆ ಕವನ ಬರೆಯತಕ್ಕವನು. ಇವನು ಹಲಗೆ ಬಳಪವನ್ನು ಹಿಡಿದು ಪೇಚಾಡಿದವನಲ್ಲ. ಬರೆಬರೆದಂತೊಡೆದು ತೊಟ್ಟನೇ ನಿಟ್ಟಿಸಿ ಕಷ್ಟಪಟ್ಟವನಲ್ಲ. ಇವನ ತ್ರಿಪದಿ ರೂಪದ ವಚನಗಳು ಸರಳವಾದುದು. ಸಹಜವಾದುದು. ಇವನ ವಚನಗಳು ಒಂದೇ ಕಡೆಗೆ ಕುಳಿತು ಬರೆದವುಗಳಲ್ಲ. ಅವು ದೇಶಾಟನದಲ್ಲಿ ಪ್ರಸಂಗ ಬಂದಾಗ ಮಿಂಚಿನಂತೆ ಹೊಳೆದು ಊಟೆಯ ನೀರಿನಂತೆ ಉಕ್ಕಿ ಬಂದವು. **'ನಾ ಋಷಿಃ ಕುರಿತೇ ಕಾವ್ಯಂ'** ಎಂಬ ಪ್ರಾಚೀನ ವಾಕ್ಯದಂತೆ ಋಷಿಯ ಅಂಶವಿಲ್ಲದವನು. ಕವಿಯಾಗಲಾರನು. ಕವಿತಾಶಕ್ತಿಯು ಸಂಸ್ಕಾರಜನ್ಯವಾದುದು ಮತ್ತು ಪ್ರಯತ್ನ ಪ್ರಧಾನವಾದುದು. ತಿಲಮಾತ್ರವಾದರೂ ಪೂರ್ವಜನ್ಮದ ಪುಣ್ಯ ಬೇಕಾಗುತ್ತದೆ. ಕವಿತಾಶಕ್ತಿಯು ಸ್ವ ಸಾಮರ್ಥ್ಯದೊಂದಿಗೆ ದೇಶಾಟನ, ಕಾವ್ಯಾವಲೋಕನ, ವಿದ್ವತ್ ಸಂಭಾಷಣೆಗಳಿಂದ ಅಭಿವೃದ್ಧಿಯಾಗುವುದಲ್ಲದೆ ಸುಸಂಸ್ಕೃತವೂ ಪ್ರಾಪ್ತವಾಗುತ್ತದೆ. ಸರ್ವಜ್ಞನಲ್ಲಿ ಈ ಎಲ್ಲ ಗುಣಗಳೂ ಮಿಳಿತವಾಗಿದ್ದವು. ಅಂಥ ಯೋಗ್ಯತೆಯೂ ಇತ್ತು. ಆದುದರಿಂದ ಅವನ ವಚನಗಳು ಅರ್ಥಪೂರ್ಣವೂ, ಪ್ರಾಸಾದಿಕವೂ ಆಗಿವೆ. ಈತನಿಗೆ ಶಾಸ್ತ್ರಜ್ಞಾನ, ಕಾವ್ಯ ಪರಿಚಯ, ಪಂಡಿತಪೂರ್ಣ ಜ್ಞಾನ, ದೇಶ ಪರ್ಯಟನಗಳ ಬಲದಿಂದಲೂ, ತಮ್ಮ ಅಸಾಧಾರಣ ಪ್ರತಿಭಾಶಕ್ತಿಯಿಂದಲೂ ಮಿಗಿಲಾದ ಲೋಕಾನುಭವದಿಂದಲೂ ಹಲವು ಪುರುಷ ರಹಸ್ಯವನ್ನು ಹೇಳಿರುವನು. ವಿಶ್ವಕೋಶದಂತೆ ಸಕಲ ವಿಷಯಗಳ ಜ್ಞಾನವನ್ನು ಮಾಡಿಕೊಡುವುದಕ್ಕಾಗಿ ಸರ್ವಜ್ಞನನು ಕಾಮಶಾಸ್ತ್ರ, ರತಿಶಾಸ್ತ್ರಗಳಲ್ಲಿ ನಿರೂಪಿತವಾದ ರಹಸ್ಯದ ವಿಷಯಗಳನ್ನು ಸಂಗ್ರಹಿಸಿ ಹೇಳಿರುವನಲ್ಲದೆ ಬೇರಾವ ಉದ್ದೇಶವೂ ಇವನಲ್ಲಿದ್ದವೆಂಬುದು ಅವನು ತನ್ನ ಪ್ರತಿಯೊಂದು ಪದ್ಯಕ್ಕೂ ಕೊಟ್ಟಿರುವ ನೈತಿಕ ಹೊಳಪಿನಿಂದ ಮನ ಖಚಿತವಾಗುತ್ತದೆ.

ಸರ್ವಜ್ಞನು ತನ್ನ ವಚನಗಳನ್ನು ಬರೆಯಲು ಜನಪದ ಗರತಿಯರು ಹಾಡಿದ ಸೊಲ್ಲಿನಲ್ಲಿಯೇ, ಕನ್ನಡಮಯವಾದ ತ್ರಿಪದಿ ಛಂದಸ್ಸನೇ ಆಯ್ಕೆ ಮಾಡಿಕೊಂಡಿದ್ದಾನೆ. ಅದನ್ನು ಹಾಡುಗಬ್ಬವೆಂದೇ ಕರೆಯಲಾಗಿದೆ. ಕಾಡಿನ ಕೊರಡನ್ನು ಸುರತರುವನ್ನಾಗಿ ಮಾಡಿದ್ದಾನೆ. ಇದ್ದಲಿಯನ್ನು ವಜ್ರವನ್ನಾಗಿ ಮಾರ್ಪಡಿಸಿದ್ದಾನೆ. ಪಾಮರರ ಒನಕೆ ಪಾಡಿನಲ್ಲಿದ್ದ ತ್ರಿಪದಿಗಳು ಸರ್ವಜ್ಞನ ಹಸ್ತ ಗುಣದಿಂದ ರಾಜನೀತಿಗಳಾಗಿ ಅರಮನೆಗಳನ್ನು ಕೂಡ ಪ್ರವೇಶಿಸುವಂತಾದವು.

'ತ್ರಿಪದಿ' ಛಂದಸ್ಸು ಸಂಸ್ಕೃತ ಜನ್ಯವಲ್ಲ. ಶುದ್ಧ ದೇಶೀಯ ಕನ್ನಡದ ಸೊಗಡು. ಇದು ದ್ರಾವಿಡಕ್ಕೆ ಸೇರಿದುದು. ನಾಗವರ್ಮ ಮತ್ತು ಜಯಕೀರ್ತಿ ಛಂದೋ ಶಾಸ್ತ್ರಜ್ಞರು ಇದರ ಲಕ್ಷಣವನ್ನು ಹೇಳಿದ್ದಾರೆ. ತ್ರಿಪದಿಗೆ ಒಟ್ಟು ಹನ್ನೊಂದು ಗಣಗಳು. ಆರು ಮತ್ತು ಹತ್ತನೆಯ ಗಣಗಳು ಬ್ರಹ್ಮಗಣಗಳಾಗಿದ್ದು ಉಳಿದೆಲ್ಲ

ಗಣಗಳು ವಿಷ್ಣುಗಣಾನ್ವಿತವಾಗಿರುತ್ತವೆ. ಮೂಲ ತ್ರಿಪದಿ ಅಂಶಗಣಾನ್ವಿತವಾಗಿದ್ದು; ಅವುಗಳ ಸ್ಥಾನದಲ್ಲಿ ಮಾತ್ರಾಗಣ ಪ್ರವೇಶಿಸಿದ್ದುದು ಸರ್ವಜ್ಞನ ಹಸ್ತದಿಂದಲೇ ಎಂಬುದು ರುಜುವಾತು. ಮೊದಲನೆಯ ಸಾಲಿನಲ್ಲಿ ಇಪ್ಪತ್ತು ಮಾತ್ರೆಗಳು, ಎರಡನೆಯ ಸಾಲಿನಲ್ಲಿ ಹತ್ತೊಂಬತ್ತು ಮಾತ್ರೆಗಳು, ಮೂರನೆಯ ಚರಣದಲ್ಲಿ ಹದಿನಾಲ್ಕು ಮಾತ್ರೆಗಳು ಬಂದು, ಒಟ್ಟು ಐವತ್ತೂರು ಮಾತ್ರೆಗಳಾಗುತ್ತವೆ. ಈ ಲೆಕ್ಕಾಚಾರದಲ್ಲಿಯೇ ತ್ರಿಪದಿಯ ಲಕ್ಷಣ ಮತ್ತು ರಚನೆಯಿದೆ ಎಂಬುದು ನಿಚ್ಚಳವಾಗಿ ತಿಳಿದು ಬರುತ್ತದೆ. ತ್ರಿಪದಿಯ ರಚನೆಯಿಂದಾಗಿ ಸರ್ವಜ್ಞನ ಕೀರ್ತಿಯು ಕನ್ನಡ ನಾಡಿನಲ್ಲಿ ಗೋಪಾಲರಿಂದ ಭೂಪಾಲರವರೆಗೂ ಹಬ್ಬಲಿಕ್ಕೆ ಕವಿಯ ವ್ಯಕ್ತಿತ್ವದ ಜೊತೆಗೆ ಅವನು ಆಯ್ಕೆ ಮಾಡಿಕೊಂಡ ಛಂದಸ್ಸೂ ಒಂದು ಬಲವಾದ ಕಾರಣವಾಗಿದೆ. ತ್ರಿಪದಿಗೆ–ತ್ರಿವಳಿ, ತ್ರಿವಿಧಿ, ತ್ರಿವಳಿ, ತ್ರಿಪದಿಕಾ ಎಂಬುದಾಗಿ ಬೇರೆ ಬೇರೆ ಹೆಸರುಗಳುಂಟು. ತ್ರಿಪದಿಯಲ್ಲಿ ದ್ವಿತಿಯಾಕ್ಷರವು ಪ್ರಾಸಾರಕ್ಷರವಾಗಿರುತ್ತದೆ. ಸಾಮಾನ್ಯವಾಗಿ ತ್ರಿಪದಿಯ ಎರಡನೆಯ ಚರಣವನ್ನು ಪುನರಾವರ್ತನೆಗೊಳಿಸುತ್ತಾರೆ. ಈ ಪದ್ಧತಿಯು ಹಳ್ಳಿಗರು ಹೇಳುವ ತ್ರಿಪದಿ ಛಂದಸ್ಸಿನ ಒನಕೆವಾಡುಗಳಲ್ಲಿಯೂ ಉಂಟೆಂದು ಕಂಡು ಬರುತ್ತದೆ. ಸರ್ವಜ್ಞನ ನಂತರದ ಕವಿಗಳೆಲ್ಲರೂ ಸರ್ವಜ್ಞನ ಮಾರ್ಗವನ್ನೇ ಅನುಸರಿಸಿದರೆಂದು ತೋರುತ್ತದೆ.

ಆಂಧ್ರ ಕವಿ ಕುಲ ಪಿತಾಮಹನಾದ ಪಾಲ್ಕುರಿಕೆಯ ಸೋಮನಾಥನು 'ದ್ವಿಪದಿ' ಎಂಬ ಕಿರಿಯ ಛಂದಸ್ಸಿನಲ್ಲಿ 'ಬಸವ ಪುರಾಣ' ದಂತಹ ಮಹಾ ಕಾವ್ಯವನ್ನು ನಿರ್ಮಿಸಿದನು. ತಮಿಳು ಭಾಷೆಯಲ್ಲಿ ಸರ್ವೋತ್ತಮ ನೀತಿಯೆ ಗ್ರಂಥವಾದ 'ತಿರುಕ್ಕುರುಳ್' ಕಾವ್ಯವನ್ನು ಋಷಿ ಕವಿಯಾದ ತಿರುವಳ್ಳುವರ್ ಕವಿಯು ಈ 'ಕುರುಳ್' ಲೋಕ ಪ್ರಸಿದ್ಧ ಗ್ರಂಥವನ್ನು 'ದ್ವಿಪದಿ' ಛಂದಸ್ಸಿನಲ್ಲಿ ಬರೆದನು. ಆಂದ್ರಕವಿಕೋಕಿಲೆಯೆನಿಸಿದ ವೇಮನನು ಪ್ರೌಢವಾದ ಚಂಪೂ ಶೈಲಿಯನ್ನು ಬಿಟ್ಟು ಸಾಮಾನ್ಯವಾದ ಗೀತೆಯಾದ, ಕಂದ, ತೇಟ, ಅಟಲವೇದಿ, ಚೌಪದಿಗಳಲ್ಲಿಯೇ ತನ್ನ ವಿಶ್ವಮೋಹಕವಾದ ಕವಿತೆಗಳನ್ನು ರಚಿಸಿದನು. ಇವರಂತೆಯೇ ಕನ್ನಡಿಗರ ಮನ್ನಣೆಗೆ ಪಾತ್ರನಾದ ಸರ್ವಜ್ಞನು ಕಿರಿದಾದ ತ್ರಿಪದಿಗಳಲ್ಲಿ ಹಿರಿದಾದ ತತ್ತ್ವಗಳನ್ನು ಹೇಳಿ ಎಲ್ಲರನ್ನೂ ಬೆರಗುಗೊಳಿಸಿ, ತನ್ನ ಜಾಣ್ಮೆಯನ್ನು ಈ ಮೂಲಕ ಜಗತ್ತಿಗೆ ಪ್ರಕಟಗೊಳಿಸಿದನು. ಜನಸೇವೆಗೋಸ್ಕರವಾಗಿಯೇ ಅಡಿಗೆಯ ಮನೆಯ ಛಂದಸ್ಸು ಎನಿಸಿಕೊಳ್ಳುವ ತ್ರಿವಳಿಯನ್ನು ಬಳಸಿಕೊಂಡು ಲೋಕನೀತಿಯನ್ನು ಬರೆದು ಪ್ರಸಿದ್ಧಿಗೆ ಬಂದನು.

ಈತನ ತ್ರಿಪದಿಗಳು ವಚನಗಳೆಂದೇ ಕರೆಯಿಸಿಕೊಂಡಿವೆ. ಸರ್ವಜ್ಞನ ವಚನಗಳಲ್ಲಿ ಮಹಾಕಾವ್ಯಗಳಲ್ಲಿರುವ ಕೆಲವು ಅಲಂಕಾರಗಳಿವೆ. ಅವುಗಳಲ್ಲಿ ರೂಪಕ,



ಯಮಕ, ಉಪಮೆ, ದೃಷ್ಟಾಂತ, ಶ್ಲೇಷ – ಇವುಗಳೇ ಮುಖ್ಯವಾದವುಗಳೆನ್ನಬಹುದು. ಅಲ್ಲದೇ ಶೃಂಗಾರ, ಭೀಬತ್ಸ, ಅದ್ಭುತರಸಗಳಿದ್ದರೂ ಹಾಸ್ಯರಸವೇ ಈತನ ವಚನಗಳಲ್ಲಿ ಮುಖ್ಯವಾಗಿದೆ. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಗಾಂಭೀರ್ಯಕ್ಕೆ ಆದಿ ಪಂಪನೂ, ಸರಳತೆಗೆ ಅಭಿನವ ಪಂಪನೂ, ಔದಾರ್ಯಕ್ಕೆ ಕುಮಾರವ್ಯಾಸನೂ, ಮಧುರತೆಗೆ ಲಕ್ಷ್ಮೀಶನೂ, ಆರ್ಭಟಕ್ಕೆ ಹರಿಹರನೂ, ಜಾಣತನಕ್ಕೆ ನೇಮಿಚಂದ್ರನೂ, ಸಂಭಾಷಣೆಗೆ ರಾಘವಾಂಕನೂ, ನವೀನತೆಗೆ ಮುದ್ದಣನೂ, ಭಾಷಾಂತರ ನೈಪುಣ್ಯತೆಗೆ ಅಭಿನವ ಕಾಳಿದಾಸನೂ ಸೀಮಾ ಪುರುಷರಾದಂತೆ, ವಿನೋದ ಪ್ರಿಯತೆ ಮತ್ತು ಹಾಸ್ಯಕ್ಕೆ ಸರ್ವಜ್ಞ ಕವಿಯು ಸರ್ವ ಶ್ರೇಷ್ಠನೆನಿಸಿಕೊಂಡಿರುವನು. ಸರ್ವಜ್ಞನು ವಶ್ಯವಾಕ್ಯ ಎಂಬುದನ್ನು ನಾವು ಅವನ ಒಂದೊಂದು ತ್ರಿಪದಿಯಲ್ಲಿಯೂ ಕಾಣಬಹುದಾಗಿದೆ. ಅವನು ತನ್ನ ಮನಸ್ಸಿಗೆ ಬಂದ ಯೋಚನೆಯನ್ನು ಯೋಗ್ಯ ಶಬ್ಧಗಳಿಂದ ಉಚಿತವಾದ ರೀತಿಯಲ್ಲಿ ಧಾರಾಳವಾಗಿ ಹೇಳಲು ಸಮರ್ಥನಾಗಿದ್ದಾನೆ. ಈ ವಿಚಾರದಲ್ಲಿ ಸರ್ವಜ್ಞನು ಯಾವ ಮಹಾಕವಿಗೂ ಕಡಿಮೆಯಾದವನಲ್ಲವೆಂದು ಅವನ ಹೃದಯವನ್ನು ಬಲ್ಲವರೆಲ್ಲರೂ ಒಪ್ಪಲೇಬೇಕು.

ಸರ್ವಜ್ಞ ಕವಿಯು ಪಂಡಿತ–ಪಾಮರರಿಬ್ಬರಿಗೂ ಪ್ರಿಯವಾದ ಕವಿ. ಉದಾತ್ತವಾದ ತತ್ತ್ವಗಳನ್ನು ಸುಲಭವೂ, ಸುಲಲಿತವೂ ಆದ ಕನ್ನಡದಲ್ಲಿ ಹೇಳುವುದೇ ಈತನ ವಿಶಿಷ್ಟತೆಯು. ಸುಲಭ ಶೈಲಿಯಾದರೂ ಸ್ವಲ್ಪೆ ಸ್ವಲ್ಪು ಶಬ್ದಗಳಲ್ಲಿಯೇ ಬಹಳ ಅರ್ಥವನ್ನಿಟ್ಟು ಹೇಳುವುದು ಈ ಕವಿಯ ಇನ್ನೊಂದು ವಿಶಿಷ್ಟತೆ. ಇದು ಸಹ ಸಾಹಿತ್ಯ ದೃಷ್ಟಿಯಿಂದ ಕನ್ನಡ ಭಾಷೆಯ ಮೇಲೆ ವಿಶೇಷ ಪರಿಣಾಮವನ್ನುಂಟು ಮಾಡಿದೆಯೆಂದು ಹೇಳಬೇಕು. ಸ್ವಭಾವ ಪರಿಚಯ, ದೃಷ್ಟಾಂತ ಯೋಜನೆಗಳಲ್ಲಿರುವ ಜಾಣ್ಮೆ, ಪದಗಳ ಲಾಲಿತ್ಯ, ಹತ್ತು ಪುಟಗಳಲ್ಲಿ ಬರೆಯಬಹುದಾದ ವಿಷಯವನ್ನು ಹತ್ತು ಶಬ್ದಗಳಲ್ಲಿ ಅಡಗಿಸುವ ಕೌಶಲ್ಯ ಹೊಂದಿದವನು. ಸರ್ವಜ್ಞನು ಕನ್ನಡ ಸಾಹಿತ್ಯದ ಮೇಲೆ ಮಾಡಿದ ಇನ್ನೊಂದು ವಿಶೇಷ ಪರಿಣಾಮವೇನೆಂದರೆ ಅವನು ಕಾವ್ಯಕ್ಕೆ ಗಂಡುರೂಪವನ್ನು ಕೊಟ್ಟದ್ದು ಎಂದು ಹೇಳಬೇಕು. ಆದುದರಿಂದ ಸರ್ವಜ್ಞನನ್ನು ಗಂಡು ಕವಿ, ಗಂಡುಗಲಿಯೆಂದೂ ಕರೆಯಲಾಗಿದೆ. ಅವನು ತಾನು ರಚಿಸಿದ ವಚನಗಳಲ್ಲಿ ನೋಡಿದ ಸೃಷ್ಟಿಯ ವಸ್ತುಗಳಲ್ಲಿ ಇಲ್ಲವೆ ಪ್ರಾಣಿಗಳಲ್ಲಿ ಗಂಡುತನವನ್ನು ಕೊಂಡಾಡಿರುವನಲ್ಲದೇ, ಹೆಣ್ಣುತನವನ್ನು ಕೊಂಡಾಡಿದ್ದು ಕಡಿಮೆ. ಹೆಣ್ಣಿನಲ್ಲಿಯೂ ಗಂಡುತನವನ್ನು ಕೊಂಡಾಡಿರುವುದು ಕಂಡು ಬರುತ್ತದೆ.

ಪರಬ್ರಹ್ಮವನ್ನು ಬುದ್ಧಿಯಿಂದ ವಿವರಿಸುವುದು ಅಸಾಧ್ಯ. ಅದು ಅನುಭವದಿಂದ ತಿಳಿಯತಕ್ಕ ವಿಷಯವಾದುದರಿಂದಲ್ಲದೆ ತರ್ಕದಿಂದ ತಿಳಿಯಲು ಸಾಧ್ಯವಾದ ಸಂಗತಿ ಎಂಬುದಾಗಿ ತನ್ನದೊಂದು ವಚನದಲ್ಲಿ ಹೇಳಿದ್ದಾನೆ.

**ಬೊಮ್ಮವನು ಅರಿದಿಹರೆ ಸುಮ್ಮನಿದ್ದಿರಬೇಕು**
**ಬೊಮ್ಮವನು ಅರಿದು ಉಸುರಿದರೆ ಕಳ ಹೋಗಿ**
**ಕೆಮ್ಮಿ ಸತ್ತಂತೆ ಸರ್ವಜ್ಞ!**

ಅಂದರೆ ನಾನೇ ಬ್ರಹ್ಮಜ್ಞಾನ ಬಲ್ಲವನೆಂದು ಅಹಂಕಾರ ಪಡುವವರಿಗೆ ಈ ವಚನ ಚಾಟಿಯ ಏಟು ಕೊಟ್ಟಂತಿದೆ. ಪರಬ್ರಹ್ಮವನ್ನು ತಿಳಿದವನು ಬುದ್ಧಿಯಿಂದ ಅದನ್ನು ತಿಳಿಸಲಾರನಾದುದರಿಂದ ಮೌನಿಯಾಗಿರುವನು ಎಂದಿದ್ದಾನೆ ಕವಿ. ಅನುಭವವಿಲ್ಲದ ಬಹುಶ್ರುತತ್ವವು ಕಳವು ಮಾಡುವುದಕ್ಕೆ ಹೋದಂತಿರುತ್ತದೆಯೆಂದು ಹೋಲಿಸಿದ್ದಾನೆ. ಹೆಚ್ಚು ಗ್ರಂಥಗಳನ್ನು ಓದಿದವನು ಅಥವಾ ಬುದ್ಧಿಯಲ್ಲಿ ಮಿಗಿಲಾದವನು ಇವನಿಗೆ ಗಂಟು ಬಿದ್ದರೆ ಕೆಮ್ಮಿ ಅಂದರೆ ವಿಚಾರ ದೋಷವು ಹೊರಬೀಳಲು ಇವನು ಅವನ ಕೈಯಲ್ಲಿ ಸಿಕ್ಕು ಸಾಯುವನು ಎಂದಿದ್ದಾನೆ. ಅಂದರೆ ಪರಾಜಯ ಹೊಂದುವವನು. ಆದುದರಿಂದ ಸರ್ವಜ್ಞನು –

**ಸತ್ಯವನು ಅರಿದಿಹರೆ ಸತ್ತ ಹಾಗಿರಬೇಕು**
**ಸತ್ಯವನು ಅರಿದು ಉಸುರಿದರೆ ಸತ್ತವರಿ**
**ಗತ್ತ ಹಾಗಕ್ಕು ಸರ್ವಜ್ಞ!**

ಎಂದೂ ಹೇಳಿದ್ದಾನೆ. ಹೀಗೆ ಸರ್ವಜ್ಞನ ವಚನಗಳು ಓದುವವರಿಗೆ ಶಕ್ತಿವರ್ಧಕಗಳಂತೆ ಕಾರ್ಯ ನಿರ್ವಹಿಸುತ್ತವೆ. ಅಷ್ಟು ಮೌಲಿಕ ಸಿರಿ ಸಂಪತ್ತಿನ ಗಣಿಯೇ ಈತನ ವಚನಗಳಾಗಿವೆ. ಇವು ಕನ್ನಡ ಸಾಹಿತ್ಯ ಲೋಕಕ್ಕೆ ತವನಿಧಿ, ನೆಲದ ಮರೆಯ ನಿಧಾನವಿದ್ದಂತೆಯೆಂದು ಹೇಳಬಹುದೇ.

~0~



## ೫

## ಸರ್ವಜ್ಞ ಕವಿ: ವಚನಗಳ ಮೌಲ್ಯ ವಿವೇಚನೆ

ಸಾಮಾಜಿಕ ದೃಷ್ಟಿಯಿಂದ ನೋಡಿದರೆ ಸರ್ವಜ್ಞ ಕವಿಯು ತೋರಿರುವ ಚಿತ್ರಪಟಗಳು ಬಹು ವಿಚಿತ್ರ–ಸಚಿತ್ರವಾದವುಗಳಾಗಿವೆ. ಇವುಗಳಲ್ಲಿ ಮಕ್ಕಳಿಲ್ಲದ ಮನೆಯೊಂದನ್ನು ಎಷ್ಟು ಸೊಗಸಾಗಿ, ವಿಚಿತ್ರವಾಗಿ ಚಿತ್ರಿಸಿರುವ ಪದ್ಯಗಳನ್ನು ಗಮನಿಸುವಂತಿವೆ

**ಮಕ್ಕಳಿಲ್ಲದ ಮನೆಯು– ಪಕ್ಕಿಯಿಲ್ಲದ ವನವು**
**ದಿಕ್ಕಿಲ್ಲದವನ ಸಂಸಾರ ಕಳನು–ಮನೆ**
**ಹೊಕ್ಕು ಹೋದಂತೆ ಸರ್ವಜ್ಞ!**

**ಅಂದವಿಲ್ಲದ ವಸ್ತು– ಹಂದರವಿಲ್ಲದ ಮದುವೆ**
**ಕಂದನಿಲ್ಲದವನ ಮನೆವಾರ್ತೆ ಇವು ಮೂರು**
**ಕುಂದು ಕಾಣಯ್ಯ ಸರ್ವಜ್ಞ!**

**ಮೊಸರು ಇಲ್ಲದ ಊಟ– ಕೆಸರು ಇಲ್ಲದ ಗದ್ದೆ**
**ಬಸುರಾಗದವಳ ಬಾಳುವೆಯು– ಬೇಸಿಗೆಯ**
**ಬಿಸಿಲು ಕಾದಂತೆ ಸರ್ವಜ್ಞ!**

**ರೊಕ್ಕವಿಲ್ಲದ ಬಾಳ್ವೆ– ಮಕ್ಕಳಿಲ್ಲದ ಮನೆಯು**
**ಅಕ್ಕರಿಲ್ಲದ ತವರೂರು ಇವು ಮೂರು**
**ದುಕ್ಕ ಕಾಣಯ್ಯ ಸರ್ವಜ್ಞ!**

**ದೇಶವಿಲ್ಲದ ದೊರೆಯು ಕೋಶವಿಲ್ಲದ ಹರದ**
**ಕೂಸುಳಿಯದವಳ ಬಾಳುವೆಯು. ಬೂದಿಯನು**
**ಪೂಸಿಕೊಂಡಂತೆ ಸರ್ವಜ್ಞ!**

ಈ ಮೇಲಿನ ವಚನಗಳನ್ನು ಗಮನಿಸಿದರೆ ಮಕ್ಕಳಿಲ್ಲದ ಮನೆಯೂ ಚಂದವಲ್ಲ, ಹೆಣ್ಣುಮಗಳು ಮದುವೆಯಾದ ಮೇಲೆ ಬಂಜೆತನವಾದಲ್ಲಿ ಆಕೆಗೆ ನೋವೆ ಸರಿ. ದೇಶವಾಳುವವನಿಗೆ ಹಣದ ಅವಶ್ಯಕತೆಯೂ ಬೇಕು. ಅದಿಲ್ಲದಿರೆ ಕತ್ತೆಯು

ಬೂದಿಯಲ್ಲಿ ಬಿದ್ದು ಹೊರಳಾಡಿದಂತೆಯೇ ಸರಿ ಎಂದಿದ್ದಾನೆ ಕವಿ. ಇಂತಹ ಸಾಮಾಜಿಕ ಮೌಲ್ಯಗಳನ್ನೊಳಗೊಂಡ ವಚನಗಳು ಬೇಕಾದಷ್ಟಿವೆ. ಆತನ ಮನ ಸಮಾಜದ ಸುಧಾರಣೆಗಾಗಿ ಸದಾ ತುಡಿಯುತ್ತಿತ್ತು. ಲೋಕದ ಒಳಿತಿಗಾಗಿ ಸಾವಿರಾರು ತ್ರಿಪದಿಗಳಲ್ಲಿ ಅನುಭವದ ಬುತ್ತಿಯನ್ನು ಉಣಬಡಿಸಿ ಮಹಾನ್ ವ್ಯಕ್ತಿಯಾಗಿ ಅರಳಿದರೂ ಅವನಲ್ಲಿ ಕಿಂಚಿತ್ ಮಾತ್ರವೂ ಗರ್ವವಿರಲಿಲ್ಲ. ಅಂತೆಯೇ ಸರ್ವಜ್ಞನೆಂಬುವನು– ಗರ್ವದಿಂದಾದವನೆ? ಸರ್ವರೊಳು ಒಂದೊಂದು ನುಡಿಗಲಿತು ವಿದ್ಯೆಯ ಪರ್ವತವೇ ಆದವನು ಸರ್ವಜ್ಞ ಮೂರ್ತಿ.

ಪ್ರತಿಶತ ಎಪ್ಪತ್ತರಷ್ಟು ಒಕ್ಕಲುತನವನ್ನೇ ಅವಲಂಬಿಸಿದ ದೇಶ ನಮ್ಮದು. ಕಾಯಕವೇ ಕೈಲಾಸ ಎಂಬೋಕ್ತಿಗೆ ಹೆಸರುವಾಸಿಯಾದುದು. ದುಡಿಮೆಯಲ್ಲಿಯೇ ದೇವರನ್ನು ಕಾಣುವ ಶರಣ ಸಂಸ್ಕೃತಿಯನ್ನು ಹೊಂದಿರುವುದೂ ಸತ್ಯ. ದುಡಿಮೆಯಿಲ್ಲದವನ ಬಾಳುವೆ ಅದೇತರ ಬಾಳು ಎನ್ನುತ್ತಾರೆ ಕವಿ.

'ಕಾಯಕ ಮಾಡಿದವನು ನಾಯಕನಾಗುವನು' ಎಂದು ಹೇಳಿರುವ ಕವಿ ಸರ್ವಜ್ಞ ಸರ್ವರೂ ದುಡಿದುಣ್ಣಬೇಕು. ದುಡಿದುಂಡರೆ ಮಾತ್ರ ತಿಂದ ಅನ್ನ ರುಚಿಸುತ್ತದೆ. ಇಲ್ಲದಿರೆ ಕಹಿಯೂಟ ಮಾಡಿದಂತೆಯೆಂದಿದ್ದಾನೆ.

**ಕಾಯಕದ ಭಕ್ತನ ಆಯತವ ನೋಡಿರೋ**
**ಕಾಯಕವ ಬಿಟ್ಟು ಮರುದಿನ – ಕಪ್ಪುರದ**
**ಕಾಯಕವೇ ಒಪ್ಪು ಸರ್ವಜ್ಞ!**

ದುಡಿದು ಉಣ್ಣುವವನ ಬಾಳುವೆಯನ್ನು ದೇವ ತಾ ಮೆಚ್ಚುವನು. ಕಾಯಕ ಮಾಡುವುದರಿಂದ ದೇಹ ಆರೋಗ್ಯದಿಂದಿರುತ್ತದೆ. ಅನ್ನದ ಸಮಸ್ಯೆಯೂ ನಿವಾರಣೆಯಾಗುತ್ತದೆ. ಕಾಯಕವ ಮಾಡದಿದ್ದರೆ ಭಿಕ್ಷಾಪಾತ್ರೆಯು ಕೈಗೆ ಬಂದಂತೆಂದು ವ್ಯಂಗ್ಯ ನುಡಿದಿದ್ದಾನೆ. ಅದು ಕಾರಣ ಮೂಲ ಉದ್ಯೋಗ ಒಕ್ಕಲುತನವೇ ಆದುದರಿಂದ ದುಡಿದುಣ್ಣುವುದೇ ಲೇಸೆಂದ ಸರ್ವಜ್ಞ! 'ಒಕ್ಕಲಿಗ ಒಕ್ಕದಿರೆ ಬಿಕ್ಕುವುದು ಜಗವೆಲ್ಲ' ಎಂಬ ಗಾದೆಯಿದೆ. ಅನ್ನದಾತನೇ ಎಲ್ಲರಿಗಿಂತಲೂ ಮಿಗಿಲಾದವನು.

**ಕೋಟಿ ವಿದ್ಯೆಗಳಲಿ ಮೇಟಿ ವಿದ್ಯೆಯೇ ಮೇಲು**
**ಮೇಟಿಯಿಂ ರಾಟಿ ನಡೆದುದಲ್ಲದೆ ದೇಸ**
**ದಾಟವೇ ಕೆಡುಗು ಸರ್ವಜ್ಞ**

**ಭಂಡಾರ ತುಂಬಿ ನೀ ಬಂಡಿಯಲಿ ಹೇರುವರೇ**
**ಮಂಡಲವನಾಳಿ ಮೆರೆಯುವರೆ ಒಕ್ಕಲನು**
**ಕೊಂಡಾಡಬೇಕು ಸರ್ವಜ್ಞ**



**ಎತ್ತೊಮ್ಮೆ ಹರಗದಲೆ ಬಿತ್ತೊಮ್ಮೆ ನೋಡವಲೆ**
**ಹೊತ್ತೇರಿ ಹೊಲಕೆ ಹೋದರೆ ಅವ ತನ್ನ**
**ನೆತ್ತರವ ಸುಡುವ ಸರ್ವಜ್ಞ**

**ನಲ್ಲೆತ್ತು ಬಂಡಿ ಬಲವಿಲ್ಲದ ಆರಂಭ**
**ಕಲ್ಲು ಕನಸುಗಳನು ಬಿತ್ತಾತ ಹೊಲದೊಳಗೆ**
**ಹುಲ್ಲನೇ ಬೆಳೆವ ಸರ್ವಜ್ಞ**

**ಹರಗದ ಎತ್ತಾಗಿ ಬರಡಾದ ಹಯನಾಗಿ**
**ಹರಟೆ ಹೊಡೆಯುವ ಮಗನಾಗಿ ಹೊಲದಲ್ಲಿ**
**ಕರಡವೇ ಬೆಳೆಗು ಸರ್ವಜ್ಞ**

**ಬೆಕ್ಕು ಮನೆಯೊಳು ಲೇಸು ಮುಕ್ಕು ಕಲ್ಲಿಗೆ ಲೇಸು**
**ನಕ್ಕು ನಗಿಸುವ ನುಡಿ ಲೇಸು– ಊರಿಂಗೆ**
**ಒಕ್ಕಲಿಗ ಲೇಸು ಸರ್ವಜ್ಞ!**

ಇಂಥ ಮುಂತಾದ ವಚನಗಳಲ್ಲಿ ಕೃಷಿ– ಕಾಯಕ– ಒಕ್ಕಲಿಗ– ಕೂಲಿಕೆಲಸದ ಜವಾಬ್ದಾರಿಯನ್ನು ವಹಿಸುವವನ ಒಕ್ಕಲಿಗನ ಪಾತ್ರ ಪ್ರಧಾನಿಗಿಂತಲೂ ಮಿಗಿಲಾದುದು. ದೇಶಕ್ಕೆ ಅನ್ನ ನೀಡುವವನೇ ಅನ್ನದಾತ ಅಥವಾ ರೈತನು ನೀಡುವವನು ಎಂಬುದಾಗಿ ಈ ಮೇಲಿನ ವಚನಗಳಲ್ಲಿ ಕಂಡರಣೆಗೊಂಡಿದೆ.

ಅಹಿಂಸಾ ವಾದವನ್ನು ಖಂಡನೆ ಮಾಡುವಲ್ಲಿ ಸರ್ವಜ್ಞನು ತೋರಿಸಿದ ಅಲೌಕಿಕದ ಜಾಣ್ಮೆ, ಯಥಾರ್ಥ ಹೃದಯ, ನಿಷ್ಪಕ್ಷಪಾತ ಬುದ್ಧಿ, ಸಮತೆ, ಸ್ವತಂತ್ರ ವಿಚಾರ ಮೊದಲಾದವುಗಳೆಲ್ಲವೂ ಇಂದಿನ ಪ್ರಗತಿಶೀಲ ಸಾಹಿತಿಗಳು ಅನುಕರಣ ಮಾಡುವಂತಿವೆ. ಉದಾಹರಣೆಗಾಗಿ ಕೆಲವು ವಚನಗಳಿಂತಿವೆ.

**ಜೀವಿ ಜೀವನ ತಿಂದು ಜೀವಿಪುದು ಜಗವೆಲ್ಲ**
**ಜೀವದಿಂ ಹೊರಗೆ ತಿಂಬುವರ ನಾ ಕಾಣೆ**
**ಜೀವವೀ ಜಗವು ಸರ್ವಜ್ಞ!**

**ಚರ ಜೀವವನು ತಿಂದು ಚರಿಸಿಹುದು ಜಗವರ್ಧ**
**ಚರಿಸದಿಹ ಜೀವಿಗಳ ತಿಂದು ಜಗವರ್ಧ**
**ಚರಿಸುವುದು ನೋಡ ಸರ್ವಜ್ಞ**

**ಒಂದು ಜೀವನ ನೊಂದು ತಿಂದು ಉಳಿದಿಹ ಜಗದಿ**
**ಎಂದು ಕೊಲಲಾಗದಿಂತೆಂಬ ಜನ ಧರ್ಮ**
**ನಿಂದಿಹುದು ಹೀಗೆ ಸರ್ವಜ್ಞ!**

ಎಂದು ಪ್ರಶ್ನಿಸಿದ ಸರ್ವಜ್ಞನು ಅಹಿಂಸಾವಾದದ ಸತ್ಯಾಸತ್ಯವನ್ನು ವಿಮರ್ಶಿಸುವುದಕ್ಕೆ ಹೋಗಿ ಸಾವು–ಜೀವಗಳ ರಹಸ್ಯವನ್ನೇ ಕಂಡು ಹಿಡಿದಿದ್ದಾನೆ. ಈ ವಿಷಯದಲ್ಲಿ ಯಾವ ತತ್ತ್ವಜ್ಞಾನಿಯೂ ಈ ಕವಿಯ ಒಂದು ಹೆಜ್ಜೆ ಮುಂದೆ ಹೋಗಿಲ್ಲವೆಂದೇ ಹೇಳಬೇಕಾಗುತ್ತದೆ. ಈತನ ವಚನಗಳು ಮಡಗಿದ ಚಿನ್ನದಂತಿವೆಯೆಂದರೆ ಅತಿಶಯೋಕ್ತಿಯಾದುದಲ್ಲ.

**ಜೀವಿ ಜೀವದ ತಿಂದು ಜೀವಿಗಳ ಪುಟ್ಟಿಸಿರೆ**
**ಸಾವು ಎಲ್ಲಿಹುದು? ಸ್ವಾರ್ಥವೇ ಜಗದೊಳಗೆ**
**ಸಾವೆಂದು ತಿಳಿಯೋ ಸರ್ವಜ್ಞ!**

**ಸಾವು – ಜೀವಗಳೆರಡು ಭಾವಿಸಲು ಒಂದಯ್ಯ**
**ಜೀವಿಸಲು ಬೀಜ ಸಾವಂತೆ– ಜಗಹಿತಕೆ**
**ಸಾವುದೇ ಜೀವ ಸರ್ವಜ್ಞ!**

ಜೀವಿಯ ಕೊಂದು ಜೀವಿ ಬದುಕುವುದೆಂದರೆ ಎಂತಹ ವಿಪರ್ಯಾಸ? ಜೀವಕ್ಕೆ ಆಧಾರವಾಗಿರುವುದು ಅನ್ನ. ಇಂದು ಅನ್ನಕ್ಕಿರುವ ಮಹತ್ವವು ಜಗತ್ತಿನಲ್ಲಿ ಹಿಂದೆ ಯಾವ ಕಾಲದಲ್ಲಿಯೂ ಇರಲಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಹಸಿದವನಿಗೆ ಅನ್ನವನಿಕ್ಕಿದರೆ ತೃಪ್ತಿ ಮತ್ತಾವುದರಿಂದಲೂ ಸಿಗಲು ಸಾಧ್ಯವಿಲ್ಲ. ಆದುದರಿಂದ ಸರ್ವಜ್ಯ ಕವಿಯು.

**ಅನ್ನ ದೇವರ ಮುಂದೆ ಇನ್ನು ದೇವರುಂಟೆ?**
**ಅನ್ನವುಂಟಾದರೆ ಉಣಲುಂಟು ಜಗಕೆಲ್ಲ**
**ಅನ್ನವೇ ಪ್ರಾಣ ಸರ್ವಜ್ಞ!**

**ಅನ್ನದಾನಕ್ಕಿಂತ ಮುನ್ನ ದಾನಗಳಿಲ್ಲ**
**ಅನ್ನಕ್ಕೆ ಮಿಗಿಲು ಇನ್ನಿಲ್ಲ ಜಗದೊಳಗೆ**
**ಅನ್ನವೇ ದಾನ ಸರ್ವಜ್ಞ।**

**ಅನ್ನವನು ಇಕ್ಕುವುದು ನನ್ನಿಯನು ನುಡಿವುದು**
**ತನ್ನಂತೆ ಪರರ ಬಗೆವುದು ಕೈಲಾಸ ತಾ**
**ಬಿನ್ನಾಣವಕ್ಕು ಸರ್ವಜ್ಞ!**

**ಅನ್ನವನು ಇಕ್ಕುವವನು ಉನ್ನತವ ಪಡೆಯುವನು**
**ಉನ್ನತನು ಅಷ್ಟಯತಿಗಿಕ್ಕಿದಾ ಲೋಭಿ ತಾ**
**ಕುನ್ನಿಗೂ ಕಿರಿಯ ತಾ ಸರ್ವಜ್ಞ!**



ಹೀಗೆ ಅನ್ನದ ಮಹತ್ವವನ್ನು ತನ್ನ ವಚನಗಳ ಮೂಲಕ ಸಾಮಾನ್ಯನಿಗೂ ತಿಳಿಯುವಂತೆ ಪ್ರತಿಪಾದಿಸಿದ್ದಾನೆ. ಆದುದರಿಂದ ಇದ್ದಾಗಲಾದರೂ ಅನ್ನದಾನ, ನೀರು ದಾನ, ದವಸ–ಧಾನ್ಯ–ದಾನ ಮಾಡಬೇಕು. ದೇವರು ಕರುಣಿಸಿದ ಅನ್ನವನ್ನು ಭಿಕ್ಷುಕರಿಗೆ, ದೀನ–ದಲಿತರಿಗೆ ನೀಡಿದರೆ ದೇವರಿಗೇ ಅದು ಸಲ್ಲಿದಂತೆ ಎಂದಿದ್ದಾನೆ. ತನ್ನದೊಂದು ವಚನದಲ್ಲಿ ಹೇಳಿರುವಂತೆ –

**ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು**
**ಪರಿಣಾಮವಕ್ಕು ಪದವಕ್ಕು – ಕೈಲಾಸವೇ**
**ನೆರೆಮನೆಯಕ್ಕು ಸರ್ವಜ್ಞ**

ಎಂದಿದ್ದಾರೆ. ಅನ್ನ–ಪಾನ–ದಾನದಿಂದ ಜೀವಿಯು ತೃಪ್ತಿಪಟ್ಟು ಸ್ಮರಿಸುತ್ತದೆ. ಬಡವನಾಗಲಿ, ಬಲ್ಲಿದನಾಗಲಿ, ಉಳ್ಳವನಾಗಲಿ ದಾನ ಮಾಡಿ ಪುಣ್ಯ ಕಟ್ಟಿಕೊಳ್ಳಬೇಕೆಂದು ಹೇಳಿರುವುದು ಕಂಡು ಬರುತ್ತದೆ. ಹೊಟ್ಟೆಗೆ ಊಟವಿಲ್ಲದೆ ಯಾವ ಕೆಲಸ ಕಾರ್ಯಗಳೂ ಸಾಂಗವಾಗಿ ಜರುಗಲಾರವು. ವಚನಕಾರರಂತೆ ಬೆಡಗಿನ ವಚನಗಳನ್ನು ಸರ್ವಜ್ಞನು ರಚಿಸಿದ್ದುಂಟು! ಪ್ರತಿಯೊಂದು ವಚನವೂ ಬೆಡಗಿನಿಂದ ಕೂಡಿದ್ದು; ಮಿಂಚಿನಂತೆ ಥಳ್ಳನೇ ತನ್ನ ಭಾವ ಮೌಲ್ಯವನ್ನುಂಟು ಮಾಡುತ್ತವೆ.

**ಮಾತು–ನೀತಿ–ರೀತಿ ಹೇಗಿರಬೇಕು:**

"ಮಾತು ಆಡಿದರೆ ಹೋಯ್ತು– ಹೊತ್ತು ಮುಳುಗಿದರೆ ಹೊಯ್ತು" ಎಂಬ ಗಾದೆಯಂತೆ; ಮಾತು ಯಾವಾಗಲೂ ಹಿತಮಿತವಾಗಿರಬೇಕು ಮತ್ತೊಬ್ಬರಿಗೆ ನೋವನ್ನುಂಟು ಮಾಡುವಂತಿರಬಾರದು ಎಂಬುದಕ್ಕೆ ಕವಿ ಸರ್ವಜ್ಞನ ವಚನಗಳು ಇಂತಿವೆ –

**ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ**
**ರಸಿಕನಲ್ಲದವನ ಬರಿ ಮಾತು ಕಿವಿಗೆ ಕೂರ್**
**ದಶಿಯು ಬಡಿದಂತೆ ಸರ್ವಜ್ಞ!**

**ಮಾತಿನಾ ನಡೆ–ನುಡಿಯು ಮಾತಿನಿಂದ ಹಗೆ ಕೊಲೆಯು**
**ಮಾತಿನಿಂ ಸರ್ವ ಸಂಪದವು–ಲೋಕಕ್ಕೆ**
**ಮಾತೇ ಮಾಣಿಕ್ಯವು ಸರ್ವಜ್ಞ!**

**ಮಾತು ಮಾತನೇ ಆಡಿ ಮಾತಿನಲಿ ಮನೆ ಮಾಡಿ**
**ಮಾತಿನಲಿ ಹರಸಿ, ತಾನೆದ್ದು ಹೋದಾ**
**ತನವನೇ ಜಾಣ ಸರ್ವಜ್ಞ!**

ಮಾತುಗಳು ಸತ್ಯದ ಬಿತ್ತುಗಳೇ ಆಗಿರಬೇಕು ಹೊರತು ಸುಳ್ಳಿನ ಕಂತೆ ಅಥವಾ ಸರಮಾಲೆಯಾಗಬಾರದು ಎಂಬುದು ಮಾತು–ಮಾತಿನ ಮರ್ಮವಾಗಿದೆ. ಲೋಕದ ವ್ಯವಹಾರದಲ್ಲಿ ನೀತಿಗೆ–ಮಾತಿಗೆ ನಂಟಿದೆ, ನಂಬಿಕೆಯಿದೆ. ಚರಿತ್ರೆಗಿಂತಲೂ ಚಾರಿತ್ರ್ಯ ಮುಖ್ಯವೆಂಬಂತೆ, ಮಾತಿಗೆ ಬಲ್ಮೆ ಬರಬೇಕಾದರೆ ನೀತಿಯ ತಳಹದಿಯ ಮೇಲೆಯೇ ನಿಂತಿರುತ್ತದೆ.

**ನೀತಿ ದೇಶದ ಮಧ್ಯೆ – ನೀತಿಯ ಮನೆಯಿಹುದು**
**ಪಾತಕರಿಗಹುದು ಸೆರೆಮನೆಯು – ಅರಮನೆ**
**ಪುನೀತರಿಗೆಂದ ಸರ್ವಜ್ಞ**

**ಸತ್ಯವೆಂಬುದು ತಾನು ನಿತ್ಯದಲಿ ಮೆರೆದಿಹುದು**
**ಮಿಥ್ಯ ಸತ್ಯವನು ಬೆರೆದರೂ – ಇಹಪರದಿ**
**ಸತ್ಯಕ್ಕೆ ಜಯವು ಸರ್ವಜ್ಞ!**

**ಬತ್ತಿಯೆಣ್ಣೆಗಳೆರಡು ಹೊತ್ತಿ ಬೆಳಗುವ ತೆರದಿ**
**ಸತ್ಯ ನೀತಿಗಳು ಬೆಳಗಿಹವು ಜೋಡಗಲೆ**
**ಕತಲೀ ಜಗವು ಸರ್ವಜ್ಞ!**

ಸತ್ಯ–ನ್ಯಾಯ–ಧರ್ಮ ನೀತಿಗಳು ಯಾವತ್ತೂ ಚಲಾವಣೆಯ ನಾಣ್ಯಗಳಿದ್ದಂತೆ. ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲವೆಂಬಂತೆ! ಪಾಪ ಕೃತ್ಯಗಳನು ಮಾಡದಿರು, ಪುಣ್ಯವನೇ ಮಾಡು, ಹರನಡಿವಿಡಿ ಶಾಂತರೊಡನಾಡು ಎಂದು ನಿಜಗುಣ ಶಿವಯೋಗಿಗಳು ಹೇಳಿರುವಂತೆ ಸರ್ವಜ್ಞನೂ ತನ್ನ ಅನೇಕ ವಚನಗಳಲ್ಲಿ ಈ ಮಾತುಗಳನ್ನು ಪೋಣಿಸಿದ್ದಾನೆ.

**ಪಾಪ–ಪುಣ್ಯಗಳೆಂಬ ತಿಣ್ಣ ಭೇದಗಳಿಂದ**
**ತನ್ನಗೀ ಜಗವು ನಡೆದಿಹುದು–ಅಲ್ಲದಡೆ**
**ನುಣ್ಣಗಾಗಿಹುದು ಸರ್ವಜ್ಞ!**

**ಮುನ್ನ ಮಾಡಿದ ಪಾಪ ಹೊನ್ನಿಂದ ಪೋಪುದೆ?**
**ಹೊನ್ನಿನ ಪುಣ್ಯವದು ಬೇರೆ, ಪಾಪ ತಾ**
**ಮುನ್ನಿನಂತಿಹುದು ಸರ್ವಜ್ಞ!**

**ಹಿಂದೆ ಪಾಪವ ಮಾಡಿ ಮುಂದೆ ಪುಣ್ಯವು ಹೇಗೆ?**
**ಹಿಂದು ಮುಂದರಿದು ನಡೆಯದಿರೆ ನರಕದಲಿ**
**ಬೆಂದು ಸಾಯುವುದು ಸರ್ವಜ್ಞ!**



**ಅರಿಯದೆಸಗಿದ ಪಾಪ ಅರಿತರದು ತನಗೊಳಿತು**
**ಅರಿತರಿತು ಮಾಡಿ ಮರೆತರದು ನಯನವನು**
**ಇರಿದುಕೊಂಡಂತೆ ಸರ್ವಜ್ಞ!**

**ಅರಿತು ಮಾಡಿದ ಪಾಪ ಮರೆತರದು ಪೋಪುದೆ?**
**ಮರೆತರೆ ಮರವ ಬಿಡಿಸುವುದು ಕೊರತೆಯದು**
**ಅರಿತು ನೋಡೆಂದ ಸರ್ವಜ್ಞ!**

**ಪುಣ್ಯ ತನಗುಳ್ಳನಕ ಮನ್ನಣೆಯು ಪಿರಿದಕ್ಕು**
**ಹಣ್ಣಿದ ಕಾರ್ಯ ಫಲವಕ್ಕು ಮುಟ್ಟಿದ**
**ಮಣ್ಣು ಹೊನ್ನಕ್ಕು ಸರ್ವಜ್ಞ!**

**ತೋಡಿರ್ದ ಬಾವಿಂಗೆ ಕೂಡಿರ್ದ ಜಲಜಾಕ್ಷಿ**
**ಮಾಡಿರ್ದಕ್ಕೆಲ್ಲ ಮನಸಾಕ್ಷಿ ಸರ್ವಕೂ**
**ಮೃಡನೇ ತಾ ಸಾಕ್ಷಿ ಸರ್ವಜ್ಞ!**

**ಹರೆಯಲ್ಲಿನಾ ಪಾಪ ಕೆರೆಯಲ್ಲಿ ಪೋಪುದೆ ?**
**ಓರೆಗಲ್ಲಿನಂತೆ ವಿಧಿಯಿರಲು – ನೀತಿಯ**
**ಇರವು ಬೇರೆಂದ ಸರ್ವಜ್ಞ!**

**ಕಣ್ಣು ನಾಲಗೆ ಮನವು ತನ್ನದೆಂದೆನಬೇಡ**
**ಅನ್ಯರನು ಕೊಂದರೆನಬೇಡ ಇವು ಮೂರು**
**ತನ್ನನ್ನೇ ಕೊಲ್ಲುವವು ಸರ್ವಜ್ಞ!**

ಈ ಎಲ್ಲ ವಚನಗಳನ್ನು ಗಮನಿಸಿದ್ದೇಯಾದರೆ ನೀತಿಯ ಬದುಕಿಗೆ ದಾರಿದೀಪದಂತಿವೆ. ಇವೆಲ್ಲ ಮನುಷ್ಯ ಜಾತಿಗೆ ಬೇಕಾಗಿರುವ ದಿವ್ಯ ಸಂಪತ್ತು. ಸರ್ವಜ್ಞ ನೀಡಿರುವ ಮಾರ್ಗದರ್ಶಿ ಸೂತ್ರಗಳಿಗೆ ಬೆಲೆಕೊಟ್ಟು ನಡೆದರೆ ಮೋಕ್ಷ ಕಟ್ಟಿಟ್ಟಂಥ ಬುತ್ತಿ ಎಂದು ಹೇಳಬಹುದು.

ಸಮಾಜದಲ್ಲಿ ಬಾಳುತ್ತಿರುವ ಪ್ರತಿಯೊಬ್ಬ ವ್ಯಕ್ತಿಯೂ ನಾನು ಜಾತಿ ವಿಜಾತಿ ಮಾಡಲಾರದೇ ನಾವೆಲ್ಲರೂ ಒಂದೇ ಕುಲದವರು ಎಂಬ ಭಾವವಿರಲಿ ಎಂದು ಹೇಳಿದ ಸರ್ವಜ್ಞನ ವಚನಗಳು ಅಸಂಖ್ಯಾತ ಇದ್ದುದು ಕಂಡು ಬರುತ್ತದೆ. ಅವುಗಳಲ್ಲಿ ಕೆಲವನ್ನಿಲ್ಲಿ ಆಯ್ದುಕೊಂಡು ವಿಶ್ಲೇಷಿಸಲಾಗಿದೆ.

**ನಡೆಯುವುದೊಂದೇ ಭೂಮಿ ಕುಡಿಯುವುದೊಂದೇ ನೀರು**
**ಸುಡುವಗ್ನಿ ಒಂದೇ ಇರುತಿರಲು ಕುಲಗೋತ್ರ**
**ನಡುವೆತ್ತಣದು ಸರ್ವಜ್ಞ?**

**ಉತ್ತಮರ ವರ್ಣಗಳನು ಉತ್ತಮರು ಎನಬೇಡ**
**ಮತ್ತೆ ತನ್ನಂತೆ ಬಗೆವರನೆಲ್ಲರನು**
**ಉತ್ತಮರು ಎನು ಸರ್ವಜ್ಞ!**

**ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೇ**
**ಜಾತಿ – ವಿಜಾತಿ ಎನಬೇಡ – ದೇವನು**
**ಒಲಿದಾತನೇ ಜಾತ ಸರ್ವಜ್ಞ!**

**ಕುಡಿವ ನೀರನು ತಂದು ಅಡಿಗೆ ಮಾಡಿದ ಮೇಲೆ**
**ಒಡಲುಣ್ಣಲಾಗದಿಂತೆಂಬ ಮನುಜರ**
**ಒಡನಾಟವೇಕೆ ಸರ್ವಜ್ಞ!**

**ಅವಯವಗಳೆಲ್ಲರಿಗೆ ಸವನಾಗಿ ಇರುತಿರಲು**
**ಭವಿ, ಭಕ್ತ, ಸ್ವಪಚ ಶೂದ್ರರಿವರಿಂತೆಂಬ**
**ಕವನವೆತ್ತಣದು ಸರ್ವಜ್ಞ!**

**ಯಾತರದು ಹೂವೇನು ನಾತರದು ಸಾಲದೆ?**
**ಜಾತಿ–ವಿಜಾತಿಯೆನಬೇಡ, ದೇವನೊಲಿ**
**ದಾತನೇ ಜಾತ ! ಸರ್ವಜ್ಞ**

**ಹಾರುವರು ಸ್ವರ್ಗದ ದಾರಿಯನು ಬಲ್ಲರೆ?**
**ನಾರಿ ಪತಿವ್ರತದಿ ನಡೆದಿಹರೆ ಸ್ವರ್ಗದ**
**ದಾರಿದೋರುವಳು ಸರ್ವಜ್ಞ!**

**ಭೂತೇಶಗೆರಗುವನು ಜಾತಿ ಮಾದಿಗನಲ್ಲ**
**ಜಾತಿಯಲಿ ಹುಟ್ಟಿ ಶಿವನಿಗೆ ಶರಣೆನ್ನ**
**ದಾತನೇ ಮಾದಿಗನು ಸರ್ವಜ್ಞ!**

ಈ ಎಲ್ಲ ವಚನಗಳು ಜಾತಿ–ವಿಜಾತಿಗಳನ್ನು ಮಾಡಿಕೊಂಡು ಬದುಕುತ್ತಿರುವ ಜಾತಿವಾದಿಗಳಿಗೆ ತಕ್ಕ ಉತ್ತರವನ್ನು ಸರ್ವಜ್ಞ ಕವಿಯು ಕೊಟ್ಟದ್ದವು ಆಗಿವೆ. ಪ್ರತಿಯೊಬ್ಬರ ಧಮನಿ–ಧಮನಿಗಳಲ್ಲಿ ಹರಿಯುತ್ತಿರುವ ರಕ್ತ ಒಂದೇ, ಸೇವಿಸುವ ಗಾಳಿ, ನೀರು, ಅಗ್ನಿ, ಅನ್ನ, ಆಹಾರ ಒಂದೇ ಆಗಿರುವಾಗ ಮತ್ತೇಕೆ ಉಚ್ಚ–ನೀಚ, ಮೇಲು ಜಾತಿ–ಕೀಳು ಜಾತಿ–ವಿಜಾತಿ ಎಂದು ಪರಿಗಣನೆ ಮಾಡುವಿರಿ? ಎಂದು ಪ್ರಶ್ನಿಸಿದ್ದಾನೆ ಸರ್ವಜ್ಞ ! ಪರಮಾತ್ಮನ ಎದುರಿಗೆ ಯಾರೂ ಮೇಲಲ್ಲ, ಕೀಳಲ್ಲ;



ಕಾಯಾ–ವಾಚಾ–ಮನಸಾ ಅನ್ಯೋನ್ಯತೆಯಿಂದ ಬಾಳುವುದನ್ನು ಕಲಿಯಬೇಕೆಂದು ಕವಿಯ ಇಚ್ಛೆಯಾಗಿದೆಯೆಂಬುದನ್ನು ಅರಿತುಕೊಳ್ಳಬೇಕು!

ಮಾನವನ ಬದುಕಿಗೆ ಪಂಚ ಮಹಾಭೂತಗಳು ಎಷ್ಟು ಅವಶ್ಯಕವೋ ಅಷ್ಟೇ ದೇಹಾರೋಗ್ಯಕ್ಕೆ ಅನ್ನ–ನೀರು–ಆಹಾರಗಳು ಅವಶ್ಯಕ. ಇವಿಲ್ಲದೆ ಬದುಕು ಅದ್ಹೇಗೆ ನಡೆದೀತು! ಆದರೆ ದೇಹದ ಆರೋಗ್ಯಕ್ಕೆ ಹಿತಮಿತವಾದ ಅನ್ನ ಕಂಡು ಬರುತ್ತದೆ. ಆತ ಭವರೋಗ ವೈದ್ಯನೂ ಹೌದು: ಮಾನವ ಕಾಯಿಲೆ ನಿವಾರಣೆಯ ವೈದ್ಯನೂ ಹೌದು! ಇಂದಿನ ವಿಜ್ಞಾನ ಯುಗದಲ್ಲಿ ಆಹಾರ ಪದಾರ್ಥಗಳನ್ನು ಪೃಥಕ್ಕರಿಸಿ, ಅವುಗಳಲ್ಲಿರುವ ಪೋಷಕ ಧಾತುಗಳನ್ನು ಕಂಡು ಹಿಡಿದು ಆಯಾ ಆಹಾರಗಳನ್ನು ಶರೀರದ ಬೆಳವಣಿಗೆಗಾಗಿಯೂ ರೋಗ ನಿವಾರಣೆಗಾಗಿಯೂ ಅನೇಕ ವೈದ್ಯರು ತಮ್ಮ ರೋಗಿಗಳಿಗೆ ವಿಧಿಸುತ್ತಾರೆ. ಇವುಗಳಿಗೆ ಎ, ಬಿ, ಸಿ, ಡಿ, ಇ, ಬಿ, ಎನ್, ಬಿ–ಟು, ಡಿ–ಎನ್–ಡಿ–ಟು, ಹೀಗೆ ಅನೇಕ ಪ್ರಕಾರವಾಗಿದೆ. ಆಹಾರಗಳ ಪರಿಣಾಮವನ್ನು ಕುರಿತು ಪ್ರಸ್ತಾಪಿಸುವಲ್ಲಿ ಸರ್ವಜ್ಞನು ನುಡಿದಿರುವ ವಚನಗಳನ್ನು ಪರಿಶೀಲಿಸಿದರೆ, ಮೇಲ್ಕಂಡ ವಿಷಯುವು ಅವನಿಗೆ ಮರೆಯಾಗಿದ್ದಿಲ್ಲವೆಂದು ತೋರುತ್ತದೆ.

**ಅಕ್ಕಿಯನು ಉಂಬುವನು ಹಕ್ಕಿಯಂತಾಗುವನು**
**ಸಿಕ್ಕು ರೋಗದಲಿ ವೈದ್ಯನಿಗೆ ರೊಕ್ಕವ**
**ನಿಕ್ಕುತಲಿರುವ ಸರ್ವಜ್ಞ**

**ಜೋಳವನು ತಿಂಬುವನು ತೋಳನಂತಾಗುವನು**
**ಬೇಳೆ ಬೆಲ್ಲಗಳನು ನಂಬುವನು ಬಹುಕಾಲ**
**ಬಾಳನೆಂದರಿಗೂ ಸರ್ವಜ್ಞ!**

**ನವಣೆಯನು ಉಂಬುವನು ಹವಣಾಗಿ ಇರುತಿಹನು**
**ಭವಣಿಗಳಿಗವನು ಒಳಬೀಳನೀ ಮಾತು**
**ಟವಣೆಯಲ್ಲೆಂದ ಸರ್ವಜ್ಞ!**

**ರಾಗಿಯನು ಉಂಬುವನು ನಿರೋಗಿಯೆಂದೆನಿಸುವನು**
**ರಾಗಿ ಭೋಗಿಗಳಿಗಿಲ್ಲ ಬಡವರಿಗಾಗಿ**
**ಬೆಳೆದಿಹುದು ಸರ್ವಜ್ಞ**

**ಒಮ್ಮೆಯುಂಡವ ತ್ಯಾಗಿ, ಇಮ್ಮೆಯುಂಡವ ಭೋಗಿ**
**ಬಿಮ್ಮಗುಂಡವ ನೆರೆ ರೋಗಿ – ಯೋಗಿ ತಾ**
**ಸುಮ್ಮಗಿರುತಿಹನು ಸರ್ವಜ್ಞ!**

ಕವಿಯು ಯಾವ ಯಾವ ದವಸ ಪದಾರ್ಥಗಳನ್ನು ಅಟ್ಟು ಉಣಬೇಕೆಂಬುದರ ವಿವರಣೆಯನ್ನೇ ಮೇಲಿನ ವಚನಗಳಲ್ಲಿ ನಿರವಿಸಿದ್ದಾನೆ. ಅವುಗಳ ಪರಿಣಾಮವನ್ನಲ್ಲದೆ ವೈದ್ಯಕೀಯ ವಿಷಯವಾಗಿಯೂ ಅನೇಕ ಬುದ್ಧಿವಾದಗಳನ್ನು ಹೇಳಿದ್ದಾನೆ. ಆರೋಗ್ಯವೇ ಭಾಗ್ಯ ಎನ್ನುವವರು ಇವುಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ನಡೆಯುವುದು ಒಳ್ಳೆಯದು. ರೋಗ ಬಂದ ನಂತರ ಔಷಧ ಕೊಡುವುದಕ್ಕಿಂತ ರೋಗ ಬಾರದಂತೆ ದೇಹ ಕ್ಷೇಮವನ್ನು ಕಾಪಾಡಿಕೊಳ್ಳುವುದೇ ಉತ್ತಮ ಉಪಾಯವೆಂದು ಅವನ ಖಂಡಿತ ಮತವಾಗಿದೆ. ಆತ ಹೇಳಿದ ವೈದ್ಯ ಪದ್ಧತಿಯು ಆಹಾರವನ್ನು ಕ್ರಮವರಿತು, ಹವಣಾಗಿ, ಮಿತವಾಗಿ ಸೇವಿಸಬೇಕು ಎಂದಿದ್ದಾನೆ.

**ಉಂಡು ಕೆಂಡವ ಕಾಸಿ– ಉಂಡು ನೂರು ಅಡಿಯಿಟ್ಟು**
**ಗಂಡು ಮೇಲಾಗಿ ಮಲಗಿದವನು – ವೈದ್ಯನ**
**ಗಂಡ ಕಾಣಯ್ಯ ಸರ್ವಜ್ಞ**

**ಹಸಿಯದಿರೆ ಕಡುಗಾಯ್ದ – ಬಿಸಿನೀರ ಕುಡಿಯುವುದು**
**ಹಸಿವಕ್ಕು ಸಿಕ್ಕ ಮಲವಕ್ಕು–ದೇಹವು**
**ಸಸಿನವಾಗಿಹುದು ಸರ್ವಜ್ಞ!**

**ಹಸಿವಿಲ್ಲದುಣಬೇಡ ಹಸಿದು ಮತ್ತಿರಬೇಡ**
**ಬಿಸಿಗೂಡಿ ತಂಗೂಳುಣಬೇಡ ವೈದ್ಯನ**
**ಬೆಸಸಲೇ ಬೇಡೆಂದ ಸರ್ವಜ್ಞ!**

**ನಿದ್ದೆಗಳು ಬಾರವು– ಬುದ್ಧಿಗಳು ತೋರವು**
**ಮುದ್ದಿನ ಮಾತು ಸೊಗಸವು – ಬೋನದ**
**ಮುದ್ದೆ ತಪ್ಪಿದರೆ ಸರ್ವಜ್ಞ!**

ಮಲಶುದ್ಧಿಯಿಂದ ರಕ್ತ ಶುದ್ಧಿ, ರಕ್ತ ಶುದ್ಧದಿಂದ ಶರೀರ ಕ್ಷೇಮ, ಬಿಸಿ ನೀರೇ ಇದಕ್ಕೆ ಉತ್ತಮ ಔಷಧ ಎಂದಿದ್ದಾನೆ. ರೋಗಕ್ಕೆ ತಕ್ಕ ಔಷಧವನ್ನು ತೆಗೆದುಕೊಳ್ಳುವುದಕ್ಕಿಂತ ಮುನ್ನ ಶರೀರಕ್ಕೆ ಬೇಕಾಗುವ ತಕ್ಕ ಆಹಾರವನ್ನು ಮಿತವ್ಯಯ ಕ್ರಮದಲ್ಲಿ ತೆಗೆದುಕೊಳ್ಳುವುದೇ ಉತ್ತಮ ಉಪಾಯವೆಂಬುದು ಆತನ ಅಭಿಮತ. ಊಟ ಬಿಟ್ಟು ಇರಲಿಕ್ಕಾಗದು. ಹಸಿವಿನಿಂದ ಬಳಲುವುದಕ್ಕಿಂತ ತಕ್ಕ ಮಟ್ಟಿಗಿನ ಆಹಾರ ಸೇವನೆ ಅತ್ಯಗತ್ಯ ಎಂಬುದಾಗಿಯೂ ಈ ಮೇಲಿನ ವಚನಗಳಲ್ಲಿ ಪ್ರತಿಪಾದಿಸಿದ್ದಾನೆ. ಇದಕ್ಕಾಗಿಯೇ ಅವನು ಅಕ್ಕಿ, ಜೋಳ ನವಣೆ ಇವುಗಳ ಪರಿಣಾಮವನ್ನು ಕುರಿತು ವರ್ಣಿಸಿದ್ದಾನೆ.

**ಮಜ್ಜಿಗೆ ಊಟಕ್ಕೆ ಲೇಸು, ಮಜ್ಜನಕೆ ಮಡಿಲೇಸು**
**ಕಜ್ಜಾಯ ತುಪ್ಪ ಉಣಲು ಲೇಸು, ಮನೆಗೊಬ್ಬ**
**ಅಜ್ಜಿ ಲೇಸೆಂದ ಸರ್ವಜ್ಞ**



**ರೊಟ್ಟಿ ಇಲ್ಲದ ಊಟ, ಹೊಟ್ಟೆಗಿಲ್ಲದ ಕೂಟ**
**ಇಟ್ಟೆಯರಿಲ್ಲದ ಅರಸರ ಮನೆಯು – ಚಂದನವ**
**ಕುಟ್ಟಿ ಕುಡಿದಂತೆ ಸರ್ವಜ್ಞ!**

ಉತ್ತರ ಕರ್ನಾಟಕದಲ್ಲಿ ರೊಟ್ಟಿಯ ಊಟ ಲೇಸು ಎಂದು ಹೇಳಿದ ಸರ್ವಜ್ಞನು. ಊಟದ ನಂತರ ಒಂದು ಲೋಟಾ ಮಜ್ಜಿಗೆ ಸೇವಿಸಿದರೆ ಪಚನಕ್ರಿಯೆ ಚನ್ನಾಗಿ ನಡೆಯುತ್ತದೆಯೆಂದು ಹೇಳಿದ್ದಾರೆ. ಸಕಲ ಪಾನಕಗಳಲ್ಲಿ ಮಜ್ಜಿಗೆಯೇ ಶ್ರೇಷ್ಠ. ಇದರ ಮುಂದೆ ಥಮ್ಸ್‌ಪ್, ಕೋಕೋಕೋಲಾ ಮತ್ತಾವ ವಿದೇಶೀ ಪಾನಿಯಗಳು ಮಜ್ಜಿಗೆಗೆ ಸರಿದೂಗಲಾರವು. ಮಜ್ಜಿಗೆಯಲ್ಲಿ ಜೀವ ಪೋಷಕ ಕ್ರಿಮಿಗಳಿರುವುದರಿಂದ ಅದನ್ನು ಸದಾ ಸೇವಿಸುವುದು ಅತ್ಯುತ್ತಮವೆಂದು ಹೇಳಿದ್ದಾನೆ. ಆದುದರಿಂದ ಆತ ಮಜ್ಜಿಗಿಲ್ಲದ ಊಟ– ಅಜ್ಜಿ ಇಲ್ಲದ ಮನೆಯು – ಕೊಜ್ಜೆಯರಿಲ್ಲದ ಮನೆಯು, ಇವು ಮೂರು ಲಜ್ಜೆಗೇಡೆಂದು ಅರುಹಿದ್ದಾನೆ. ಮಜ್ಜಿಗೆಯನು ಸೇವಿಸಿ ನೂರು ವರುಷ ಬಾಳಿದ ಮನುಷ್ಯನ ಚರಿತ್ರೆಯೂ ಇತಿಹಾಸದಲ್ಲಿದೆ. ಒಟ್ಟಿನಲ್ಲಿ ಆರೋಗ್ಯವೇ ಭಾಗ್ಯಕ್ಕೆ ಈತನ ವಚನಗಳು ರಾಮ ಬಾಣವಿದ್ದಂತೆ! ಸರ್ವಜ್ಞನು ಹೇಳಿದ ಪ್ರತಿಯೊಂದು ಮಾತೂ ನಮಗೆ ಬೋಧನೆಯಂತಿವೆ. ಆತ, ಇತ್ತ ಔಷದ ಚಿಕಿತ್ಸೆಗೆ ಒಪ್ಪದೇ ಅತ್ತ ಲಂಘನ ಕ್ರಮಕ್ಕೂ ಸಮ್ಮತಿಸದೆ ಉಭಯಕ್ಕೂ ಮಧ್ಯವರ್ತಿಯಾಗಿ ನಿಂತು ಹೇಳಿದ ಮಾತುಗಳು ಮೌಲಿಕವಾಗಿವೆ.

ಆಯುರಾರೋಗ್ಯದಿಂದಿರಬೇಕಾದರೆ ಆಹಾರವನ್ನು ತಿನ್ನತಕ್ಕ ಕ್ರಮವನ್ನು ಸಹ ಹೇಳದೇ ಬಿಟ್ಟಿಲ್ಲ. ಇದರಲ್ಲಿ ಭೋಜ್ಯ, ಲೇಹ್ಯ, ಖಾದ್ಯ, ಜೋಷ್ಯ ಮುಂತಾದವುಗಳೆಲ್ಲವೂ ಸಮಾವೇಶವಾಗುತ್ತವೆ. ಈ ವಿಷಯವು ಸ್ಪಷ್ಟವಾಗುವಂತೆ ಸರ್ವಜ್ಞನು ದೃಷ್ಟಾಂತ ಸಹಿತವಾಗಿ ವಚನಿಸಿದ್ದಾನೆ. ಅದು ಹೇಗಿದೆ ನೋಡಿ. ಹರಕು ಹೋಳಿಗೆ ಲೇಸು– ಮುರುಕು ಹಪ್ಪಳ ಲೇಸು – ಕುರು–ಕುರು ಕಡಲೆ ಲೇಸು–ಪಾಯಸದ ಸುರುಕು ಲೇಸೆಂದ ಕವಿ ಸರ್ವಜ್ಞ ! ಹೀಗೆ ಈತನ ಎಲ್ಲ ವಚನಗಳು ನಮ್ಮ ಆರೋಗ್ಯದ ಬಗ್ಗೆ ಹೇಳಿವೆ. ಈ ವಿಷಯದ ಕುರಿತು ಸಂಶೋಧನ ಕೈಕೊಳ್ಳುವಷ್ಟು ವಿಷಯ ವ್ಯಾಪ್ತಿಯಿದೆ ಎಂಬುದು ನನ್ನ ಮನೋಗತವಾಗಿದೆ.

**ತಂದೆ–ತಾಯಿ–ಗುರು ಹಿರಿಯರು.**

ಊರೆಲ್ಲ ನೆಂಟರು ಕೇರಿಯೊಳಗಿರುವವರೆಲ್ಲರೂ ನನ್ನ ಬಳಗವು ಮತ್ತು ಈ ಭೂಮಂಡಲದಲಿ ಎಲ್ಲ ಕುಲದೈವವಾಗಿದ್ದು; ಎಲ್ಲರೂ ನನ್ನ ನೆಂಟರೇ ಹಿರಿಯರೇ ಅಧಿಕರು. ಅವರಿಗೆ ಗೌರವಾದರಗಳನ್ನು ಸಲ್ಲಿಸುವುದು ನಮ್ಮೆಲ್ಲರ ಧರ್ಮವಾಗಿದೆ. ಮನುಜಮತವೇ ವಿಶ್ವಪಥವನ್ನುವಂತೆ ಈ ಭೂಲೋಕದಲ್ಲಿರುವವರೆಲ್ಲರೂ ನನ್ನವರು,

ನಮ್ಮವರು, ಅವರಿವರೆನ್ನದೆ ನಮ್ಮವರೆಂಬ ಭಾವ ಬಲಿಯಲಿ. ತಂದೆ ತಾಯಿಗಳನ್ನು ವೃದ್ಧಾಪ್ಯದಲ್ಲಿ ಚೆನ್ನಾಗಿ ಕಾಣಬೇಕು. ಅವರಿಗೆ ಕೃತಜ್ಞತಾ ಭಾವದಿಂದ ಸೇವೆಗೈಯ್ಯಬೇಕು. ಹರಿಗಿಂತಲೂ ಗುರು ಸರ್ವೋತ್ತಮನು ಎಂಬ ಭಾವ ಈ ಜಗದಲಿ ಹರಡಬೇಕು. ಎಲ್ಲರೂ ಅನ್ಯೋನ್ಯತೆಯಿಂದ ಬಾಳಬೇಕು ಎಂಬುದಾಗಿ ಸರ್ವಜ್ಞನು ಹಲವಾರು ವಚನಗಳಲ್ಲಿ ಹೇಳಿರುವನು. ಆದರೆ ಕೆಲವೇ ಕೆಲವು ವಚನಗಳೊಂದಿಗೆ ವಿವರಿಸಲು ಪ್ರಯತ್ನಿಸಲಾಗಿದೆ.

**ತಂದೆಗೂ ಗುರುವಿಗೂ ಒಂದು ಅಂತರವುಂಟು**
**ತಂದೆ ತೋರುವನು ಶ್ರೀ ಗುರುವ, ಗುರುರಾಯ**
**ಬಂಧನವ ಕಳೆವ ಸರ್ವಜ್ಞ!**

ತಂದೆಯೇ ನಿಜವಾದ ಬಂಧು. ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲವೆಂಬುದು ಗಾದೆ ಸುಪ್ರಸಿದ್ಧ. ಹಾಗೆ ನೋಡಿದರೆ ತಾಯಿಯೇ ಮೊದಲ ಗುರು. ಮನೆಯಿಂದಲೇ ಮೊದಲ ಪಾಠ ಪ್ರಾರಂಭವಾಗುತ್ತದೆ. ಅನಂತರದಲ್ಲಿ ಮಗು ಬೆಳೆದು ದೊಡ್ಡವನಾದಂತೆ ಗುರುವಿನ ಹತ್ತಿರ ಕಳುಹಿಸುವುದು ಈಗಲೂ ಜಾರಿಯಲ್ಲಿದೆ, ಪರಿಪಾಠವಾಗಿದೆ. ಗುರುವಿನ ಉಪದೇಶವು ಗುರುವಚನ ಪರಮಾರ್ಥವಿದ್ದಂತೆ ಎಂದಿದ್ದಾನೆ. ಹರನಿಗಿಂತಲೂ ಗುರು ಮಿಗಿಲು ಎಂದು ಹೇಳಿದಂತೆ, ಒಂದು ವೇಳೆ ಹರ ಮುನಿದರೂ ಗುರು ಕಾಯುವನು ಎಂದುದಾಗಿ ಹರಿಹರ ಕವಿಯು ಹೇಳಿಕೆಯಂತೆಯೇ ಸರ್ವಜ್ಞನ ವಚನಗಳಲ್ಲಿ ಹೆಪ್ಪುಗಟ್ಟಿದೆ. ಸರಿಯಾದ ಗುರು ಸಿಗಬೇಕು – ಆತ ವಿದ್ಯೆ ಕಲಿಸಬೇಕು. ಇಂತಹ ಉದಾತ್ತ ಸದ್ಗುರು ದೊರೆತರೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ! ಒಂದಕ್ಕರವ ಕಲಿಸಿದಾತನೇ ಗುರುವು. ಗುರು ತೋರದಲ್ಲದೆಯೇ ಮೋಕ್ಷ ಸಿಗದು. ಕೆಲವು ವಚನಗಳಲ್ಲಿ ಗುರುವಿನ ಲಕ್ಷಣ, ಆತನ ಗುಣಗಾನ ಮಾಡಿದ ಬಗೆ ಹೀಗಿದೆ.

**ಅಕ್ಕರವು ಲೆಕ್ಕಕ್ಕೆ ತರ್ಕತಾ ವಾದಕ್ಕೆ**
**ಮಿಕ್ಕ ಓದುಗಳು ತಿರುಪೆಗೆ – ಮೋಕ್ಷಕ್ಕೆ**
**ಎರಡಕ್ಷರವೇ ಸಾಕು ಸರ್ವಜ್ಞ!**

**ಊರಿಂಗೆ ದಾರಿಯನು ಯಾರು ತೋರಿದರೇನು**
**ಸಾರಾಯಮಪ್ಪ ಮತವನರುಹಿಸುವ ಗುರು**
**ಆರಾದರೇನು ಸರ್ವಜ್ಞ!**

**ತಾಪದಲಿ ಸಂಸಾರ ಕೂಪದಲಿ ಬಿದ್ದವರು**
**ಆಪತ್ತನುಳಿದು ಪೊರಮಡಲು ಗುರುಪಾದ**
**ಸೋಪಾನ ಕಂಡ ಸರ್ವಜ್ಞ!**



**ಮಂಡೆ ಬೋಳಾದೊಡಂ, ದಂಡ ಕೋಲ್ವಿಡಿದೊಡಂ**
**ಹೆಂಡತಿಯ ಬಿಟ್ಟು ನಡೆದೊಡಂ – ಗುರುಮುಖವ**
**ಕಂಡಲ್ಲದಿಲ್ಲ ಸರ್ವಜ್ಞ!**

**ಜೀಯ ಸದ್ಗುರುನಾಥ ಕಾಯ ಪುಸಿಯನೇ ತೋರಿ**
**ಮಾಯಪಾಶವನು ಹರಿಸುತ್ತ ಶಿಷ್ಯಂಗೆ**
**ತಾಯಿಯಂತಾದ ಸರ್ವಜ್ಞ!**

**ಗುರುವಿಂಗೆ ದೈವಕ್ಕೆ, ಒಂದು ಅಂತರವುಂಟು**
**ಗುರುತೋರ್ವ ದೈವದೆಡೆಯನು – ದೈವ ತಾ**
**ಗುರುವ ತೋರುವುದೇ? ಸರ್ವಜ್ಞ!**

**ಪರಮನಾ ರೂಪದಲಿ ನೆರವೀಯಲರಿಯದೆ**
**ನರನಾಗಿ ಬಂದು ವರಮೀವ–ಗುರುವಿಂಗೆ**
**ಸರಿಯಾರ ಕಾಣೆ ಸರ್ವಜ್ಞ!**

**ಹರನಿಷ್ಠಗಲ್ಲದಲೆ ಹರಿದು ಹೋಗದು ಪಾಪ**
**ಹರನಿಷ್ಠೆಯುಳ್ಳ ಗುರುವರನು ಓರ್ವನೆ**
**ನರದೈವವೆಂದ ಸರ್ವಜ್ಞ**

ಮನಮುಟ್ಟಿ ಗುರುವಿನ ಸೇವೆಯನು ಮಾಡಬೇಕು ಎಂಬುದಕ್ಕೆ ಸರ್ವಜ್ಞನ ವಚನವಿಂತಿದೆ.

**ಎತ್ತಾಗಿ ತೊತ್ತಾಗಿ, ಹಿತ್ತಲದ ಗಿಡವಾಗಿ**
**ಮತ್ತೆ ಪಾದದ ಕೆರವಾಗಿ ಗುರುವಿನ**
**ಹತ್ತಿಲಿರು ಎಂದ ಸರ್ವಜ್ಞ**

**ಗುರುವಚನುಪದೇಶ – ಗುರುವಚನ ಪರಭಕ್ತಿ**
**ಗುರುವಚನ ಮೋಕ್ಷ ಪದವದುವೆ ಗುರುವಚನ**
**ಪರಮಾರ್ಥವಯ್ಯ ಸರ್ವಜ್ಞ!**

**ಬಳ್ಳಿ ಗುರುಡರು ಕೂಡಿ ಹಳ್ಳವನು ಬಿದ್ದಂತೆ**
**ಒಳ್ಳೆಯ ಗುರುವಿನುಪದೇಶವಿಲ್ಲದಿರೆ**
**ಎಲ್ಲಿಯದು ಮುಕ್ತಿ ಸರ್ವಜ್ಞ!**

ಇಂತಹ ಬೇಕಾದಷ್ಟು ವಚನಗಳು ಸರ್ವಜ್ಞನ ಬತ್ತಳಿಕೆಯಲ್ಲಿವೆ. ಯಾವುದೇ ಕಾಲಕ್ಕೂ ಗುರುವಿನ ಮಾರ್ಗದರ್ಶನ ಅತ್ಯಗತ್ಯ. ತನ್ನ ಅರಿವೇ ತನಗೆ ಗುರು

ಎಂದು ಬಸವಾದಿ ಶಿವಶರಣರು ಹೇಳಿದರೂ ಶಿಕ್ಷಾ ಗುರು, ದೀಕ್ಷಾ ಗುರು, ಮತ್ತು ಮೋಕ್ಷಾ ಗುರು– ಇಂಥ ಗುರುಗಳ ಮಹಿಮೆಯನ್ನರಿತವ ಸಮಾಜ ವಿಜ್ಞಾನಿ ಸರ್ವಜ್ಞನು. ಗುರು ಮುಂದೆ ಶಿಷ್ಯನ ಗುರಿಯನ್ನು ತಲುಪಿಸುವ ಪರಮಾತ್ಮನಿದ್ದಂತೆ. ಆತ್ಮ ಸಾಕ್ಷತ್ಕಾರಕ್ಕೆ ಗುರುವಿನ ಮಾರ್ಗದರ್ಶನವೇ ಮುಖ್ಯವಾಗಿ ಬೇಕೆಂದಿದ್ದಾನೆ. ಶಿಷ್ಯನಾದವನೂ ಗುರುವಿನ ಗುಲಾಮನಾಗದತನಕ ದೊರೆಯದಣ್ಣ ವಿದ್ಯೆ ಮತ್ತು ಮೋಕ್ಷವೆನ್ನಲಾಗಿದೆ. ಇಂತಹ ಗುರು ಮಾರ್ಗದರ್ಶನ ಅಗತ್ಯತೆ, ಗುರುವಿನ ಮಹತ್ವ, ಗುರುಮಹಾತ್ಮ್ಯೆ, ಗುರುವಿನ ಲಕ್ಷಣ, ನಿಷಿದ್ಧ ಗುರು, ಗುರುವೇ ಪರಮೇಶ್ವರ, ಗುರುವಿನಿಂದ ಅಧಿಕ ಯಾರೂ ಇಲ್ಲ, ಗುರುನಿಂದೆ ತರವಲ್ಲ, ಗುರುವಿಗೆ ಭಯಪಡು, ಗುರು ಸೇವೆ ಮಾಡು, ಗುರು ಬೋಧ ವಿಷಯದಲ್ಲಿ ಗುರುಬೋಧೆ ಅವಶ್ಯ, ಗುರು ಬೋಧೆಯ ಲಕ್ಷಣ, ಯೋಗ್ಯ ಗುರು, ಅಯೋಗ್ಯ ಗುರು, ಯೋಗ್ಯ ಶಿಷ್ಯ, ಅಯೋಗ್ಯ ಶಿಷ್ಯ, ಯೋಗ್ಯ ಗುರು–ಶಿಷ್ಯರ ಸಂವಾದ, ಗುರುಕರುಣ ವಿಷಯ – ಗುರುವಿನಿಂದ ಮುಕ್ತಿ, ಗುರು ದರ್ಶನವೇ ಮುಕ್ತಿ, ಗುರುಪಾದವೇ ಮುಕ್ತಿ, ಗುರುವನ್ನು ಬೇಡು, ಗುರುವಿಂದ ಪಾಪ ಪರಿಹಾರ ಗುರುವಿನಿಂದಲೇ ಮೋಕ್ಷ.

ಹೀಗೆ ಮೇಲೆ ಹೇಳಿದ ಶೀರ್ಷಿಕೆಗಳಡಿಯಲ್ಲಿ ಗುರು ಸರ್ವೋತ್ತಮನು. ಆತನನ್ನು ಕುರಿತು ಎಷ್ಟು ಬಣ್ಣಿಸಿದರೂ ತೃಪ್ತಿಯಿಲ್ಲ ಕವಿ ಸರ್ವಜ್ಞನಿಗೆ. ಅದು ನಿಜದ ಸಂಗತಿಯೂ ಹೌದು. ಕಬೀರದಾಸರು ಹೇಳಿರುವಂತೆ ಸಮುದ್ರದ ನೀರನ್ನೇ ಮಸಿಯನ್ನಾಗಿಸಿಕೊಂಡು, ಭೂಮಂಡಲದಲ್ಲಿರುವ ತರು–ಮರಗಳನ್ನೇ ಲೇಖನಿಯನ್ನಾಗಿಸಿಕೊಂಡು, ಅಂಬರವನ್ನೇ ಹಾಳೆಯನ್ನಾಗಿ ಮಾಡಿಕೊಂಡು ಬರೆದರೂ ಸದ್ಗುರುವಿನ ಗುಣಗಾನ ಮಾಡುವುದು ತೀರಲಿಲ್ಲ ಅಂದರೆ ಮುಗಿಯಲಿಲ್ಲ ಎಂಬುದಾಗಿ ಕಬೀರರು ತಮ್ಮದೊಂದು ದೋಹೆಯಲ್ಲಿ ಹೇಳಿರುವುದನ್ನು ಸರ್ವಜ್ಞ ಕವಿಗೂ ಅನ್ವಯುವಾಗುತ್ತದೆಯೆಂದು ಹೇಳಲು ಹೆಮ್ಮೆ ಮತ್ತು ಅಭ್ಯಂತರವಿಲ್ಲವೆಂದೆನಿಸುತ್ತದೆ.

"ದೇವನೊಬ್ಬ ನಾಮ ಹಲವು" ಎಂಬಂತೆ ಏಕದೇವೋಪಾಸನೆಗೆ ಶರಣರು ಒತ್ತು ಕೊಟ್ಟಂತೆ ಸರ್ವಜ್ಞ ಕವಿಯ ಅಭಿಪ್ರಾಯವೂ ಅದೇ ಆಗಿದೆಯೆಂಬುದು ಆತನ ವಚನಗಳಿಂದ ತಿಳಿದು ಬಂದ ಸಂಗತಿಯಾಗಿದೆ. ಅಲ್ಲದೇ ದೇವರು ಸರ್ವಾಂತರ್ಯಾಮಿ. ಅವರವರ ಭಾವಕ್ಕೆ ಅವರವರ ತೆರನಾಗಿರುತಿಹನು ಎಂದಿದ್ದುಂಟು.

**ಒಬ್ಬನಲ್ಲದೆ ಜಗಕೆ ಇಬ್ಬರುಂಟೆ? ಮತ್ತೆ**
**ಒಬ್ಬ ಸರ್ವಜ್ಞ ಕರ್ತ ನೀ ಜಗಕೆಲ್ಲ**
**ಒಬ್ಬನೇ ದೈವ ಸರ್ವಜ್ಞ**



**ಆ ದೇವ ಈ ದೇವ ಮಾದೇವನೆನಬೇಡ**
**ಆ ದೇವರ ದೇವ ಭುವನದ ಪ್ರಾಣಿಗಳಿ**
**ಗಾದವನೇ ದೇವ ಸರ್ವಜ್ಞ**

ಎಂಬೀ ವಚನಗಳನ್ನು ಗಮನಿಸಿದರೆ ದೇವನಿರುವನೊಬ್ಬನೇ ಎಂಬುದು. ಅವರವರಿಗಿಷ್ಟ ಬಂದಂತೆ ಆತನನ್ನು ಕರೆಯುವ ರೂಢಿಯುಂಟು. ಆದರೆ ದೇವರ ಮೂರ್ತಿಯನ್ನು ದೇವಾಲಯ ಮಂದಿರಗಳಲ್ಲಿಟ್ಟು ಪೂಜಿಸುವವರನ್ನು ಹೀಗಳೆದಿದ್ದಾನೆ. ಕಲ್ಲು ಮಣ್ಣು, ಕಟ್ಟಿಗೆ, ಲೋಹಗಳಿಂದ ಮಾಡಿದ ಮೂರ್ತಿಗಳಲ್ಲಿ ಆ ದೇವನಿರಲಾರನು. ಮತ್ತು ಚಿತ್ತವಿಲ್ಲದ ಗುಡಿಯನು ಸುತ್ತುವುದೂ ಆತನಿಗೆ ಸರಿ ಕಾಣದು. ಆದುದರಿಂದ ತನ್ನ ವಚನಗಳಲ್ಲಿ ಈ ಬಗೆಗೆ ಖಂಡ–ತುಂಡವಾಗಿ ಹೇಳಿ ಸ್ಪಷ್ಟಪಡಿಸಿದ್ದಾನೆ.

**ಉಣಬಂದ ಜಂಗಮಕೆ ಉಣಬಡಿಸಲೊಲ್ಲದಲೆ**
**ಉಣದಿಪ್ಪ ಲಿಂಗಕುಣಬಡಿಸಿ ಕೈ ಮುಗಿವ**
**ಬಣಗುಗಳ ನೋಡು ಸರ್ವಜ್ಞ!**

**ಕಲ್ಲು ಕಲ್ಲೆಂಬಿರಿ ಕಲ್ಲೊಳಿಪ್ಪುದೆ ದೈವ ?**
**ಕಲ್ಲಲ್ಲಿ ಕಳೆಯ ನಿಲಿಸಿದ ಗುರುವಿನ**
**ಸೊಲ್ಲಲ್ಲೆ ದೈವ ಸರ್ವಜ್ಞ**

**ಕಲ್ಲು ಕಲ್ಲನೆ ಒಟ್ಟಿ ಕಲ್ಲಿನಲಿ ಮನೆ ಕಟ್ಟಿ**
**ಕಲ್ಲ ಮೇಲ್ಕಲ್ಲ ಕೊಳುವ ಮಾನವರೆಲ್ಲ**
**ಕಲ್ಲಿನಂತಿಹರು ಸರ್ವಜ್ಞ**

**ಕಲ್ಲು ಗುಂಡಿನ ಮೇಲೆ, ಮಲ್ಲಿಗೆಯ ಅರಳಿಕ್ಕಿ**
**ನಿಲ್ಲದೆ ಹಣೆ ಬಡಿವರ್ಗೆ–ಬುಗುಟಿಲ್ಲ**
**ದಿಲ್ಲ ಕಾಣಯ್ಯ ಸರ್ವಜ್ಞ!**

**ಪ್ರಾಣನೂ ಪರಮನೂ ಕಾಣದಲಿ ಒಳಗಿರಲು**
**ಮಾಣದೆ ನೆಲೆಯ ಹಿಡಿದದಕೆ ಮೂರ್ಖತಾ**
**ಪ್ರಾಣಾತ್ಮನೆಂಬ ಸರ್ವಜ್ಞ!**

ಇವೆಲ್ಲ ವಚನಗಳಲ್ಲಿ ಹುದುಗಿದ ಅರ್ಥ ಮಾನವನಲ್ಲಿಯೇ ಅಂದರೆ ಪ್ರತಿಯೊಬ್ಬರ ಶರೀರದಲ್ಲಿಯೇ ಆ ದೇವನಿರುವನು. ಆತ್ಮವೇ ಪರಮಾತ್ಮ! ದೇಹವೇ ದೇವಾಲಯ – ದೇಹವೆಂಬ ದೇವಾಲಯದೊಳಗೇ ದೇವನಿರುವಾಗ, ದೇವನಿಗಾಗಿ ಕಲ್ಲು–ಮಣ್ಣು ಹೊತ್ತು ಗುಡಿ–ಗುಂಡಾರವ ಕಟ್ಟುವುದು, ಅದರಲ್ಲಿ ಮೂರ್ತಿ

ಪ್ರತಿಷ್ಠಾಪಿಸುವುದು ಅದೆಷ್ಟು ಮೂರ್ಖತನವೆಂದು ಕವಿ ಸರ್ವಜ್ಞನು ಛೇಡಿಸಿದ್ದಾನೆ. ಪ್ರಸನ್ನ ಮನಸ್ಕರಾಗಿ ಧ್ಯಾನ ಮಾಡುತ್ತ, ಆತನನ್ನು ನೆನೆಯುತ್ತಿರೆ ದೇವರು ಪ್ರತ್ಯಕ್ಷನಾಗುತ್ತಾನೆಂಬ ಹೇಳಿಕೆಯು ಸರ್ವಜ್ಞನದಾಗಿದೆ. ಅನನ್ಯ ಭಕ್ತಯೊಂದಿರೆ ಆ ದೇವನು ಒಲಿಯಬಲ್ಲನೆಂದೂ ಭಕ್ತನ ನಿಷ್ಠುರ ನಡೆಯನ್ನು ಗುರುತಿಸಿದ್ದಾನೆ. ಕವಿ.

**ಭಕ್ತಿಯಿಂದಲೆ ಮುಕ್ತಿ, ಭಕ್ತಿಯಿಂದಲೇ ಶಕ್ತಿ**
**ಭಕ್ತಿ–ವಿರಕ್ತಿಯಳಿದರೀ ಜಗದಲ್ಲಿ**
**ಮುಕ್ತಿಯಿಲ್ಲೆಂದ ಸರ್ವಜ್ಞ**

**ಭಕ್ತಿಯೆಂಬುದೇ ಬೀಜ ಮುಕ್ತಿಯೆಂಬುದೇ ಫಲವು**
**ಯುಕ್ತಿಯಿಂ ವೃಕ್ಷವೇರಿದಗೆ ಇಹದಲ್ಲಿ**
**ಮುಕ್ತಿಯಹುದೆಂದ ಸರ್ವಜ್ಞ!**

'ಭಕ್ತಿಯೇ ಮುಕ್ತಿಗೆ ಸೋಪಾನ' ವೆಂದ ಶರಣರ ವಾಣಿಯಂತೆ, ಭಕ್ತಿರತಿ ಭಕ್ತನಲ್ಲಿರಬೇಕು. ಹರನ ನಾಮವನು ಎಡೆಬಿಡದೆ ಸ್ತುತಿಸುತ್ತಿರಬೇಕು. ಅದಕ್ಕೆ ನಿರ್ಮಲ ಮನಸ್ಸು ಮುಖ್ಯವಾಗುತ್ತದೆ.

**ಹರನಾಮ ಕರೆಯದಲೆ ಪರಶಿವನ ನೆನೆಯದಲೆ**
**ಸ್ಮರಹರನ ಕರುಣವಿಲ್ಲದಲೆ ಜಗದೊಳಗೆ**
**ಇರುವುದೇ ಕಷ್ಟ ಸರ್ವಜ್ಞ!**

**ಕಡು ಭಕ್ತನಾದರೂ ಜಡೆ ಧಾರಿಯಾದರೂ**
**ನಡೆವ ವೃತ್ತಿಯಲಿ ನಡೆದಿರಲಾ ಭಕ್ತಿ**
**ಹೊಡೆವ ಶಂಖೆಂದ ಸರ್ವಜ್ಞ**

ದೇವನೊಲಿಸಿಕೊಳ್ಳಲು ಮುಕ್ತಿ ಮಂದಿರಕ್ಕೆ ಹೋಗಲು ಭಕ್ತನಿಗೆ ಭಕ್ತಿಯೇ ಮೂಲವಾದುದು. ಅದಿಲ್ಲದಿರೆ ವ್ಯರ್ಥ ಬದುಕು. ಆದುದರಿಂದ ಮಾನವನ ಜೀವನ ಸಾರ್ಥಕ ಮಾಡಿಕೊಳ್ಳಬೇಕಾದರೆ ಚಿತ್ತವಿಟ್ಟು, ಚಿತ್ತಗೊಟ್ಟು ದೇವನ ಸ್ತುತಿ ಮಾಡಿ ಪುಣ್ಯ ಪಡೆದುಕೊಳ್ಳಬೇಕೆಂದು ಮನುಕುಲಕ್ಕೆ ಹಿತ ನುಡಿದಿದ್ದಾನೆ ಕವಿ ಸರ್ವಜ್ಞ!

**ಚಿತ್ತವಿಲ್ಲದೆ ಗುಡಿಯ ಸುತ್ತಿದೊಡೆ ಫಲವೇನು?**
**ಎತ್ತು ಗಾಣವನು ಹೊತ್ತು ತಾ ನಿತ್ಯದಿ**
**ಸುತ್ತಿ ಬಂದಂತೆ ಸರ್ವಜ್ಞ**

ಎಂದಿದ್ದಾನೆ. ಅಂತರಂಗದ ಭಕ್ತಿಯೇ ಮೂಲ ಕಾರಣ, ಊರೂರು ಕಾಶಿ–ರಾಮೇಶ್ವರ–ಕೇದಾರ–ಶ್ರೀಶೈಲ, ಪೀಠ–ಮುಂತಾದ ಕ್ಷೇತ್ರಗಳಿಗೆ ಸುತ್ತಾಡಿ



ದಣಿಯುವುದರಿಂದ ಹಣವೂ ಹಾಳು, ಸಮಯವೂ ಹಾಳು. ದುಡಿಮೆಯಿಲ್ಲದ ಬದುಕು ವ್ಯರ್ಥವೆಂದೂ ಕಟಕಿ ನುಡಿದಿದ್ದಾನೆ.

**ಮನದಲ್ಲಿ ನೆನೆವಂಗೆ ಮನೆಯೇನು ಮಠವೇನು?**
**ಮನದಲ್ಲಿ ನೆನೆಯದಿರುವವನು ದೇಗುಲದ**
**ಕೊನೆಯಲ್ಲಿದ್ದೇನು ಸರ್ವಜ್ಞ!**

**ಮನೆಯೇನು ಮಠವೇನು – ನೆನಹು ಇದ್ದರೆ ಸಾಕು.**
**ಮನ ಮುಟ್ಟಿ ಶಿವನ ನೆನೆಯದನು ಬೆಟ್ಟದ**
**ಕೊನೆಯಲ್ಲಿದ್ದೇನು? ಸರ್ವಜ್ಞ!**

**ಮನದಲ್ಲಿ ನೆನವಿರಲು ತನುವೊಂದು ಮಠವಕ್ಕು**
**ಮನಹೋಗಿ ಹಲವ ನೆನೆದಿಹರೆ ಅದು ಹಾಳು**
**ಮನೆಯು ತಾನೆಂದ ಸರ್ವಜ್ಞ!**

**ದೇಹವೇ ದೇವಾಲಯವು ಜೀವವೇ ಶಿವಲಿಂಗ**
**ಬಾಹ್ಯಂಗಳಳಿದು ಭಜಿಪಂಗೆ ಮುಕ್ತಿ !**
**ಸಂದೇಹವಿಲ್ಲೆಂದ ಸರ್ವಜ್ಞ**

ಇಂತು ನಿರ್ಮಲ ಭಾವದಿಂದ, ಮನದಿಂದ ಜೀವದಾನ ಮಾಡಿದ ಆ ದೇವನನ್ನು ಸ್ತುತಿಸುತ್ತ ಕಾಯಕವ ಅನುದಿನವೂ ಮಾಡುತ್ತ ದಾನ–ದಾಸೋಹವನು ಮಾಡುತ್ತ, ಪರೋಪಕಾರಜೀವಿಯಾಗಿ ಜೀವನ ಸಾಗಿಸುವಾತನಿಗೆ ದೇವನ ದರ್ಶನ ಖಂಡಿತವಾಗಿಯೂ ಆಗುತ್ತದೆ ಎಂದು ಸರ್ವಜ್ಞನ ಅಭಿಮತವು ಆಗಿತ್ತೆಂಬುದು ಈ ಮೇಲಿನ ವಚನಗಳಿಂದ ತಿಳಿದು ಬರುತ್ತದೆ.

ಇಂತು ಕನ್ನಡ ನಾಡು ಸರ್ವಜ್ಞನ ತ್ರಿಪದಿ (ವಚನ) ಗಳಿಂದಾಗಿ ಕನ್ನಡ ಸಮೃದ್ಧವಾದುದು ಎಂಬುದು ಹೆಮ್ಮೆಯ ಸಂಗತಿ. ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು, ಸಾಲವನು ಕೊಂಬಾಗ ಹಾಲೋಗರುಂಡಂತೆ, ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ, ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ, ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ, ಕಣ್ಣು ನಾಲಗೆ ಮನವು ತನ್ನದು ಎನಬೇಡ. ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೆ,? ವಿಧಿ ಬರಹ ತಿದ್ದುವನೆ ಜೋಯಿಸನು ಜಾತಕದಿ, ಕೋಟಿ ವಿದ್ಯೆಗಳಲಿ ಮೇಟಿ ವಿದ್ಯೆಯೇ ಮೇಲು, ಹೀಗೆ ಎಲ್ಲ ತ್ರಿಪದಿಗಳೂ ಬಲು ಸೊಗಸು, ಅರ್ಥಪೂರ್ಣ, ಧ್ವನಿಪೂರ್ಣ, ಸತ್ವಪೂರ್ಣ ಆಗಿವೆ. ಆದುದರಿಂದ ಸರ್ವಜ್ಞನು ಜನಸಾಮಾನ್ಯರ ಕವಿಯೆಂದು ಕರೆಯಿಸಿಕೊಂಡು ಅಜರಾಮರ

ವಾಗಿರುವನು. ಆತನ ಬಗೆಗೆ ಅದೆಷ್ಟು ವರ್ಣಿಸಿದರೂ, ಬರೆದರೂ, ಓದಿದರೂ ಕಡಿಮೆಯೇ ಎಂದೆನಿಸುತ್ತದೆ.

ಹೀಗೆ ಕನ್ನಡದ ಗಂಡುಗಲಿ, ಕನ್ನಡ ನಾಡನೆಲ್ಲವೂ ಸುತ್ತಾಡಿ, ತನ್ನ ಅನುಭವವನ್ನು ವಚನಗಳಲ್ಲಿ ಹಿಡಿದಿಟ್ಟಿದ್ದಾನೆ. ಆತ ಅನುಭವ ಪಡೆದು ಸಮಾಜದಲ್ಲಿಯ ಕುಂದು–ಕೊರತೆಗಳನ್ನು ಕಂಡು ಕಿಡಿನುಡಿಗಳನ್ನು ತೂರಿದ್ದಾನೆ. ಆದುದರಿಂದ ಅವನಿಂದ ನಿಜವಾದ ಸಮಾಜದ ದರ್ಶನವಾಗಿದೆ. ಅವನೇ ತನ್ನದೊಂದು ವಚನದಲ್ಲಿ –

**ಊರೆಲ್ಲ ನೆಂಟರು ಕೇರಿಯೆಲ್ಲವೂ ಬಳಗ**
**ಧಾರುಣಿಯೆಲ್ಲ ಕುಲದೈವವಾಗಿನ್ನು**
**ಯಾರನ್ನು ಬಿಡಲೋ ಸರ್ವಜ್ಞ**

ಹೀಗೆ ನುಡಿದ ಕವಿಯ ಹೃದಯ ಎಷ್ಟು ಉದಾತ್ತವಾಗಿರಬೇಕು; ಇಂತಹವರು ಜಗವನ್ನು ಸುತ್ತಿ, ಜಗದ ಜೀವಿಗಳೆಲ್ಲ ತನ್ನಂತೆ ಎಂದು ತಿಳಿದು ತಮ್ಮ ಜೀವನವನ್ನು ಪಾವನವನ್ನಾಗಿ ಮಾಡಿಕೊಂಡಿದ್ದಾರೆ.

**ಕನ್ನಡದ ಮಲೆನಾಡು – ಕನ್ನಡದ ಬಯಲ್ನಾಡು**
**ಮೂರು ಪಡುವಲ ಬಡಗ–ತೆಂಕಣನಲೆದಾಡಿ**
**ಕನ್ನಡಿತಿಗರೆಲ್ಲರನು ಕಂಡಿದ್ದ.**

ಎಂದು ಕವಿ ಆನಂದಕಂದರು ಸರ್ವಜ್ಞನ ಬಗ್ಗೆ ಹೆಮ್ಮೆಯಿಂದ ಹೇಳಿದ್ದಾರೆ. ನಾಡು–ದೇಶವನ್ನೆಲ್ಲ ತಿರುಗಾಡಿ ಕವಿಯು ಅನುಭವ ಪಡೆದುಕೊಂಡಿದ್ದನೆಂಬುವ ಮಾತು ಎಂದೆಂದಿಗೂ ಸತ್ಯವಾದದ್ದು.

ಆತನ ವ್ಯಕ್ತಿತ್ವ ಸಾಮಾನ್ಯವಾಗಿ ಪ್ರಾಜ್ಞರಿಗೆ ತಿಳಿಯುವಂತೆ ? ನಿಜವಾದರೆ ಜನಸಾಮಾನ್ಯರಿಗೂ ಪರಿಚಿತವಾದುದು. ಆತನದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟವಾದ ಸ್ಥಾನವಿದೆ. ಬದುಕಿನ ಸಹಸ್ರ ಮುಖಗಳನ್ನು ಹತ್ತಿರದಿಂದ ಕಂಡ ಕವಿ ಸರ್ವಜ್ಞ, ತನ್ನ ವಚನಗಳಲ್ಲಿ ಅವುಗಳನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದಾನೆ. ಆತನ ಮನಸ್ಸಿನ ಒಳಸುಳಿಗಳನ್ನು ಶೋಧಿಸಬಲ್ಲ ಮಹಾಜ್ಞಾನಿಯಾಗಿದ್ದ ಕವಿ. ಆತ ನೀಡಿರುವ ಒಂದೊಂದು ವಚನವೂ ಜೀವಂತ ಕಾವ್ಯವಾಗಿದೆ. ಆತನ ವಚನಗಳಲ್ಲಿ ಆ ಕಾಲದ ಸಾಮಾಜಿಕ ದರ್ಶನವಾಗುತ್ತದೆ. ಅಷ್ಟೇ ಅಲ್ಲದೆ ಸಾರ್ವಕಾಲಿಕ ಸತ್ಯವನ್ನು ಹೇಳುವ ಅಪರೂಪದ ಅನುಭಾವವೂ ಅಲ್ಲಿ ಸೂರೆಗೊಂಡಿದೆ. ಕಾಲ, ದೇಶಗಳನ್ನು ದಾಟಿ ಪ್ರಸ್ತುತವಾಗುವಂತಹ ವಿಚಾರಧಾರೆಯನ್ನೇ ಆತ ಗರ್ಭೀಕರಿಸಿಕೊಂಡಿರುವ ಅವನ ವಚನಗಳು ಎಲ್ಲಾ



ಕಾಲಕ್ಕೂ ಬಸವಾದಿ ಶಿವಶರಣರಂತೆ ಹೊಸ ಹೊಸ ಅರ್ಥಗಳನ್ನು ಸ್ಫುರಿಸಬಲ್ಲವು. ಮತ್ತು ಮನುಕುಲಕ್ಕೆ ಸತ್ಯದ ಮಾರ್ಗವನ್ನು ತೋರಬಲ್ಲ ದೀವಿಗೆಗಳು. ಇಂತಹ ಬೆಲೆಯುಳ್ಳ ವಚನಗಳನ್ನು ಸಂಗ್ರಹಿಸಿ ಸಂಪಾದಿಸಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು; ರೆ॥ ಚೆನ್ನಪ್ಪ ಉತ್ತಂಗಿಯವರು. ಸರ್ವಜ್ಞನ ವಚನಗಳೆಂದರೆ ಸಮಾಜದ ಸ್ವಾಸ್ಥ್ಯಕ್ಕೆ ತೀರ ಅಗತ್ಯವಾದ ದಿವ್ಯ ಔಷಧ ಎಂದು ಅವರು ಹೇಳಿರುವುದು ತುಂಬಾ ಅರ್ಥಪೂರ್ಣವಾಗಿದೆ. ಸರ್ವಜ್ಞನ ಇಂತಹ ಆತ್ಮ ಸಾಧನೆ ಅನುಭಾವ ಪ್ರಕಟವಾಗಿ ನಡೆಯುತ್ತದೆ. ಅಲ್ಲಲ್ಲಿನ ವಚನಗಳಲ್ಲಿ ಅವರ ಅಂತರಂಗದನುಭವ ಸೂಚ್ಯವಾಗಿ ವ್ಯಕ್ತವಾಗುತ್ತದೆ.

**ಸತ್ಸಂಗದ ಸವಿಜೇನು :**

ಸತ್ಸಂಗದೊಳಿದ್ದರೆ ಮನುಷ್ಯನ ಮನಸ್ಸು ಶುದ್ಧವಾಗುತ್ತದೆ. ಯಾವುದೇ ಸತ್ಕಾರ್ಯಗಳನ್ನು ಮಾಡುವಲ್ಲಿ ಹುಮ್ಮಸ್ಸು ಬರುತ್ತದೆ. ಉದಾತ್ತೀಕರಣದತ್ತ ದಾಪುಗಾಲು ಹಾಕಲು ಅನುಕೂಲವಾಗುತ್ತದೆ. ಕಾಲದ ಕಠಿಣ ಪರೀಕ್ಷೆಯಲ್ಲೂ ಬದಲಾಗದಂತಹದ್ದೇ ಸತ್ಯ. ನಮ್ಮ ತಪ್ಪುಗಳಿಂದ ಪಾಠ ಕಲಿಯಲು ನಮಗೆ ಮನಸ್ಸಿದ್ದರೆ ಮುಗಿಯಲಾರದಷ್ಟು ಅವಕಾಶವಿದೆ. ಮನುಷ್ಯರು ಮಾತ್ರ ಬುದ್ಧಿಯುಳ್ಳವರು. ಅವರೇ ನಿಜ ಸುಖ ಹೊಂದಲು ಅರ್ಹತೆಯುಳ್ಳವರು. ಆದುದರಿಂದ ಧರ್ಮದ ಹಾದಿಯಲ್ಲಿಯೇ ನಡೆಯುವುದು ಉತ್ತಮ. ನಿಜ ಸುಖದ ಸಿದ್ಧಿಗೆ ಸಾಧನವೇ ಧರ್ಮವು. "ಧರ್ಮಂ ಚರ ಪರಂನಾಸ್ತಿ" ಎನ್ನಲಾಗಿದೆ. ಧರ್ಮವೇ ಗೆಲುವಿಗೆ ದಿವ್ಯ ಮಂತ್ರ. ಮೋಕ್ಷ ಸಂಪಾದನೆಗೆ ಧರ್ಮ–ಅಧ್ಯಾತ್ಮಗಳೇ ಸೋಪಾನ. ಆದುದರಿಂದ "ಅಡಿಯ ಮುಂದಿಡೆ ಸ್ವರ್ಗ : ಅಡಿಯ ಹಿಂದಿಡೆ ನರಕ" ಎಂದಿದ್ದಾನೆ ಸರ್ವವನು ಬಲ್ಲ ಸರ್ವಜ್ಞ. ಧರ್ಮದ, ಸನ್ನಡತೆಯ ಹಾದಿಯಲ್ಲಿ ನಡೆಯುವವನಿಗೆ ಯಾರ, ಯಾವುದರ ಭಯವಿಲ್ಲ. "ಸತ್ಯ ಧರ್ಮ ವೃತಾಯ ಕಾಮಧೇನುವೇ' ಎನ್ನಲಾಗಿದೆ ಗೀತೆಯಲ್ಲಿ, ಅಂದರೆ ಆಚಾರ–ವಿಚಾರ, ನಡೆ–ನುಡಿಯಲ್ಲಿ ಒಂದಾಗಿರುವುದೇ ಸತ್ಯದ ತಳಪಾಯ. ಒಳ್ಳೆಯ ಆಚಾರ–ವಿಚಾರಗಳೇ ಪುಣ್ಯ ಪ್ರಾಪ್ತಿಗೆ ರಹದಾರಿ ಎಂದಿದ್ದಾರೆ ಅನುಭಾವಿಗಳು.

ಸತ್ಯ, ಪ್ರಾಮಾಣಿಕೆ, ದಯೆ, ಪ್ರೀತಿ, ಕರುಣೆ, ಮಮತೆ, ಅನುಕಂಪ, ವಾತ್ಸಲ್ಯ, ದಾಕ್ಷಿಣ್ಯ ವಿನಯ ಮುಂತಾದ ಮಾನವೀಯ ಮೌಲ್ಯಗಳಿದ್ದರೆನೇ ಮಾನವನನ್ನು ಔನ್ನತ್ಯಕ್ಕೇರಿಸುತ್ತವೆ. ಪರಧನಕ್ಕೆ ಆಸೆ ಪಡುವವನು ದುರುಳ, ಪರ ಹಿತಕ್ಕೆ ತವಕಿಸುವವನು ಸಹೃದಯಿ! ಸುಳ್ಳು ಮತ್ತು ಅಪ್ರಿಯ ಮಾತು ಹಾಗೂ ಅಸಂಗತ ಹರಟೆಯಿಂದ ನಾಲಿಗೆಯೂ ಹೊಲಸು, ವಾತಾವರಣವೂ

ಕಲುಷಿತವಾಗುತ್ತದೆ. ಆದುದರಿಂದ ಮನುಷ್ಯ ಜನ್ಮ ತಳೆದು ಬಂದ ಮೇಲೆ ಜೀವನದಲ್ಲಿ ಅತ್ಯುತ್ತಮವಾದುದನ್ನೇ ಧರಿಸಿ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಮತ್ತು ಹೆಚ್ಚಿಸಿಕೊಳ್ಳಬೇಕು. ಪರೋಪಕಾರಿಯಾಗಿ ಬಾಳುವುದು, ಯಾವತ್ತೂ ಸತ್ಕಾರ್ಯದಲ್ಲಿ ಭಾಗಿಯಾಗಿರುವುದು. ಸನ್ಮಾರ್ಗದಿಂದ ನಡೆದು ಜನಹಿತ ಕಾರ್ಯಗಳನ್ನು ಮಾಡುವುದರಿಂದಲೇ ಪುಣ್ಯ ಪ್ರಾಪ್ತಿ. ಇದುವೇ ಸುಖ, ಶಾಂತಿ, ಸ್ವರ್ಗ, ಮುಕ್ತಿ, ಮೋಕ್ಷ, ಸತ್ಯದ ಬೆಳಕು, ಶಾಶ್ವತ ನಿಧಿ, ಕೈಲಾಸ, ಸುಖದ ಬೀಡು ಎನಿಸುತ್ತದೆ. ಅದು ಬೇರೆಲ್ಲಿಯೂ ಇಲ್ಲ ನಮ್ಮೊಳಗೇ ಇದೆ ಎಂದು ಎಚ್ಚರಿಸುತ್ತಾರೆ ಅನುಭಾವಿ ಕವಿ ಸರ್ವಜ್ಞ ! : ಅವನು ಸತ್ಸಂಗದ ಸವಿಜೇನು ಸವಿಯಲು ಬನ್ನಿರೆಂದೂ, ಜನತೆಗೆ ಭಕ್ತಿಯ ಹಾದಿ ಹಿಡಿದು ಬರಲು ಬೋಧಿಸಿದ್ದಾನೆ. ಸಾದು–ಸಜ್ಜನರ ಸಂಗವೇ ಧನ್ಯ ಎಂದಿದ್ದಾನೆ.

**ಸತ್ಯರ ನುಡಿ ತೀರ್ಥ–ನಿತ್ಯರ ನಡೆ ತೀರ್ಥ**
**ಉತ್ತಮರ ಸಂಗವದು ತೀರ್ಥ – ಹರಿವ ನೀ**
**ರೆತ್ತಣದು ತೀರ್ಥ ? ಸರ್ವಜ್ಞ!**

**ಸತ್ಯ ನುಡಿದತ್ತರೂ ಸುತನೊಬ್ಬ ಸತ್ತರೂ**
**ಸತ್ಯವನು ಬಿಡದ ಹರಿಶ್ಚಂದ್ರ, ಜಗದೊಳಗೆ**
**ಸ್ತುತ್ಯನಾಗಿಹನು ಸರ್ವಜ್ಞ**

**ಸತ್ಯವೆಂಬುದು ತಾನು ನಿತ್ಯದಲಿ ಮೆರೆದಿಹುದು**
**ಮಿಥ್ಯ ಸತ್ಯವನು ಬೆರೆದರೂ ಇಹಪರದಿ**
**ಸತ್ಯಕ್ಕೆ ಜಯವು ಸರ್ವಜ್ಞ**

**ಬತ್ತಿ ಎಣ್ಣೆಗಳೆರಡು ಹೊತ್ತಿ ಬೆಳಗುವ ತೆರದಿ**
**ಸತ್ಯ ನೀತಿಗಳು ಬೆಳಗಿಹವು. ಜೋಡಗಲೆ**
**ಕತ್ತಲೀ ಜಗವು ಸರ್ವಜ್ಞ**

**ಸತ್ಯರಿಗೆ ಧರೆಯೆಲ್ಲ ಮಸ್ತಕವನೆರಗುವುದು**
**ಹೆತ್ತ ತಾಯ ಮಗನ ಕರೆವಂತೆ, ಶಿವನವರ**
**ನೆತ್ತಿಕೊಂಬುವನು ಸರ್ವಜ್ಞ.**

**ದಿಟವೇ ಪುಣ್ಯದ ಪುಂಜ–ಸಟೆಯೆ ಪಾಪದ ಬೀಜ**
**ಕುಟಿಲ ವಂಚನೆಗೆ ಪೋಗದಿರು, ನಿಜದಿ ಪಿಡಿ**
**ಘಟವನೆಚ್ಚರದಿ ಸರ್ವಜ್ಞ**



**ಹಾಲಿನ ಹಸುಲೇಸು, ಶೀಲದ ಶಿಶು ಲೇಸು**
**? ಸಜ್ಜನೆಯು ಬಲು ಲೇಸು, ಹುಸಿಯದ**
**ನಾಲಗೆಯೇ ಲೇಸೆಂದ ಸರ್ವಜ್ಞ.**

**ಉತ್ತಮರು ಎಂಬುವವರು ಸತ್ಯದಲಿ ನಡೆದಿಹರು**
**ಉತ್ತಮರನು ಅಧಮರೆನಬೇಡ – ಅವರೊಂದು**
**ಮುತ್ತಿನಂತಿಹರು ಸರ್ವಜ್ಞ**

ಈ ಎಲ್ಲ ವಚನಗಳನ್ನು ಗಮನಿಸುವುದಾದರೆ ಸತ್ಯಕ್ಕೆ ಯಾವತ್ತೂ ಜಯವುಂಟು, ಸುಳ್ಳಿಗೆ ಸುಖವಿಲ್ಲ. ಉತ್ತಮರ ಅಥವಾ ಸತ್ಯವಂತರ ಸಂಗ ಮಾಡುವುದು, ಅವರ ನಡೆ–ನುಡಿಗಳೇ ತೀರ್ಥವಿದ್ದಂತೆ ಎಂದಿದ್ದಾನೆ ಕವಿ. ನಮಗೆ ಸತ್ಯ ಹರಿಶ್ಚಂದ್ರ ಮಹಾರಾಜನ ಚರಿತ್ರೆಯೇ ದಾರಿದೀಪವಾಗಿದೆ. ಸತ್ಯದ ಫಲ ಶಾಶ್ವತವಾದುದು. ಮಹಾತ್ಮಾ ಗಾಂಧೀಜಿಯವರು ಹರಿಶ್ಚಂದ್ರನ ಕಥೆಯನ್ನೋದಿಹುದರಿಂದಲೇ ಹಾಗೆಯೇ ನಡೆದುಕೊಳ್ಳಲಿಲ್ಲವೆ? ಸತ್ಯವೆಂಬುದು ಅದು ನಿತ್ಯವೂ ಬೆಳಗುತ್ತಿರುವಂಥ ದಿವ್ಯ ಜ್ಯೋತಿ. ಸತ್ಯದಿಂದಿರುವವನಿಗೆ ಸುಳ್ಳು ಬೆರೆತರೂ ಇಹದಲ್ಲಾಗಲಿ–ಪರದಲ್ಲಾಗಲಿ ಸತ್ಯವಂತನಿಗೇ ಜಯವು ಪ್ರಾಪ್ತಿ. ಸತ್ಯ ಮತ್ತು ನೀತಿಗಳೆರಡು ಎಣ್ಣೆ–ಬತ್ತಿಗಳಿದ್ದಂತೆ! ಅವೆರಡೂ ಕೂಡಿದಾಗ, ಬೆರೆತಾಗ ಕತ್ತಲೆಯು ಓಡಿ ಹೋಗಿ ಬೆಳಕು ನೀಡುವುದು. ಇಂಥ ಸತ್ಯವಂತರಿಗೆ ಧರೆಯ ಮೇಲಿರುವ ಜನರೆಲ್ಲರೂ ಹಣೆಮಣಿಯುತ್ತಾರೆ. ತಾಯಿಯು ಮಗನನ್ನು ಕರೆಯುವಂತೆ ಶಿವನು ಎತ್ತಿಕೊಳ್ಳುವನು. ಆದುದರಿಂದ ಸತ್ಯವೇ ಪುಣ್ಯದ ಪುಂಜ, ಹುಸಿಯದಲೆ ಉತ್ತಮರ ಸತ್ಯವಂತರ ಸಂಗವನು ಮಾಡಿ ಉತ್ತಮ ಜೀವನ ನಡೆಸೆಂದು ಸರ್ವಜ್ಞ ಕವಿ ಬೋಧಿಸಿದ್ದಾನೆ.

**ಕಪ್ಪೆಗಳು ಮೀನುಗಳು–ಇಪ್ಪುವುದ ತೀರ್ಥವೆ?**
**ತುಪ್ಪ ಓಗರಕೆ ಸಲುವುದು–ಸತ್ಪುರುಷ**
**ರಿಪ್ಪುದೇ ತೀರ್ಥ ಸರ್ವಜ್ಞ!**

ಉತ್ತಮರ ಸಂಗದೊಡನಾಟವೇ ತೀರ್ಥವಿದ್ದಂತೆಯೆಂದು ಹೇಳಿದ್ದಾಗಿದೆ. ಆದುದರಿಂದ ಸಜ್ಜನರು ಒಮ್ಮೊಮ್ಮೆ ಸಿಡಿದೆದ್ದು ಬೈದರೂ ಅವರ ಸಹವಾಸವೇ ಲೇಸು ಎಂದಿದ್ದಾನೆ ಸರ್ವಜ್ಞ ಕವಿ – ಆತನ ಕೆಲವು ವಚನಗಳಿಂದ ಸ್ಪಷ್ಟಪಡಿಸಬಹುದು

**ಕುದಿಯದ ಕೂಳಿಂದ–ಹದುಳದಂಬಲಿ ಲೇಸು**
**ಹೃದಯ ಶೂನ್ಯರುಗಳೊಲವಿಂದ ಅರಿದರಲಿ**
**ಕದನವೇ ಲೇಸು ಸರ್ವಜ್ಞ**

**ಡೊಂಕು ಹಣ್ಣುಗಳಲ್ಲಿ ಡೊಂಕು ಬಾಳೆಯ ಹಣ್ಣು**
**ಡೊಂಕುಂಟು, ಒಳಗೆ ರುಚಿಯುಂಟು ಸಜ್ಜನರ**
**ಡೊಂಕು ಲೇಸೆಂದ ಸರ್ವಜ್ಞ**

**ಅರಿಕೆ ಹೀನರ ಕೂಡಿ–ಮೆರೆದಾಡುವುದರಿಂದ**
**ಅರಿಕೆಯುಳ್ಳವರ ಒಡನಾಡಿ–ಆವಗಂ**
**ಸೊರಗಿಹುದೇ ಲೇಸು ಸರ್ವಜ್ಞ**

**ನಿಂದೆಯನು ನುಡಿದರೂ ಸಂದ ಸಜ್ಜನ ಲೇಸು**
**ಹೊಂದಿ ಸಾಸಿರವ ಕೊಟ್ಟರೂ ದುರ್ಜನರ**
**ದಂದುಗವೇ ಬೇಡ ಸರ್ವಜ್ಞ**

ಹಸಿಬಿಸಿ ಅನ್ನದಿಂದ ಹೊಟ್ಟೆ ತುಂಬಿದರೂ ಪ್ರಯೋಜನವಿಲ್ಲ. ಆರೋಗ್ಯವು ಕೆಡುತ್ತದೆ. ಆದುದರಿಂದ ಅದಕ್ಕಿಂತಲೂ ಅಂಬಲಿಯೇ ಲೇಸು. ಮಂದ ಮತಿಗಳ ಜೊತೆ ಜಗಳಾಡುವುದಕ್ಕಿಂತ ಅರಿಕೆಯುಳ್ಳವರ ಜೊತೆಗೆ ಕದನವೇ ಲೇಸು, ಬಾಳೆಯ ಹಣ್ಣು ಡೊಂಕಾದರೂ, ಕಬ್ಬು ಡೊಂಕಾದರೂ ಸಿಹಿ ಡೊಂಕೆ? ರುಚಿಯು ಡೊಂಕೆ, ಅಂತಹ ಸಿಹಿ ಭಾವವುಳ್ಳ ಸಜ್ಜನರ ಡೊಂಕು ನುಡಿಗಳಿದ್ದರೂ ಲೇಸು, ತಿಳಿದವರ ಒಡನಾಟವೇ ಲೇಸು, ತಿಳಿದವರು, ಸಜ್ಜನರು ನಿಂದಿಸಿದರೂ ಲೇಸು ಆದರೆ ದುರುಳ ದುರ್ಜನರ ಸಹವಾಸವೆಂದೆಂದಿಗೂ ಒಳ್ಳೆಯದಲ್ಲವೆಂಬುದಾಗಿ ಮೇಲಿನ ವಚನಗಳಲ್ಲಿ ಸರ್ವಜ್ಞನ ಬೋಧನೆಯು ಮನುಕುಲಕ್ಕೆ ದಾರಿದೀಪವಾಗಿದೆ. ಆದುದರಿಂದ ಯಾವತ್ತೂ ಸಜ್ಜನರನ್ನು ಅಗಲಬೇಡವೆಂದು ಹಿತೋಕ್ತಿ ನೀಡಿದ್ದು ಹೀಗೆ.

**ಅಗಡೆತ್ತು ಕೊಳ ಹೊಲ್ಲ–ನೆಗಡಿ ಮೂಗಿಗೆ ಹೊಲ್ಲ**
**ಪಗಡೆಯಾಡುವವನ ಕೆಳೆ ಹೊಲ್ಲ, ಗುಣಿಗಳನು**
**ಅಗಲಿರಲು ಹೊಲ್ಲ ಸರ್ವಜ್ಞ**

**ತ್ರಿಕರಣ ಶುದ್ಧರೊಳು ಪ್ರಕೃತಿ ವಿರಹಿತರೊಳು**
**ಮುಕುತಿಗೆಳೆಯಿಸುವ ಜನರೊಳು ಆವಗಂ**
**ಸಖತನವೇ ಲೇಸು ಸರ್ವಜ್ಞ!**

ತ್ರಿಕರಣಪೂರ್ವಕವಾಗಿ ಶುದ್ಧವಿದ್ದವರೊಡನಾಟ ಸುಯೋಗ್ಯವಾದುದು. ಆದುದರಿಂದ ಅಂತಹ ಸಜ್ಜನರ ಸಹವಾಸದಲ್ಲಿರುವುದೇ ಉತ್ತಮ ಮಾರ್ಗವೆಂಬುದಾಗಿ ಮೇಲಿನ ಎರಡು ವಚನಗಳಲ್ಲಿ ಎರಕ ಹೊಯ್ದಿದ್ದಾನೆ. ಸಜ್ಜನರ ಒಡನಾಟವೇ ರುಜುವಾದ ಮಾರ್ಗವೆಂದು ಹೇಳಿದ್ದಾನೆ.



**ಸತ್ಯವಂತರ ನೀನು ಸತ್ತರೆಂದೆನಬೇಡ**
**ಹೆತ್ತಮ್ಮ ಮಗನ ಕರೆವಂತೆ ನಿನ್ನನವ**
**ಎತ್ತಿಕೊಂಬುವರು ಸರ್ವಜ್ಞ**

ಎಂದಿದ್ದಾನೆ. ಸತ್ಸಂಗವೇ – ಶ್ರೇಷ್ಠವಾದುದು ಎನ್ನುವುದಕ್ಕೆ ಸರ್ವಜ್ಞನು

**ಮೇರುವಿಂಗೆ ಎಣೆಯಿಲ್ಲ – ಧಾರಿಣಿಗೆ ಪಡಿಯಿಲ್ಲ**
**ಕಾರುಣಿಕರಪ್ಪ ಹಿರಿಯರ ಸಂಸರ್ಗ**
**ವಾರಿಂದಲಧಿಕ ಸರ್ವಜ್ಞ!**

**ಭೃಂಗ ಕೇಳಲು ಚಂದ–ಹಂಗ ನೋಡಲು ಚಂದ**
**ಭಂಗವಿಲ್ಲದ ನುಡಿ ಚೆಂದ –ಸಜ್ಜನರ**
**ಸಂಗವೇ ಚಂದ ಸರ್ವಜ್ಞ!**

**ಹಂಗನ ಬಲ ಲೇಸು – ಹಂಗಾಳು ಇರಲೇಸು**
**ಹಂಗಿಸದವರ ನೆರೆ ಲೇಸು–ಸಜ್ಜನರ**
**ಸಂಗವೇ ಲೇಸು ಸರ್ವಜ್ಞ!**

ಗುರುಹಿರಿಯರ, ಸತ್ಯವಂತರ, ಸಜ್ಜನರ ಸಹವಾಸ ಅಥವಾ ಸಂಗವೇ ಮಿಗಿಲಾದುದು ಮತ್ತು ಪರಮ ಶ್ರೇಷ್ಠವಾದುದು ಎಂದು ಮೇಲ್ಕಾಣಿಸಿದ ವಚನಗಳಲ್ಲಿ ಪ್ರತಿಪಾದಿಸಿದ್ದಾರೆ. ಆದುದರಿಂದ ಮನುಜನೇ ದುರ್ಜನರಿಂದ ದೂರ ಇರಲು ಪ್ರಯತ್ನಿಸು ಎನ್ನುವಂಥ ಬೋಧನೆ ಈ ಕೆಳಗಿನಂತಿದೆ. ಸಂಗ – ದುಸ್ಸಂಗ ಭೇದ–

**ಸಜ್ಜನರ ಸಂಗವದು – ಹೆಜ್ಜೇನು ಕೊಡದಂತೆ**
**ದುರ್ಜನರ ಸಂಗದೊಡನಾಟ – ಬಚ್ಚಲಿನಾ**
**ರೊಜ್ಜಿನಂತಿಹುದು ಸರ್ವಜ್ಞ**

**ಬಲ್ಲವರ ಒಡನಾಟ – ಬೆಲ್ಲವನು ಮೆಯ್ದಂತೆ**
**ಅಲ್ಲದಹುದೆಂಬ ಅಜ್ಞಾನಿಯೊಡನಾಟ**
**ಕಲ್ಲು ಹಾದಂತೆ ಸರ್ವಜ್ಞ**

**ಸತ್ಯವಂತರ ಒಡನಾಟ ಮತ್ತೆ ಸಕ್ಕರೆ ತುಪ್ಪ**
**ಸತ್ಯವಿಲ್ಲದವರ ಒಡನಾಟ – ಬೇಲಿಯ**
**ಒತ್ತಿಯಂತಿಹುದು ಸರ್ವಜ್ಞ**

ಹಾಗೆಯೇ ಮುಂದುವರೆದು ಹೇಳಿದುದೇನೆಂದರೆ –

**ಮಾನಹೀನರ ಸಂಗವೇನು ಕೊಟ್ಟರೂ ಬೇಡ**
**ಮಾನವುಳ್ಳವರ ಸಂಗ ತಾ ಸಕ್ಕರೆಯು**
**ಜೇನು ಸವಿದಂತೆ ಸರ್ವಜ್ಞ**

**ಸಜ್ಜನರು ಸಾಯಲೊಡೆ ನಿರ್ಜನರು ಮರುಗುವರು**
**ದೌರ್ಜನ್ಯಕಾಶಿಯು ಸತ್ತರೆ – ಹತ್ತಿರ್ದ**
**ಕಜ್ಜಿ ಹರಿದಂತೆ ಸರ್ವಜ್ಞ!**

ದೌರ್ಜನ್ಯವನ್ನು ಎಸಗುವವರ ಒಡನಾಟ ಸಲ್ಲದು, ಅವರಿಂದ ಕೇಡೇ ಗತಿ ವಿನಾ ಲೇಸು ಬಯಸಲಾರಿರಿ. ಅವರು ಹೇಗಿರುತ್ತಾರೆಂದರೆ –

**ಉರಗನ ಹಲ್ಲು ನಂಜು ಸರಿಗೆಯ ಮೊನೆ ನಂಜು**
**ಕರುಣವಿಲ್ಲದವರ ನುಡಿ ನಂಜು – ದುರ್ಜನರ**
**ಇರವೆಲ್ಲ ನಂಜು ಸರ್ವಜ್ಞ!**

ಎಂದುದಾಗಿ ಸರ್ವಜ್ಞ ಕವಿ ಹೇಳಿದ್ದು ಸತ್ಯವೆನಿಸದಿರದು. ಆದುದರಿಂದ ಅಂಥವರ ಸಹವಾಸದಿಂದ ದೂರವಿರಲು ಬೋಧಿಸಿದ್ದಾನೆ. ದುಸ್ಸಂಗದಿಂದ ದೂರವಿರಲು ಇನ್ನು ಕೆಲವು ವಚನಗಳಲ್ಲಿ ಕವಿ ಬೋಧಿಸಿದ್ದು ಹೀಗೆ –

**ಗಂಧವನು ತೇವಲ್ಲಿ – ಒಂದು ನೊಣವನು ಕಾಣೆ**
**ಸಂದಿಸಿಹ ಮಲವ ಬಿಡುವಲ್ಲಿ ನೊಣ ಮುತ್ತು**
**ವಂದವನು ನೋಡ ಸರ್ವಜ್ಞ**

**ಹೊನ್ನು ಇಲ್ಲದ ಮನುಜ–ತಿನ್ನಲಿಲ್ಲದ ಮನೆಯು**
**ಚುನ್ನವಾಡುವವನ ಗೆಳೆತನವು – ಇವು ಮೂರು**
**ಬನ್ನ ಕಾಣಯ್ಯ ಸರ್ವಜ್ಞ**

**ನಟ್ಟಡವಿಯ ಮನೆಯು – ಕುಷ್ಟ, ಕ್ಷಯ, ಬಡತನವು**
**ದುಷ್ಟ ನೆರೆಯು, ಇವು ಅಯ್ದು ಜಗದೊಳಗೆ**
**ನಷ್ಟವೇ ಕಾಣಯ್ಯ ಸರ್ವಜ್ಞ**

**ದಂತ ಪಂಕ್ತಿಯ ನಡುವ ಎಂತಿಪ್ಪುದದು ಜಿಹ್ವೆ**
**ಅಂತು ದುರ್ಜನರ ಬಳಸಿನಲಿ – ಸಜ್ಜನನು**
**ನಿಂತಿಹನು ನೋಡ – ಸರ್ವಜ್ಞ**



**ಕ್ಷೀರವನು ಮಾನವರು – ಮಾರುವರು ಮನೆಮನೆಗೆ**
**ಸಾರಾಯದೆಡೆಗೆ ಹಾರುವರು, ದುರುಳರ**
**ದಾರಿ ಇಂತೆಂದ ಸರ್ವಜ್ಞ**

ಈ ಎಲ್ಲ ವಚನಗಳ ತಾತ್ಪರ್ಯ ದುಷ್ಟರೊಂದಿಗೆ ಸಹವಾಸ ಮಾಡಬೇಡಿರಿ ಅವರ ಮಧ್ಯದಲ್ಲಿ ಬಾಳುತ್ತಿದ್ದರೂ, ಕೇಳಿಯೂ ಕೇಳದವರಂತೆ, ಇದ್ದೂ ಇಲ್ಲದವರಂತೆ, ಕಿವಿಯಿದ್ದೂ ಕಿವುಡರಂತೆ, ಗೊತ್ತಿದ್ದರೂ ಗೊತ್ತಿಲ್ಲದವರಂತೆ ಇರುವುದು ಸಜ್ಜನರಾದವರ ಗುಣ ಶ್ರೇಷ್ಠವೆಂದು ಹೇಳಿದ್ದಾನೆ ಕವಿ. ಕ್ಷಣ ಮಾತ್ರವಾದರೂ ಸದ್ಗುಣಿಗಳೊಡನಾಡುವುದು ಲೇಸು. ಆದರೆ ಗುಣಹೀನರೊಡನೆ ಒಡನಾಡುವುದೆಂದರೆ ಬಹುದುಃಖವಷ್ಟೇ ಅಲ್ಲ ಸುಣ್ಣದ ಕಲ್ಲು ಕಟ್ಟಿಕೊಂಡು ನೀರಿನೊಳಗೆ ಬಿದ್ದಂತೆಯೆಂದು ಕಟಕಿಯಾಡಿದ್ದಾನೆ ಸರ್ವಜ್ಞ ! ಆದುದರಿಂದ ದುಷ್ಟರಿಂದ ದೂರವಿರಲು ಈ ರೀತಿಯಾಗಿ ಬೋಧಿಸಿದ್ದಾನೆ.

**ಅರ್ಥವ್ಯವಸ್ಥೆಗೆ ಸರ್ವಜ್ಞನ ವಚನಗಳು :**

ಬದುಕಿನ ಸಹಸ್ರ ಮುಖಗಳನ್ನು ಹತ್ತಿರದಿಂದ ಕಂಡ ಸರ್ವಜ್ಞ ಕವಿ ತನ್ನ ವಚನಗಳಲ್ಲಿ ಅವನ್ನು ಅತ್ಯಂತ ಸೂಕ್ಷವಾಗಿ ಚಿತ್ರಿಸಿದ್ದಾನೆ. ಜನರ ಮನಸ್ಸಿನ ಒಳಸುಳಿಗಳನ್ನು ಶೋಧಿಸಬಲ್ಲ ಮಹಾಜ್ಞಾನಿಯಾಗಿದ್ದ ಕವಿ ಸರ್ವಜ್ಞನು ನೀಡಿರುವ ಒಂದೊಂದು ವಚನವೂ ಜೀವಂತ ಕಾವ್ಯವಾಗಿದೆ. ಆತನ ವಚನಗಳಲ್ಲಿ ಆ ಕಾಲದ ಸಾಮಾಜಿಕ ದರ್ಶನವಾಗುವುದಷ್ಟೇ ಅಲ್ಲದೆ, ಸಾರ್ವಕಾಲಿಕ ಸತ್ಯವನ್ನು ಹೇಳುವ ಅಪರೂಪದ ಅನುಭಾವವು ಅಲ್ಲಿ ಸೂರೆಗೊಂಡಿದೆ. ಕಾಲ, ದೇಶಗಳನ್ನು ದಾಟಿ ಪ್ರಸ್ತುತವಾಗುವಂತಹ ವಿಚಾರಧಾರೆಗಳನ್ನು ಗರ್ಭೀಕರಿಸಿಕೊಂಡಿರುವ ಸರ್ವಜ್ಞನ ವಚನಗಳು ಎಲ್ಲಾ ಕಾಲಕ್ಕೂ ಹೊಸ ಹೊಸ ಅರ್ಥಗಳನ್ನು ಅವು ಸ್ಫುರಿಸಬಲ್ಲವು. ಅಷ್ಟೇ ಅಲ್ಲ ಮನುಕುಲಕ್ಕೆ ಸತ್ಯದ ಮಾರ್ಗವನ್ನು ತೋರಬಲ್ಲ ದೀವಿಗೆಗಳು, ಎಂಬುದನ್ನು ಸತ್ಯ, ಸತ್ಸಂಗ ನೀತಿ–ರೀತಿ ವಿಭಾಗದಲ್ಲಿರುವ ವಚನಗಳನ್ನು ಈ ಹಿಂದಿನ ಅಧ್ಯಾಯದಲ್ಲಿ ನಿರವಿಸಲಾಗಿದೆ. ಸರ್ವಜ್ಞ ತತ್ತ್ವಜ್ಞಾನಿಯೂ, ಸಮಾಜದ ಶ್ರೇಷ್ಠ ಚಿಂತಕನೂ, ಆರ್ಥಿಕ ತಜ್ಞನೂ ಆಗಿ ಕೆಲವು ವಚನಗಳ ಮುಖಾಂತರ ಆರ್ಥಿಕ ಸಮಸ್ಯೆಗೆ ಪರಿಹಾರಗಳನ್ನು ಸೂಚಿಸಿರುವನು. ಘುದ್ದು–ದುಡ್ಡು–ಬ್ಲಡ್ಡು ಸರಿಯಾಗಿ ಸರಬರಾಜುತ್ತಿದ್ದರೆ ಮಾತ್ರ ಮಾನವನ ಬದುಕು ಸುಗಮವಾಗಿ ಸಾಗುತ್ತದೆ. ಅತಿಯಾದ ಗಳಿಕೆ ತನಗೇ ಅನರ್ಥ, ಕೇಡು. ಉಳ್ಳವರು ಇಲ್ಲದವರಿಗೆ ಸಾಲದ ರೂಪದಲ್ಲಿ ಕೊಡುವುದಕ್ಕಿಂತ ದಾನರೂಪದಲ್ಲಿ ಹಂಚುವುದು ಮೇಲು. ಸಾಲ ಕೊಟ್ಟವನು ಕೋಡಂಗಿಯಾಗುವ ಸಂಭವಗಳೇ ಹೆಚ್ಚು. ಸಾಲ ಮಾಡಿದವನಿಗದು ಶೂಲದಿಂದ ಇರಿದಂತಾಗುತ್ತದೆ.

ಸರ್ವಜ್ಞ ಹೇಳುವಂತೆ –

**ಸಾಲವನು ತರುವಾಗ – ಹಾಲು – ಬೋನುಂಡಂತೆ**
**ಸಾಲಿಗನು ಬಂದು ಕೇಳಿದರೆ, ಕುಂಡೆಗೆ**
**ಚೇಳು ಕಡಿದಂತೆ ಸರ್ವಜ್ಞ**

**ಸಾಲವನು ಕೊಂಡಾಗ ಹಾಲು–ಹಣ್ಣುಂಡಂತೆ**
**ಸಾಲಿಗರು ಬಂದು ಎಳೆವಾಗ, ಕಿಬ್ಬದಿಯ**
**ಕೀಲು ಮುರಿದಂತೆ ಸರ್ವಜ್ಞ**

**ನಂಬುಗೆಯು ಇರುವತನಕ ಕೊಂಬುವದು ಸಾಲವನು**
**ನಂಬುಗೆಯು ಕೆಟ್ಟ ಬಳಿಕ, ತಾ ಬೇಗೆಯಲಿ**
**ಬೆಂದು ಸತ್ತಂತೆ ಸರ್ವಜ್ಞ**

**ನೂರು ಹಣ ಸಿಗುವತನಕ – ಮೀರಿ ವಿನಯದಲ್ಲಿಪ್ಪ**
**ನೂರರೊಳ್ಮೂರ ಕೇಳಿದರೆ – ಸಾಲಿಗನು**
**ತೂರುವನು ಮಣ್ಣು ಸರ್ವಜ್ಞ**

**ಕೊಂಬುತ್ತ ಸಾಲವನು–ತಿಂಬುವನು ಲೇಸಾಗಿ**
**ಬೆಂಬಲವಿಡಿದು ಬಂದರೆ, ದೇಗುಲದ**
**ಕಂಬದಂತಿಹನು ಸರ್ವಜ್ಞ**

**ಬೋರಾಡಿ ಸಾಲವನು ಹಾರಾಡಿ ಒಯ್ಯುವನು**
**ಈರಾಡಿ ಬಂದು ಕೇಳಿದರೆ, ಸಾಲಿಗನು**
**ಚೀರಾಡಿ ಕೊಡನು ಸರ್ವಜ್ಞ**

**ಇದ್ದೂರ ಸಾಲ ಹೇಗಿದ್ದರೂ ಕೊಳಬೇಡ**
**ಇದ್ದುದನು ಸೆಳೆದು ಸಾಲ ಕೊಟ್ಟವ ಗುದ್ದಿ**
**ಒದ್ದು ಕೇಳುವನು ಸರ್ವಜ್ಞ**

**ಬೇರೂರ ಸಾಲವನು – ನೂರನಾದರೂ ಕೊಳ್ಳು**
**ಮೂರಾರು ವರುಷಕವ ಬಂದ ದಾರಿಯಲಿ**
**ಸಾರಿ ಹೋಗುವನು ಸರ್ವಜ್ಞ**



**ಗಡ್ಡವಿಲ್ಲದ ಮೋರೆ–ದುಡ್ಡು ಇಲ್ಲದೆ ಚೀಲ**
**ಬಡ್ಡಿಯ ಸಾಲ ತೆರುವವನ, ಬಾಳುವೆಯು**
**ಅಡ್ಡಕ್ಕು ಬೇಡ ಸರ್ವಜ್ಞ!**

ಇಲ್ಲದ್ದಕ್ಕೆ ಸಾಲ ಕೇಳುವುದು, ಪಡೆಯುವುದು ಸರಿಯಾದ ಮಾತೇನೋ ಸರಿ. ಆದರೆ ಅದನ್ನು ಸಕಾಲಕ್ಕೆ ಮರುಪಾವತಿಸುವ ಗುಣವೂ ಪಡೆದವನಲ್ಲಿರಬೇಕು. ಅದನ್ನು ಬಿಟ್ಟು ಕೊಟ್ಟವನೊಂದಿಗೆ ಚೀರಾಡಿ, ಬೋರಾಡಿ, ಹೋರಾಡಿ ಕೊಡುವುದಿಲ್ಲವೆಂದರೆ ಅದ್ಹೇಗೆ? ಆತ ಬಡ್ಡಿಯ ಆಸೆಯಿಂದಲಾದರೂ ಕೊಡಲಿ, ಆಪ್ತಮಿತ್ರನ ಆಪತ್ತನ್ನು ಗಮನಿಸಿ ಕೊಟ್ಟದ್ದಿರಲಿ ಸಾಲ ತಂದವನು ಕೊಡುವುದು ಉಚಿತ ಗುಣವೇ. ವ್ಯವಹಾರವೂ ಯಾವಾಗಲೂ ಇಬ್ಬರ ಮಧ್ಯದಲ್ಲಿ ಸೂಜಿಗೆ ಮುದ್ದು ಕೊಟ್ಟಂತಿರಬೇಕಂತೆ. ಇಲ್ಲವಾದರೆ ಸಾಲ ಮಾಡಲಾರದೇ ಇದ್ದುದರಲ್ಲಿಯೇ ಜೀವನ ಸಾಗಿಸುವುದು ಲೇಸು. ಹಾಸಿಗೆಯಿದ್ದಷ್ಟು ಕಾಲು ಚಾಚಬೇಕು ಎಂಬಂತೆ! ಈಗ ಸಾಲ ಪಡೆದ ರೈತರು ಎದುರಿಸುತ್ತಿರುವುದನ್ನು ಗಮನಿಸುತ್ತೇವೆ. ಬರಗಾಲದ ಬವಣೆಯನ್ನು ತಾಳಲಾರದೇ ಬ್ಯಾಂಕುಗಳಲ್ಲಿ, ಸಾಹುಕಾರರಲ್ಲಿ ಸಾಲ ಮಾಡಿದವರು; ಅದನ್ನು ಮರುಪಾವತಿಸುವುದಾಗಲಾರದ್ದಕ್ಕೆ ಅದೇಷ್ಟೋ ಆತ್ಮಹತ್ಯೆಯಾದ ಪ್ರಕರಣಗಳು ೨೦೧೬–೧೭ ರ ಸಾಲಿನಲ್ಲಿ ನೋಡಿದ್ದೇವೆ. ಸಾಲ ಮಾಡಿದ ಪ್ರಾಮಾಣಿಕರು ಮಾತ್ರ ಹೀಗೆ ಆತ್ಮಹತ್ಯೆ ಮಾಡಿಕೊಂಡದ್ದುಂಟು. ಆದರೆ ಅದು ತಪ್ಪು ಎಂದೆನಿಸಿದರೂ ಮಾನಾಪಮಾನದ ಪ್ರಶ್ನೆಯೆಂದು ಭಾವಿಸಿದ ಅಳ್ಳೆದೆಯ ರೈತರು– ಸಾಲಗಾರರು ಹೀಗೆ ಸಾವಿಗೆ ಶರಣಾಗತರಾದವರೇ ಹೆಚ್ಚು! ಇದು ಸರ್ಕಾರವಾಗಲಿ, ಸಮಾಜವಾಗಲಿ, ಏನು ಮಾಡಲು ಸಾಧ್ಯ ಹೇಳಿ? ಮಾನವ ಜನ್ಮ ಪದೇ ಪದೇ ಬರುವಂತಹದಲ್ಲ. ಅದು ಕಾರಣ ಯೋಚನೆ ಮಾಡಿ ಜೀವನ ನಿರ್ವಹಿಸುವುದು ಕೃಷಿಕನ, ಸಮಾಜ ಜೀವಿಯ ಪ್ರತಿಯೊಬ್ಬನ ಆದ್ಯ ಕರ್ತವ್ಯವಾಗಬೇಕು.

ಕೆಲವರು ಅರ್ಥ ಕಂಡರೆ ಬಿಡರು, ವ್ಯರ್ಥ ಶ್ರಮ ಪಡಲಾರದೇ ವಾಮಮಾರ್ಗದಿಂದ ಹಣ ಸಂಪಾದನೆ ಮಾಡುವರು. ಆಸೆಗೆ ಬಲಿಯಾಗಿ ಜೇಲುವಾಸಿಗಳಾದವರ ಲೆಕ್ಕವಿಟ್ಟವರಾರು? ಹಣದ ದಾಸರಾದವರು ಹಗರಣಗಳ ದಾಸರಾಗಿ ಹೆಣವಾದವರುಂಟು. ಅಂತಹ ಹಣ ಗಳಿಕೆಯಿಂದ ಇದ್ದವರಿಗೂ ನೆಮ್ಮದಿ–ಸುಖ ತರಲಾರದು. ಆದರೂ ಹಣವಿಲ್ಲದವನ ಬಾಳು ಹೆಣಕ್ಕಿಂತಲೂ ಕಡೆ ಎಂದಿಲ್ಲವೆ? ಇದು ದುಡ್ಡೇ ದೊಡ್ಡಪ್ಪನ ಕಾಲ. ದುಡ್ಡು ಇದ್ದವರಿಗೆ ಮಾತ್ರ ಆ ಕಡೆಗೆ ಬನ್ನಿ ಈ ಕಡೆಗೆ ಬನ್ನಿ ಎನ್ನುತ್ತಾರೆ. ಇಲ್ಲದವರನ್ನು ದೂರೀಕರಿಸುತ್ತಾರೆ. ಇಂಥ ಕಠಿಣ ಕಾಲಘಟ್ಟದಲ್ಲಿ ನಾವಿದ್ದೇವೆ. ಹಣ ಸಂಪಾದನೆಗೆ ಬದುಕು ಹೋರಾಟದ್ದಾಗಿದೆ. ಸರ್ವಜ್ಞ ಕವಿ ಹೇಳುವಂತೆ

**ಧನಕನಕ ಉಳ್ಳನಕ ದಿನಕರನ ವೋಲಕ್ಕು**
**ಧನಕನಕ ಹೋದ ಮರುದಿನ, ಹಾಳೂರು**
**ಶುನಕನಂತಕ್ಕು ಸರ್ವಜ್ಞ**

**ನಾಲ್ಕು ಹಣವುಳ್ಳನಕ – ಪಾಲಿಕೆಯಲಿ ಮೆರೆದಿಕ್ಕು**
**ಆ–ನಾಲ್ಕು ಹಣ ಹೋದ ಮರುದಿನ, ಕೋಳದಲಿ**
**ಸಿಕ್ಕಿದಂತಿಕ್ಕು ಸರ್ವಜ್ಞ**

**ಎಂಟು ಹಣವುಳ್ಳನಕ–ಬಂಟನೆಂದೆನಿಸಿಕ್ಕು**
**ಎಂಟು ಹಣ ಹೋದ ಮರುದಿನ, ಹುಳ ತಿಂದ**
**ದಂಟಿನಂತಿಕ್ಕು ಸರ್ವಜ್ಞ**

**ಮಡದಿ–ಮಕ್ಕಳ ಮಮತೆ ಒಡಲೊಡವೆಯಿರುವತನಕ**
**ಒಡಲೊಡವೆ ಕೆಡೆದ ಮರುದಿನವೆ, ಅವರೆಲ್ಲ**
**ಕಡೆಗೆ ಸಾರಿಹರು ಸರ್ವಜ್ಞ**

ಇಂತು ಸರ್ವಜ್ಞನ ವಚನಗಳಲ್ಲಿ ಹಣ, ಗಳಿಸುವಿಕೆ, ಬಳಸುವಿಕೆ, ಉಳಿಸುವಿಕೆಗೆ ಮತ್ತು ಸರಿಯಾದ ಸದುಪಯೋಗಕ್ಕೆ ಮಾರ್ಗೋಪಾಯಗಳನ್ನು ಮೇಲಿನ ವಚನಗಳಲ್ಲಿ ತಿಳಿಸಿದ್ದಾನಲ್ಲದೇ ಧನ=ಕನಕವು ಇರುವತನಕ ಮಾತ್ರ ನನ್ನವರು ಎಂದು ಮಡದಿ–ಮಕ್ಕಳು–ಬಂಧು–ಬಳಗದವರು ಬೆಲ್ಲಕ್ಕೆ ಅಥವಾ ಸಕ್ಕರೆಗೆ ನೊಣ(ಇರುವೆ) ಮುಕ್ಕುರುವಂತೆ ಮುತ್ತುತ್ತಾರೆ, ಸುತ್ತುತ್ತಾರೆ, ಪ್ರೀತಿ ತೋರುತ್ತಾರೆ. ಅದರದು ಹೋದ ಮರುದಿವಸ ಹಾಳು ಬಾವಿಗೆ ತಳ್ಳುವರು ಎಂಬಂತಹ ಸ್ಥಿತಿ ಬಂದೊದಗುತ್ತದೆ. ಹೀಗೆ ಸರ್ವಜ್ಞನ ಅನೇಕ ವಚನಗಳಲ್ಲಿ ಮಾನವನ ಆರ್ಥಿಕ ಚಟುವಟಿಕೆಯ ಹೊಳಹುಗಳನ್ನು ಕಾಣಬಹುದು. ತನ್ನ ಕಾಲದ ಜನರ ಆರ್ಥಿಕ ಚಟುವಟಿಕೆಯ ಹೊಳಹುಗಳನ್ನು ಕಾಣಬಹುದು. ತನ್ನ ಕಾಲದ ಜನರ ಆರ್ಥಿಕ ವ್ಯವಹಾರಗಳ ಬಗ್ಗೆ, ಧನಕನಕಾದಿಗಳ ಮೇಲೆ ಅವರ ಅವಲಂಬನೆ, ಆಲೋಚನೆಗಳ ಬಗ್ಗೆ ಅಂದು ಹೇಳಿದವು ಇಂದಿಗೂ–ಎಂದೆಂದಿಗೂ ಪ್ರಸ್ತುತವಾಗುತ್ತವೆ. ಆದುದರಿಂದ ಆತನೊಬ್ಬ ಶ್ರೇಷ್ಠ ಆರ್ಥಿಕ ತಜ್ಞನೆಂದು ಹೇಳಬಲ್ಲೆ!

**ಹೊನ್ನು ಇಲ್ಲದ ಮನುಜ–ತಿನ್ನಲಿಲ್ಲದ ಮನೆಯು**
**ಚುನ್ನವಾಡುವನ ಗೆಳೆತನವು ಇವು ಮೂರು**
**ಬನ್ನ ಕಾಣಯ್ಯ ಸರ್ವಜ್ಞ**



ಹತ್ತಿರ ಹಣವಿಲ್ಲದವನ ಬಾಳುವೆಯು, ಮನೆಯಲ್ಲಿ ಆಹಾರವಿಲ್ಲದ ಸಂಸಾರ ಮತ್ತು ಕೀಳುತನದಿಂದ ಚೇಷ್ಟೆ ಮಾಡುವಂಥವರೊಡನೆ ಗೆಳೆತನ ಇವು ಮೂರು ಕಷ್ಟದಾಯಕವು ಎಂದಿದ್ದಾನೆ.

**ರೊಕ್ಕವಿಲ್ಲದ ಬಾಳುವೆ–ಮಕ್ಕಳಿಲ್ಲದ ಮನೆಯು**
**ಅಕ್ಕರವಿರದ ತವರೂರು–ಇವು ಮೂರು**
**ದುಕ್ಕ ಕಾಣಯ್ಯ ಸರ್ವಜ್ಞ**

ಮೇಲೆ ಹೇಳಿರುವಂತೆ ಹಣವಿಲ್ಲದವನ ಬಾಳುವೆ, ಮಕ್ಕಳಿಲ್ಲದಂಥ ಮನೆ ಹಾಗೂ ಪ್ರೀತಿ–ವಾತ್ಸಲ್ಯವಿರದಂಥ ತವರುಮನೆ – ಇವು– ಮೂರು ದುಃಖದಾಯಕಗಳು ಎಂದಿದ್ದಾನೆ ಸರ್ವಜ್ಞ, ಹಾಗೆಯೇ ಬೆಚ್ಚನೆಯ ಮನೆ–ವೆಚ್ಚಕ್ಕೆ ಹೊನ್ನು (ಹಣ) ಪತಿಯ ಇಚ್ಛೆಯನರಿತುಕೊಂಡು ನಡೆಯುವ ಸತಿ ಇವು ಮೂರು ಇರಲಾಗಿ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದಿದ್ದಾನೆ ಕವಿ.

**ಕಂಡವರ ದಂಡಿಸುತ್ತ– ಕೊಂಡವರ ಒಡವೆಗಳ**
**ನುಂಡುಂಡು ಮಲಗಿ ಮಡಿದ ಮೇಲವಗೆ ಯಮ**
**ದಂಡ ತಪ್ಪುವುದೆ? ಸರ್ವಜ್ಞ**

ಧನಕ–ಕನಕ ಬದುಕಿಗಾಧಾರ ಮತ್ತು ಅತ್ಯಗತ್ಯ. ಆದರೆ ಅತಿಯಾಸೆ ಗತಿಗೆಡಿಸೀತೆಂದಂತಾಗಬಾರದು. ಧನಕನಕವನ್ನು ಗಳಿಸಲು ಎರಡು ದಾರಿಗಳುಂಟು. ಒಂದು ನ್ಯಾಯದ ಮಾರ್ಗವಾದರೆ ಇನ್ನೊಂದು ವಾಮಮಾರ್ಗ– ಇತ್ತೀಚೆಗೆ ಹಣ, ಆಸ್ತಿ–ಸಂಪಾದನೆಯನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡು ಜನರು ಭೋಗ ಜೀವನದ ದುರಾಸೆಗೆ ಬಲಿಯಾಗಿ ಅನ್ಯಾಯದ ಮಾರ್ಗದಲ್ಲಿ ನಡೆದು ಹಣ, ಐಶ್ವರ್ಯಗಳನ್ನೇನೋ ಸಂಪಾದಿಸುತ್ತಾರೆ. ಆದರೆ ಅದಕ್ಕಾಗಿ ಮಾನವೀಯ ಸಂಬಂಧಗಳಿಂದ ದೂರ ಸರಿದು ಶಾಂತಿ, ನೆಮ್ಮದಿ ಕಳೆದುಕೊಳ್ಳುತ್ತಿದ್ದಾರೆ. ನ್ಯಾಯದ ದಾರಿಯಿಂದ ಸ್ವಂತ ದುಡಿಮೆಯಿಂದ ಬೇರೆಯವರಿಗೆ ತೊಂದರೆಯಾಗದಂತೆ ಆದಾಯವನ್ನು ಗಳಿಸುವುದು ಸಮಾಜ ಮತ್ತು ವ್ಯಕ್ತಿಗಳ ಬದುಕಿನ ಹಿತ ಕಾಪಾಡುತ್ತದೆ. 'ಅನ್ಯಾಯ ಪ್ರವೃತ್ತೇರ್ನ ಚಿರಂ ಸಂಪದಂ' ಎಂಬಂತೆ ಬೇರೆಯವರ ಮೈ ಮನಸ್ಸುಗಳನ್ನು ನೋಯಿಸಿ, ಬೇಯಿಸಿ, ಗಳಿಸಿದ ಸಂಪತ್ತು ಬಹುಕಾಲ

ಉಳಿಯಲಾರದು. ಅದರಿಂದ ಒಳಿತಾಗಲಾರದು. ಅನ್ಯಾಯಕ್ಕೊಳಗಾದವರ ಕಣ್ಣೀರು ಸುಡದಿರದು ಎಂದಿದ್ದಾನೆ ಕವಿ. ಈಗಾಗಲೇ ಉಲ್ಲೇಖಗೊಂಡಿರುವಂತೆ –

**ಸಾಲವನು ಕೊಂಬಾಗ ಹಾಲೋಗರುಂಡಂತೆ**
**ಸಾಲಿಗರು ಬಂದು ಎಳೆವಾಗ ಕಿಬ್ಬದಿಯ**
**ಕೀಲು ಮುರಿದಂತೆ ಸರ್ವಜ್ಞ**

ಸುಲಿದ ಬಾಳೆಯ ಹಣ್ಣಿನಂತೆ ಸರಳವಾಗಿರುವ ಈ ವಚನದ ಒಳಗೆ ಪ್ರವೇಶಿಸಿದಾಗ ಮನುಷ್ಯನ ಅತಿಯಾಸೆಯ ಒಳಮರ್ಮವನ್ನು ಇದು ಅನಾವರಣಗೊಳಿಸುತ್ತದೆ. ಅರ್ಥದ ಔಚಿತ್ಯ, ಅಗತ್ಯ, ವ್ಯಾಪ್ತಿ, ಸಾಧ್ಯತೆ, ಸಂಭ್ರಮ ಎಲ್ಲವನ್ನು ಗಮನಿಸಿ ಅರ್ಥದ ಬಯಕೆಗೆ ಒಂದು ಮಿತಿಯನ್ನು ಕಲ್ಪಿಸಿಕೊಂಡಾಗಲೇ ಅರ್ಥದ ಪ್ರಯೋಜನ ಕೈ ಸೇರುವುದು, ಅರ್ಥ ಸಾರ್ಥಕವಾಗುವುದು. ಈ ಬಗೆಯ ವಿವೇಕವನ್ನು ಬೆಳೆಸಿಕೊಂಡದ್ದಲ್ಲದೆ ಅರ್ಥದಿಂದ ಅನರ್ಥ ತಪ್ಪಿದ್ದಲ್ಲವೆಂದು ಹೇಳಿರುವನು.

ಒಟ್ಟಿನಲ್ಲಿ ಆರ್ಥಿಕ ಜಗತ್ತಿನ ಒಳನೋಟಗಳುಳ್ಳ ಸರ್ವಜ್ಞನ ವಚನಗಳಿಗೆ ಇಂದಿನ ಆರ್ಥಿಕ ವ್ಯವಸ್ಥೆಯ ಎಲ್ಲಾ ಅವಾಂತರಗಳಿಗೆ ಸ್ಪಷ್ಟ ಉತ್ತರ ನೀಡಬಲ್ಲ ಧೀಶಕ್ತಿಯಿದೆ. ಆರ್ಥಿಕತೆಯ ಬಗ್ಗೆ ಜನರ ಚಿಂತನಾ ಕ್ರಮಗಳಲ್ಲಿನ ದೋಷಗಳನ್ನು ಎತ್ತಿ ತೋರಿಸುವುದರ ಜೊತೆಗೆ ಸರಿದಾರಿಗೆ ತೆಗೆದುಕೊಂಡು ಹೋಗುವ ವಿಶೇಷ ಕಾಳಜಿಯೂ ಸರ್ವಜ್ಞನ ವಚನಗಳಲ್ಲಿದೆ. ಹೀಗೆ ಸರ್ವಜ್ಞನ ವಚನಗಳನ್ನು ವಿಶ್ಲೇಷಿಸುತ್ತಾ ಹೋದಾಗ ಅದೊಂದು ಸಾಹಿತ್ಯ ಪ್ರಕಾರ ಮಾತ್ರವಲ್ಲ. ಅದಕ್ಕಿಂತ ಮಿಗಿಲಾಗಿ ಅದೊಂದು ಜೀವನ ಪ್ರಕಾರ ಎಂಬುದು ನಮಗೆ ತಿಳಿದು ಬರುತ್ತದೆ. ಇಂದಿನ ಆರ್ಥಿಕ ಜಗತ್ತಿನ ಎಲ್ಲಾ ವಿಕೃತಿ, ವಿಕ್ಷೋಭಗಳಿಗೆ, ಸಮಾಜದ ಪ್ರಗತಿಗೆ ಕಂಟಕಪ್ರಾಯವಾಗಿರುವ ಹಲವು ಸಮಸ್ಯೆಗಳಿಗೆ ಸರ್ವಜ್ಞನ ವಚನ ವಾಙ್ಮಯದಲ್ಲಿ ಸಿದ್ಧವಾದ ಔಷಧವಿದೆಯೆಂದು ಹೇಳಬಹುದು. ಸಮಕಾಲೀನ ಚಿಂತನೆ, ಸ್ವಭಾವ, ಸಮಾಜ ಎಲ್ಲವೂ ಬದಲಾವಣೆ ಆಗಿರುವಾಗ ಬದುಕೂ ವ್ಯವಹಾರಿಕವಾಗಿದೆ. ಹಣದ ದಾಸ್ಯದಿಂದ ಜೀವನದ ಮೌಲ್ಯಗಳನ್ನು ಗಾಳಿಗೆ ತೂರಿರುವ ಇಂದು ತ್ರಿಕರಣ ಶುದ್ಧಿಗೆ, ಸಮನ್ವಯ ಸಾಧನೆಗೆ ಸರ್ವಜ್ಞನ ವಚನಗಳು ಬೋಧಪ್ರದವಾಗಿದೆ.



## ಸರ್ವಜ್ಞನ ಅನುಭವೋಕ್ತಿ

**"ಅನುಭವವಿದ್ದಲ್ಲಿ ಅಮೃತತ್ವವಿರುತ್ತದೆ"** ಎಂಬ ಗಾದೆಯಂತೆ ಕವಿ ಸರ್ವಜ್ಞನು ಲೋಕ ಸಂಚಾರಗೈಯ್ಯುವಾಗ ಅನೇಕ ಪ್ರಸಂಗಗಳು ಎದುರಾದವು ಎಂದು ತೋರುತ್ತದೆ. ವಿರಕ್ತರಿರಲಿ, ಸಂಸಾರಸ್ಥರಿರಲಿ, ರಾಜಕಾರಣಿಗಳಿರಲಿ, ಸ್ತ್ರೀ–ಪುರುಷರಿರಲಿ, ವಿವಾಹಿತರು–ಅವಿವಾಹಿತರಿರಲಿ ಸಮಾಜದಲ್ಲಿ ಹೇಗೆ ಇರಬೇಕೆಂಬುದಕ್ಕೆ ಅನೇಕ ದೃಷ್ಟಾಂತಗಳೊಂದಿಗೆ ಹೋಲಿಕೆ ಮಾಡುತ್ತ ವಚನಗಳನ್ನು ರಚಿಸಿರುವನು. ಅವುಗಳನ್ನು ಓದುವಾಗ ನಾವು ಆಶ್ಚರ್ಯಚಕಿತರಾಗುತ್ತೇವೆ. ಅಂತಹ ಅಮೂಲ್ಯವಾದ ಅಮೃತವಾಣಿಗಳನ್ನು ನೀಡಿದ್ದು ನಮಗೆ ತುಂಬಾ ಸಹಕಾರಿಯಾಗಿವೆ. ಸರ್ವಜ್ಞನು ಕೊಟ್ಟ ಪ್ರತಿಯೊಂದು ಪದ್ಯ ಉಪದೇಶಾಮೃತವಾಗಿವೆ. ಕೆಲವನ್ನಾಯ್ದುಕೊಂಡು ಕೊಡಲಾಗಿದೆ.

**ಏರುವ ಕುದುರೆಯನು – ಹೇರುವ ಎತ್ತನ್ನು**
**ಬೇರೂರಲ್ಲಿದ್ದ ಸತಿಯನ್ನು – ಬೇರೊಬ್ಬರು**
**ಏರಲು ಬಿಡರು ಸರ್ವಜ್ಞ**

**ಸೇರಿದ ಹೊಲವನ್ನು–ಹೋರುವ ಮಗನನ್ನು**
**ಚಾರು ಮೈನೆರೆದ ಮಗಳನ್ನು–ಪರರಲ್ಲಿ**
**ಬೀರುವವನೆಗ್ಗ ಸರ್ವಜ್ಞ**

**ದಿನಪತಿಗೆ ಎಣೆಯಿಲ್ಲ – ಧನಪತಿಗೆ ಸ್ಥಿರವಿಲ್ಲ**
**ಅನುಭವಿಗೆ ಬೇರೆ ಮತವಿಲ್ಲ–ಅರಿದಂಗೆ**
**ಮುನಿವರರೆ ಇಲ್ಲ ಸರ್ವಜ್ಞ**

**ಕಾಯಕವು ಉಳ್ಳನಕ–ನಾಯಕನು ಎನಿಸಿಪ್ಪ**
**ಕಾಯಕವು ತೀರಿದ ಮರುದಿನವೆ ಸುಡುಗಾಡ**
**ನಾಯಕನು ಎನಿಪ ಸರ್ವಜ್ಞ**

**ತುತ್ತಿನಾಸೆಗೆ ಮತವ–ವಿತ್ತದಾಸೆಗೆ ಸತಿಯ**
**ನಿತ್ತು ಬಾಳುವ ಮನುಜರ ಸಂಗವು**
**ಸತ್ತರೂ ಬೇಡ ಸರ್ವಜ್ಞ**

**ಹಂಗಿನರಮನೆಗಿಂತ–ವಿಂಗಡದ ಗುಡಿಲೇಸು**
**ಭಂಗಬಟ್ಟುಂಬ ಬಿಸಿಯನ್ನಕ್ಕಿಂತಲೂ**
**ತಂಗುಳವೇ ಲೇಸು ಸರ್ವಜ್ಞ**

ಹಾಲು ಇಲ್ಲದ ಊಟ ಬಾಲೆಯರ ಬಿರುನೋಟ
ಕಾಲಿಲ್ಲದವನ ಹರಿದಾಟ-ಕಂಗಳನ
ಕೋಲು ಕಳೆದಂತೆ ಸರ್ವಜ್ಞ

ಆಳಾಗಬಲ್ಲವನು ಅರಸಾಗಿ ಆಳುವನು
ಆಳಾಗಿ ಬಾಳಲರಿಯದವನು, ಕಡೆಯಲ್ಲಿ
ಹಾಳಾಗಿ ಹೋಹ ಸರ್ವಜ್ಞ!

ಬೇಗೆಯೊಳು ಹೋಗದಿರು ಮೂಗರೊಳು ನುಡಿಯದಿರು
ಆಗದವರ ನಂಬಿ ಕೆಡದಿರು-ನಡುವಿರುಳು
ಹೋಗದಿರು ಪಯಣ ಸರ್ವಜ್ಞ

ಮೆಚ್ಚದಿರು ಪರಸತಿಯ-ರಚ್ಚೆಯೊಳು ಬೆರೆಯದಿರು
ನಿಚ್ಚ ನೆರೆಯೊಳಗೆ ಕಾದದಿರು-ಒಬ್ಬರ
ಇಚ್ಛೆಯಲಿರದಿರು ಸರ್ವಜ್ಞ

ಮಾನಾಪಮಾನವನು-ಜ್ಞಾನ ತನಗಾಗುದನು
ಮಾನಿನಿಯು ಒಲಿದ ರತಿಸುಖವ, ಪರರಲ್ಲಿ
ಮಾನಿಸುವನೆಗ್ಗ ಸರ್ವಜ್ಞ

ಆನೆ ಬೀದಿಲಿ ಬರಲು-ಶ್ವಾನ ತಾ ಬೊಗಳುವುದು
ಶ್ವಾನನಂತಾನೆ ಬೊಗಳಿದರೆ, ಆನೆಯ
ಮಾನವೇ ಹಾನಿ ಸರ್ವಜ್ಞ

ತಾಗುವ ಮುನ್ನವೇ ಬಾಗುವ ತಲೆ ಲೇಸು
ತಾಗಿ ತಲೆಯೊಡೆದು ಕೆಲನಾದ ಬಳಿಕದರ
ಭೋಗವೇನೆಂದ ಸರ್ವಜ್ಞ!

ಸಾವ ಸಂಕಟ ಹೊಲ್ಲ-ಹಾವಿನ ವಿಷ ಹೊಲ್ಲ
ನಾವಿಗನ ಕೂಡ ಹಗೆ ಹೊಲ್ಲ- ಚಿಕ್ಕವರ
ಕಾವುದೇ ಹೊಲ್ಲ ಸರ್ವಜ್ಞ

ಬರೆವ ಕರಣಿಕನೊಡನೆ-ಹಿರಿದು ಹೋರಲುಬೇಡ
ಗರಗಸದೊಡನೆ ಮರ ಹೋರಿ ತನ್ನತಾ
ನಿರಿದುಕೊಂಡಂತೆ ಸರ್ವಜ್ಞ



ಸಿರಿಯ ಸಂಸಾರವನು ಸ್ಥಿರವೆಂದು ನಂಬದಿರು
ಹಿರಿದೊಂದು ಸಂತೆ ನೆರೆದೊಂದು ಜಾವಕ್ಕೆ
ಹರಿದು ಹೋದಂತೆ ಸರ್ವಜ್ಞ

ಅಟ್ಟಿಕ್ಕುವಾರೆಯೊಳು-ಬೆಟ್ಟಿತ್ತು ಹಗೆ ಬೇಡ
ಸಟ್ಟುಗದಿ ಗೋಣ ಮುರಿಯುವಳು, ಅಲಗಿಲ್ಲ
ದಿಟ್ಟಿಯಾಳವಳು ಸರ್ವಜ್ಞ

ಊರೆಲ್ಲ ನೆಂಟರು-ಕೇರಿಯೆಲ್ಲವು ಬಳಗ
ಧಾರುಣಿಯು ಎಲ್ಲ ಕುಲದೈವವಾಗಿನ್ನು
ಯಾರನ್ನು ಬಿಡಲೋ ಸರ್ವಜ್ಞ

ಇಂಥ ಅನುಭವೋಕ್ತಿಗಳ ರಚನೆ ಕವಿ ಸರ್ವಜ್ಞನಿಗೆ ಜನಪದರ ದೇಸೀಯ ಹಾಡುಗಳ ಪ್ರಭಾವ ಮತ್ತು ಹನ್ನೆರಡನೆಯ ಶತಮಾನದ ಬಸವಾದಿ ಶಿವಶರಣರ ವಚನಗಳ ಪ್ರೇರಣೆಯಾಗಿರಲುಬೇಕು.

ಲಿಂಗಾಯತ ಧರ್ಮದ ಉದ್ಧಾರಕರಾದ ಬಸವಣ್ಣ, ಚನ್ನಬಸವಣ್ಣ, ಅಲ್ಲಮ, ಸಿದ್ಧರಾಮ, ಅಕ್ಕಮಹಾದೇವಿ, ಮೊದಲಾದ ಶಿವಶರಣರು ಕನ್ನಡ ಉಪನಿಷತ್ತು ಎನಿಸುವ ವಚನಶಾಸ್ತ್ರದಲ್ಲಿ ಲಿಂಗಾಯತ ಸಿದ್ಧಾಂತಕ್ಕನುಸಾರವಾಗಿ ಮೇಲೆ ಹೇಳಿದ ವಿಚಾರಗಳ ಬಗ್ಗೆ ಮಾರ್ಮಿಕವಾಗಿ ಟೀಕಿಸಿದ್ದಾರೆ. ಸಮಾಜದಲ್ಲಿರುವ ಪ್ರತಿಯೊಬ್ಬ ಮಾನವನು ರೀತಿ-ನೀತಿಗಳ ಚೌಕಟ್ಟಿನಲ್ಲಿ ಬದುಕಿದರೆ ಸುಸಂಸ್ಕೃತ ಸಮಾಜ ನಿರ್ಮಾಣವಾಗಲು ಸಾಧ್ಯವಾಗುತ್ತದೆಯೆಂಬ ವಿಷಯವನ್ನು ತನ್ನ ವಚನಗಳಲ್ಲಿ ಲೋಕೋಕ್ತಿಗಳನ್ನು ಹೇರಳವಾಗಿ ಬಳಸಿದ್ದಾನೆ. ಕವಿ ಸರ್ವಜ್ಞ, ಬೇಗೆಯೊಳು ಹೋಗದಿರು, ಮೂಗರೊಳು ನುಡಿಯದಿರು, ಮೆಚ್ಚದಿರು ಪರಸತಿಯ-ರಚ್ಚೆಯೊಳು ಬೆರೆಯದಿರು, ತಾಗುವ ಮುನ್ನವೇ ಬಾಗುವ ತಲೆ ಲೇಸು, ತಾಗಿ ಬಾಗುವದರಿಂದ –ತಾಗದಿರುವುದೇ ಲೇಸು, ಸಿರಿಯ ಸಂಸಾರವಿದನು ಸ್ಥಿರವೆಂದು ನಂಬದಿರು, ಅದು ಕಾಡ ಬೆಳದಿಂಗಳಿದ್ದಂತೆ, ಅಟ್ಟಿಕ್ಕುವಾಳೆಯೊಳು-ಬೆಟ್ಟಿತ್ತು ಹಗೆ ಬೇಡ, ಊರೆಲ್ಲ ನೆಂಟರು ಕೇರಿಯೆಲ್ಲವೂ ಬಳಗ, ದಿನಪತಿಗೆ ಎಣೆಯಿಲ್ಲ – ಧನಪತಿಗೆ ಸ್ಥಿರವಿಲ್ಲ. ಕಾಯಕವು ಉಳ್ಳನಕ-ನಾಯಕನು ಎನಿಸಿಪ್ಪ, ಹಂಗಿನರಮನೆಗಿಂತ ವಿಂಗಡದ ಗುಡಿ ಲೇಸು, ಆಳಾಗಬಲ್ಲವನು – ಅರಸಾಗಿ ಆಳುವನು ಅಥವಾ ಉಣ್ಣುವನು – ಈ ಮುಂತಾದ ಅಣಿಮುತ್ತುಗಳನ್ನು ಓದಿದರೆ, ಕೇಳುತ್ತಿದ್ದರೆ, ಅದರಂತೆ ನಡೆ-ನುಡಿಯಲ್ಲಿ ಆಚರಣೆಗೆ ತಂದರೆ, ಅವರ ಬಾಳು ಬಂಗಾರವಾಗುತ್ತದೆಯೆಂದು ಹೇಳಬಹುದು. ವಿಶೇಷತಃ ಮಥನದಿಂದ ಮಥಿಸಿದ್ದು

ವಚನಗಳು ರಸವತ್ತಾಗಿ, ಅನುಸರಿಸಿದವರ ಬಾಳಿನ ಬೆಳಕಾಗಿವೆ. ಸರ್ವಜ್ಞಮೂರ್ತಿಯೂ ವಿಚಾರ ಕ್ರಾಂತಿಕಾರಕವಾದ ವಚನಕಾರರ ಗುಂಪಿಗೇ ಸೇರಿದವನು ಎಂದು ಹೇಳಬಹುದು. ಅಪಾರವಾದ ಶಾಸ್ತ್ರಜ್ಞಾನ, ಕಾವ್ಯ ಪರಿಚಯ, ಪಂಡಿತ ಭಾಷಣ, ದೇಶದಾಟಗಳ ಬಲದಿಂದಲೂ ತಮ್ಮ ಅಸಾಧಾರಣವಾದ ಪ್ರತಿಭಾಶಕ್ತಿಯಿಂದಲೂ ಕವಿಯು ಅನುಭವಪೂರ್ಣ, ಅಭ್ಯಾಸಪೂರ್ಣವಾದ ವಿಚಾರಧಾರೆಗಳನ್ನು ಲೋಕದ ಡೊಂಕು ತಿದ್ದುವಲ್ಲಿ ಯಶಸ್ವಿಯಾಗಿದ್ದಾನೆ. ಅಂತಹ ಅನುಭವಜನ್ಯವಾದ ವಚನಗಳು ಇನ್ನು ಅನೇಕ ಇವೆ.

**ಹೆಣ್ಣಿನಿಂದಲೆ ಇಹವು – ಹೆಣ್ಣಿನಿಂದಲೆ ಪರವು**
**ಹೆಣ್ಣಿಂದ ಸಕಲ ಸಂಪದವು– ಹೆಣ್ಣೊಲ್ಲದ**
**ಅಣ್ಣಗಳು ಯಾರಿಹರು ಸರ್ವಜ್ಞ**

**ಪಲ್ಲಕ್ಕಿ ಏರಿದವರೆಲ್ಲಿಂದ ಬಂದಿಹರು**
**ನೆಲ್ಲಕ್ಕಿಯಂತ ಸುಲಿಪಲ್ಲ ಹಿರಿಯರು**
**ನಲ್ಲಳಿಂದಲ್ಲೆ? ಸರ್ವಜ್ಞ**

**ಲೆಕ್ಕಕ್ಕೆ ದುಕ್ಕಿಲ್ಲ–ಬೆಕ್ಕಿಗಂ ವ್ರತವಿಲ್ಲ**
**ಸಿಕ್ಕು ಬಂಧನದಿ ಸುಖವಿಲ್ಲ–ನಾರಿಗೆ**
**ಸಿಕ್ಕದವರಿಲ್ಲ ಸರ್ವಜ್ಞ**

**ಪರತಪಸಿ ಸನ್ಯಾಸಿ–ಪರಮಯೋಗಿಯು ಮುನಿಯು**
**ಸೆರೆಸಿಕ್ಕು ಮಾಯೊಗೊಳಗಾಗಿ– ಇರುತಿರಲು**
**ಪರರ ಪಾಡೇನು ಸರ್ವಜ್ಞ?**

**ರುದ್ರಕರ್ತನು ತಾನು–ಅರ್ಧನಾರಿಯು ಆದ**
**ಇದ್ದವರೊಳಾರು ಸತಿಯರ ಹೃದಯವನು**
**ಗೆದ್ದವರು ಯಾರು? ಸರ್ವಜ್ಞ!**

**ಉಚ್ಚೆಯ ಬಚ್ಚಲವ ತುಚ್ಚನೆನಬೇಡ**
**ಅಚ್ಯುತ ಬಿದ್ದನಜ ಬಿದ್ದ–ದೇವೇಂದ್ರ**
**ನೆಚ್ಚತ್ತು ಬಿದ್ದ ಸರ್ವಜ್ಞ**

ಇವುಗಳಲ್ಲಿ ಸ್ತ್ರೀ ಸ್ತುತಿಯೂ ಇದೆ. ಆಕೆಯ ಅವಶ್ಯಕತೆಯೂ ಪುರುಷನಿಗೆ ಬೇಕೆಂಬುದರ ಸಾರಾಸಾರ ವಿವೇಚನೆ ಮಾಡಿದ ವಚನಗಳ ರಚನೆಯವಾಗಿವೆ.



ಸ್ತ್ರೀಯಿಂದ ಪುರುಷ – ಪುರುಷನಿಂದ ಸ್ತ್ರೀ–ಇವರು ಪರಸ್ಪರರು ಅರ್ಥ ಮಾಡಿಕೊಂಡು ಬಾಳುವುದೇ ಚಂದವೆಂದಿದ್ದಾನೆ. ಸನ್ಯಾಸಿ, ತಪಸ್ವಿಗಳನ್ನೂ ಮಾಯೆ ಬಿಟ್ಟಿಲ್ಲ ಇನ್ನು ಸಂಸಾರಸ್ಥರಾದವರ ಪಾಡೇನು? ಎಂದೂ ಪ್ರಶ್ನಿಸಿ ಉತ್ತರಿಸಿದ, ಬಗೆಯೂ ಇವನಲ್ಲಿವೆ. ಸ್ತ್ರೀಯರನ್ನು ದೇವತೆಯಂತೆ, ಮಾತೆಯಂತೆ, ಸಹೋದರಿರಂತೆ, ಕಾಣಬೇಕೆಂಬ ಚಿಂತನೆಯೂ ಇವರ ವಚನಗಳ ಒಳಗುಟ್ಟು!! ಗುಣವಂತೆ ದೊರೆಯುವುದು ದೇವರ ಅನುಗ್ರಹವಿರಬೇಕೆಂದೂ ಹೇಳಿದ ಪರಿ ಹೀಗಿದೆ –

**ಹಣವು ದೊರೆತರೆ ಲೇಸು –ಋಣವು ಹರಿದರೆ ಲೇಸು**
**ಗಣಿಕೆಯನು ತೊರೆಯೆ ನೆರೆ ಲೇಸು–ಸತಿಯರಲಿ**
**ಗುಣವತಿಯಯೇ ಲೇಸು ಸರ್ವಜ್ಞ**

**ಅಂಗನೆಯು ಒಲಿಯುವುದು–ಬಂಗಾರ ದೊರೆಯುವುದು**
**ಸಂಗ್ರಾಮದೊಳಗೆ ಗೆಲುವುದು – ಇವು ಮೂರು**
**ಸಂಗಯ್ಯನೊಲುಮೆ ಬೇಕು ಸರ್ವಜ್ಞ!**

ಬಾಳ ಸಂಗಾತಿಯಾದವಳು ಸದ್ಗುಣಿಯಾದವಳು ಲಭಿಸಿದರೆ ಸುಂದರ ಬದುಕು ಸಾಗಿಸಲು ಸಾಧ್ಯವಾಗುತ್ತದೆ ಇಲ್ಲವಾದರೆ ಬಾಳು ಗೋಳಾಗುತ್ತದೆ. ಅಂತಹ ಗುಣವಂತಿ ಅಂಗನೆ ದೊರೆತರೆ ಬಂಗಾರ ದೊರೆತಂತೆ, ಬಾಳೆಂಬ ರಣರಂಗದಲ್ಲಿ ಜಯವು ಪ್ರಾಪ್ತವಾಗುತ್ತದೆ. ಇವೆಲ್ಲದಕ್ಕು ದೈವನ ಕೃಪೆಯೇ ಬೇಕು ಎಂದು ಬಣ್ಣಿಸಿದ್ದಾನೆ ಕವಿ. ಆದುದರಿಂದ ಗಂಡಿಗೆ ಹೆಣ್ಣು ಜೋಡಿಯಾಗಿ ಬರಬೇಕು.

**ಸುಣ್ಣವಿಲ್ಲದ ವೀಳ್ಯೆ–ಬಣ್ಣವಿಲ್ಲದ ಮದುವೆ**
**ಹೆಣ್ಣಿಲ್ಲದವನ ಸಂಸಾರ–ಮಳಲೊಳಗೆ**
**ಎಣ್ಣೆ ಹೊಯಿದಂತೆ ಸರ್ವಜ್ಞ!**

ಎಂಬೀ ವಚನ ತಾತ್ಪರ್ಯವೇ ಗಂಡಿಗೆ ಹೆಣ್ಣು ಅತ್ಯಗತ್ಯ. ಇದಕ್ಕೆ ಪ್ರತಿ ಪಡಿನೆಳಲೆಂಬಂತೆ ಹೆಣ್ಣಿಗೆ ಗಂಡೂ ಅಗತ್ಯವಾಗಿ ಬೇಕೆಂಬುದಕ್ಕೆ ಕವಿಯು ಪುರುಷರಿಲ್ಲದ ಮನೆಯು ಬರಡು ಎಂಬ ಶೀರ್ಷಿಕೆಯಡಿಯಲ್ಲಿ ಹೇಳಿದ್ದು ಹೀಗೆ.

**ಗಂಡನಿಲ್ಲದ ನಾರಿ–ಮಿಂಡನಿಲ್ಲದ ಸೂಳೆ**
**ಬಂಡವಿಲ್ಲದನ ಬೇಹಾರ–ಮುದಿನಾಯ**
**ಕುಂಡೆಯಂತಿಕ್ಕು ಸರ್ವಜ್ಞ**

**ಅರಸು ಇಲ್ಲದ ಊರು–ಹೊರಸು ಇಲ್ಲದ ನಿದ್ರೆ**
**ಪುರುಷನಿಲ್ಲದ ಬಾಳುವೆಯು–ನೀರೊಳ**
**ಕ್ಷರವ ಬರೆದಂತೆ ಸರ್ವಜ್ಞ!**

ಗಂಡು–ಹೆಣ್ಣಿಗೆ ಆಸರೆ, ಹೆಣ್ಣು ಗಂಡಿಗೆ ಆಸರೆ, ಬಂಡಿಯ ಜೋಡು ಗಾಲಿಗಳಿದ್ದಂತೆ. ಬಾಳೆಂಬ ಬಂಡಿಗೆ ಒಂದು ಗಾಲಿ ಒಗ್ಗಾಲಿಯಾದರೆ ಬಾಳೇ ಗೋಳಾಗುತ್ತದೆ. ಜೀವನ ಅಯೋಮಯವಾಗಿ ಬರಡಾಗುತ್ತದೆ. ಆದುದರಿಂದ ಗಂಡ–ಹೆಂಡತಿಯೆಂಬುವವರು ಗಂಧ ತೀಡಿದ್ದಾಂಗಿರಬೇಕು. ಗಂಡ–ಹೆಂಡಿರ ಜಗಳವಿದ್ದರೂ ಉಂಡು ಮಲಗುವತನಕ ಇರಬೇಕೆಂತಲೂ ಗರತಿಯರು ತಮ್ಮ ಹಾಡುಗಳಲ್ಲಿ ಹೇಳಿರುವರು. ದಾಸಿಮಾರ್ಯ ಪ್ರಥಮ ವಚನಕಾರನು–

**ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ**
**ಸತಿ–ಪತಿಗಳೊಂದಾಗದ ಭಕ್ತಿ ಅಮೃತದೊಳು**
**ವಿಷವ ಬೆರಸಿದಂತೆ ಕಾಣಾ ರಾಮನಾಥ–**

ಎಂದು ತ್ರಿಪದಿಯ ರೂಪದಲ್ಲಿಯೇ ಹೇಳಿರುವನು. ಆದುದರಿಂದ ಸರ್ವಜ್ಞನೂ ತನ್ನ ವಚನಗಳಲ್ಲಿ ಸತಿ–ಪತಿಯರು ಹೇಗಿರಬೇಕೆಂಬುದಕ್ಕೆ ಹೇಳಿದ್ದು ಹೀಗೆ–

**ಮನ ಬಂದ ಹೆಣ್ಣನ್ನು –ವಿನಯದಲಿ ಕರೆದಿತ್ತು**
**ಮನಮುಟ್ಟಿ ಬಾಳ್ವೆ ಮಾಡಿದರೆ – ಅಮೃತದ**
**ಕೆನೆಯ ಸವಿದಂತೆ ಸರ್ವಜ್ಞ**

**ತೋಟದ ಕಬ್ಬಿಂದ – ಹೋಟೆಯ ಜೇನಿಂದ**
**ನೀಟಾಗಿ ಕರೆವ ಹಯನಿಂದ–ಬಲ್ಲವಳ**
**ಕೂಟವೇ ಲೇಸು ಸರ್ವಜ್ಞ**

ಸಂಸಾರದ ರಂಗಿನಾಟದಲ್ಲಿ ಅತೀವ ಸರಸ–ಸಲ್ಲಾಪ–ಚಲ್ಲಾಟ ಸಲ್ಲದು! ಒಬ್ಬರನ್ನೊಬ್ಬರು ಪ್ರೀತಿ–ಮಮತೆಯಿಂದ ಬಾಳುವೆ ಮಾಡಿದರೆ ಸ್ವರ್ಗಕ್ಕೆ ಸರಿಸಮ ಆಗಬಲ್ಲದು. ಸರಸವೇ ವಿರಸವಾದರೆ ನರಕವಾಗುವುದರಲ್ಲಿ ಸಂದೇಹವಿಲ್ಲ. ಅದು ಕಾರಣ ದ.ರಾ.ಬೇಂದ್ರೆಯವರು –"ರಸವೇ ಜೀವನ–ವಿರಸವೇ ಮರಣ ಸಮರಸವೇ ಜೀವನ' ಎಂದು ಹೇಳಿದ್ದು ಇದೇ ಅರ್ಥದಿಂದ ಎಂಬುದು ತಿಳಿದು ಬರುತ್ತದೆ. ವಿನಯದಿಂದ, ಪ್ರೀತಿಯಿಂದ ಮನ ಮುಟ್ಟಿ ಬಾಳುವೆ ಮಾಡಬೇಕೆಂಬುದಾಗಿ ಸರ್ವಜ್ಞನ ಮಾತು ಸೂಕ್ತವಾಗಿದೆ. ಸತಿ–ಪತಿಗಳೊಂದಾದ ಬಾಳು ಅಮೃತದ



ಕೆನೆಯ ಸವಿದಂತೆ ಎಂದು ದಾಸಿಮಾರ್ಯರ ಹೋಲಿಕೆಯಂತೆ ಮೇಲಿನ ವಚನದಲ್ಲಿ ತಿಳಿಯಪಡಿಸಿದ್ದಾನೆ. ಮುಂದುವರೆದು ಸುಖ ಸಂಸಾರದ ಸೂತ್ರವನ್ನು ಹೀಗೆ ಅರುಹಿದ್ದಾನೆ.

**ಬೆಚ್ಚನ ಮನೆಯಾಗಿ–ವೆಚ್ಚಕ್ಕೆ ಹೊನ್ನಾಗಿ**
**ಇಚ್ಛೆಯನು ಅರಿವ ಸತಿಯಾಗಿ–ಸ್ವರ್ಗಕ್ಕೆ**
**ಕಿಚ್ಚು ಹಚ್ಚೆಂದ ಸರ್ವಜ್ಞ**

**ಎತ್ತುಗಳು ಎರಡಾಗಿ–ಬತ್ತದಿಹ ಹಯನಾಗಿ**
**ಪುತ್ರರೈದಾಗಿ ಸತಿಯೊಬ್ಬಳಾದರೆ**
**ನಿತ್ಯದಿ ಸುಖವು ಸರ್ವಜ್ಞ!**

**ನಾರಿ ಪರರುಪಕಾರಿ–ನಾರಿಯೇ ಸ್ವರ್ಗಕ್ಕೆ ದಾರಿ**
**ನಾರಿ ಸಕಲರಿಗೆ ಹಿತಕಾರಿ ಮುನಿದರೆ**
**ನಾರಿಯೇ ಮಾರಿ ಸರ್ವಜ್ಞ**

ಹೀಗೆ ಸರ್ವಜ್ಞನು ಹೇಳಿದಂತೆ ಸತಿ–ಪತಿಗಳೊಂದಾಗಿ ಬಾಳಿದರೆ ಸಂಸಾರವು ಹೂವಿನ ಹಾರದಷ್ಟು ಹಗುರವಾಗುತ್ತ, ಸಸಾರವೂ ಆಗುತ್ತದೆ. ಹುಸಿವೇಷ ಧರಿಸಿದ ಸನ್ಯಾಸಿಯೊಬ್ಬ (ಶಿವ) ಜೇಡರ ದಾಸಿಮಯ್ಯನ ಮನೆಗೆ ಬಂದು ಅಂಬಲಿಯನು ಸವಿದು ಅವನ ಧರ್ಮಪತ್ನಿಯು ಮರುಮಾತಾಡದೇ ಸಕಲ ಸಿದ್ಧತೆಗಳನ್ನು ಮಾಡುವ ಕಾರ್ಯ ಚಟುವಟಿಕೆಗಳನ್ನು ಕಂಡನು. ಆಗ ದಾಸಿಮಾರ್ಯನು ಸನ್ಯಾಸ ಹೆಚ್ಚೋ (ಸಂಸಾರ) ದಾಂಪತ್ಯ ಜೀವನವು ಶ್ರೇಷ್ಠವೋ ಎಂದು ಪ್ರಶ್ನಿಸಿದನಂತೆ. ಅದಕ್ಕೆ ಶಿವನ ಪ್ರತ್ಯುತ್ತರವೇನೆಂದರೆ ನಿಮ್ಮಂಥ ದಾಂಪತ್ಯ ಜೀವನವಿದ್ದಂತೆ, ಪತಿಯ ಮನವನ್ನರಿತು ನಡೆಯುವ ಸತಿಯಿದ್ದರೆ ಸನ್ಯಾಸತ್ವಕ್ಕೆ ಕಿಚ್ಚು ಹಚ್ಚಿದನಂತೆ! ಸಂಸಾರ ಸಾರೋದಯವೆಂದರೆ, ಸತಿ–ಪತಿಗಳು ಹೊಂದಿಕೊಂಡು ಹೋಗುವುದೇ ಮೇಲೆಂದು ಕವಿಯ ಅಂತರಂಗದ ನಿಲುಮೆಯಾಗಿದೆ.

ಇಂತಪ್ಪ ಸತಿ–ಪತಿಗಳೊಂದಾದಾಗ ಇಬ್ಬರಲ್ಲೂ ಪಾತಿವ್ರತ್ಯದ ಭಾವನೆಯೇ ಹೆಪ್ಪುಗಟ್ಟುತ್ತದೆ. ಸಂಶಯವೆಂಬುದೇ ಸುಳಿಯದು. ಅದಕ್ಕೆ ಕವಿ ಮಾತುಯಿಂತಿದೆ.

**ಉತ್ತಮದ ಅಂಗನೆಗೆ–ಬುತ್ತಿ ಕಾವಲವದೇಕೆ?**
**ಚಿತ್ತದಲಿ ಚೆಲುವೆ ತಾನಾದ ಬಳಿಕಿನ್ನು**
**ಮತ್ತೆ ಮುಸುಕೇಕೆ? ಸರ್ವಜ್ಞ**

**ಸತ್ತಿಗೆ ಹಿಡಿದವಗೆ ಒತ್ತಿ ಗಾಳಿಯು ಹೊಲ್ಲ**
**ನೆತ್ತಿಯಲಿ ಹೊರೆಯ ಹೊರಹೊಲ್ಲ–ಪತಿವ್ರತೆಗೆ**
**ಸುತ್ತು ಮರೆ ಹೊಲ್ಲ ಸರ್ವಜ್ಞ**

**ಲೇಸಪ್ಪ ಸತಿಯೊಡನೆ ದೋಷಮನರಸುವನೆಗ್ಗ**
**ಕಾಸಿದ ಹಾಲು ನೊಣ ಮುಟ್ಟಲದನಾರು**
**ಸೋಸಿ ತೆಗೆದಹರು ಸರ್ವಜ್ಞ**

**ಮುಗಿಲು ಮಾಳಿಗೆ ಲೇಸು–ಜಗಲಿ ಸೂಳೆಗೆ ಲೇಸು**
**ಹಗೆಯದ ಭಕ್ತ–ಉಣಲೇಸು ಸತಿಯರಿಗೆ**
**ನಗೆ ಮೊಗವು ಲೇಸು ಸರ್ವಜ್ಞ**

ಹೀಗೆ ಇನ್ನೂ ಮುಂತಾದ ತ್ರಿಪದಿಗಳಲ್ಲಿ ಸತಿ–ಪತಿ ಧರ್ಮ ಪಾಲನೆಯ ಮಹತ್ವವನ್ನು ಸರ್ವಜ್ಞನು ತಿಳಿಯಪಡಿಸಿದ್ದಾನೆ. ಒಲವೇ ಬದುಕಿನ ಜೀವ–ಜೀವಾಳವೆಂದು ದಾಂಪತ್ಯ ಜೀವನ ಸಾಗಿಸಿದರೆ ಬದುಕು ಸುಂದರವಾಗುತ್ತದೆ ಎಂಬುದರ ವಿವರಣೆಯು ಈ ವಚನಗಳಲ್ಲಿ ಹರಳುಗಟ್ಟಿದೆ.

**ಲೇಸಿಗಾಗಿ ಬದುಕುವುದೇ ಲೇಸು :**

ಒಳಿತು ಮಾಡಿದರೆ ಪುಣ್ಯದ ರಾಶಿ–ಎಂಬೋಕ್ತಿಯಂತೆ ಲೇಸಿಗಾಗಿಯೇ ಬದುಕಬೇಕೆಂದು ಸರ್ವಜ್ಞನು ತನ್ನ ಅನೇಕ ವಚನಗಳಲ್ಲಿ ಹೇಳಿದ್ದು ಹೀಗೆ–ಲೇಸೆನಿಸಿಕೊಂಡು ಐದು ದಿನವಾದರೂ, ನಾಲ್ಕು ದಿನವಾದರೂ, ಮೂರು ದಿನವಾದರೂ, ಎರಡು ದಿನವಾದರೂ, ಒಂದು ದಿನವಾದರೂ ಕೊನೆಗೆ ಒಂದು ಕ್ಷಣವಾದರೂ ಬದುಕಬೇಕು ಎಂಬ ಸಂದೇಶವನ್ನು ಬಸವಣ್ಣನವರು ಹೇಳಿರುವಂತೆ; ಲೇಸಿಗಾಗಿ ಬದುಕುವುದೇ ಲೇಸು ಎಂಬುದಾಗಿ ವಿವಿಧ ರೂಪಕ– ಉಪಮೆ–ದೃಷ್ಟಾಂತಗಳ ಅಲಂಕಾರಿಕ ಭಾಷೆಯಲ್ಲಿ ಸರ್ವಜ್ಞ ಕವಿಯು ಹೇಳಿರುವುದನ್ನು ಗಮನಿಸುವಂತಿದೆ.

**ಹಂಗಿನ ಹಾಲಿನಿಂದಂಬಲಿಯ ತಿಳಿ ಲೇಸು**
**ಭಂಗ ಬಟ್ಟುಂಬ ಬಿಸಿಯಿಂದ – ತಿರಿವರ**
**ಸಂಗವೇ ಲೇಸು ಸರ್ವಜ್ಞ**

**ಜಾಜಿಯ ಹೂ ಲೇಸು – ತೇಜಿ ವಾಹನ ಲೇಸು**
**ರಾಜಮಂದಿರದೊಳಿರೆ ಲೇಸು–ತಪ್ಪುಗಳ**
**ಮಾಜುವವೆ ಲೇಸು ಸರ್ವಜ್ಞ**



**ಸುಟ್ಟ ಬೆಳಸಿಯು ಲೇಸು–ಅಟ್ಟ ಬೋನವು ಲೇಸು**
**ಕಟ್ಟಾಣಿ ಸತಿಯು ಇರೆ ಲೇಸು, ನಡುವಿಗೆ**
**ದಟ್ಟಿ ಲೇಸೆಂದ ಸರ್ವಜ್ಞ**

**ಹಸಿಯ ಅಲ್ಲವು ಲೇಸು–ಬಿಸಿಯ ಪಳಿದೆಯು ಲೇಸು**
**ಹುಸಿ ಲೇಸು ಕಳ್ಳ ಹೆಣ್ಣಿಂಗೆ–ಬೈಗಿನ**
**ಬಿಸಿಲು ಲೇಸೆಂದ ಸರ್ವಜ್ಞ**

**ಉದ್ದಿನ ಒಡೆ ಲೇಸು ಬುದ್ಧಿಯ ನುಡಿ ಲೇಸು**
**ಬಿದ್ದೊಡನೆ ಕೈಯ್ಗೆ ಬರಲೇಸು, ಶಿಶುವಿಗೆ**
**ಮುದ್ದಾಟ ಲೇಸು ಸರ್ವಜ್ಞ**
**ಅಕ್ಕಿಯೋಗರ ಲೇಸು–ಮೆಕ್ಕೆ ಹಿಂಡಿಯು ಲೇಸು**
**ಮಕ್ಕಳನು ಹೆರುವ ಸತಿ ಲೇಸು–ಜಗಕೆಲ್ಲ**
**ರೊಕ್ಕವೇ ಲೇಸು ಸರ್ವಜ್ಞ**

**ಮಜ್ಜಿಗೆ ಊಟಕೆ–ಲೇಸು–ಮಜ್ಜನಕೆ ಮಡಿಲೇಸು**
**ಕಜ್ಜಾಯ ತುಪ್ಪ ಉಣ ಲೇಸು, ಮನೆಗೊಬ್ಬ**
**ಅಜ್ಜಿ ಲೇಸೆಂದ ಸರ್ವಜ್ಞ**

**ಹಸಿದರಂಬಲಿ ಲೇಸು–ಬಿಸಿಲಿಗೆ ಕೊಡೆ ಲೇಸು**
**ಬಸುರಿನ ಸೊಸೆಯು ಇರೆ ಲೇಸು–ಸಭೆಗೊಬ್ಬ**
**ರಸಿಕ ಲೇಸೆಂದ ಸರ್ವಜ್ಞ**

**ಹರಳು ಉಂಗುರ ಲೇಸು–ಹುರುಳಿ ಕುದುರೆಗೆ ಲೇಸು**
**ಮರಳು ನೆಲ ತೆಂಗಿಗಿರಲೇಸು–ಸ್ತ್ರೀಯರಿಗೆ**
**ಕುರುಳು ಲೇಸೆಂದ ಸರ್ವಜ್ಞ**

**ಜಾಣೆಯ ನುಡಿ ಲೇಸು–ವೀಣೆಯ ಸ್ವರ ಲೇಸು**
**ಮಾಣದಲೆ ವದನ ಶುಚಿ ಲೇಸು–ಕೂರ್ಪವರ**
**ಕಾಣುವುದೆ ಲೇಸು ಸರ್ವಜ್ಞ**

**ಬಾಳೆಯ ವನ ಲೇಸು–ಮಾಳಿಗೆಯ ಮನೆ ಲೇಸು**
**ಬಾಳುವರೆ ಕೆಂಚ ಸತಿ ಲೇಸು, ಮೆಲ್ಲಲ್ಕೆ**
**ಹೋಳಿಗೆಯು ಲೇಸು ಸರ್ವಜ್ಞ!**

**ಹರಕು ಹೋಳಿಗೆ ಲೇಸು–ಮುರುಕು ಹಪ್ಪಳ ಲೇಸು**
**ಕುರುಕುರು ಕಡಲೆ ಬಲು ಲೇಸು, ಪಾಯಸದ**
**ಸುರುಕು ಲೇಸು ಸರ್ವಜ್ಞ**

**ಜ್ಞಾನಿಗೆ ಗುಣ ಲೇಸು, ಮಾನಿನಿಗೆ ಪತಿ ಲೇಸು**
**ಸ್ವಾನುಭಾವಿಗಳ ನುಡಿ ಲೇಸು–ಎಲ್ಲರು ನಿ**
**ದಾಗಿಯೆ ಲೇಸು ಸರ್ವಜ್ಞ**

**ಜಾಣ ಜಾಣಗೆ ಲೇಸು–ಕೋಣ ಕೋಣಗೆ ಲೇಸು**
**ನಾಣ್ಯವದು ಲೇಸು ಹರದಂಗೆ, ಊರಿಂಗೆ**
**ಗಾಣಿಗನು ಲೇಸು ಸರ್ವಜ್ಞ!**

**ಅಗಸೆ ಊರಿಗೆ ಲೇಸು–ಸೊಗಸು ಬಾಳಿಗೆ ಲೇಸು**
**ಬೊಗಸೆಯುಳ್ಳವರ ಕಳೆ ಲೇಸು, ಊರಿಂಗೆ**
**ಅಗಸ ಲೇಸೆಂದ ಸರ್ವಜ್ಞ**

**ಹಡಗು ಗಾಳಿಗೆ ಲೇಸು –ಗುಡುಗು ಮಳೆ ಬರೆ ಲೇಸು**
**ಒಡಹುಟ್ಟಿದವರು ಇರಲೇಸು, ಊರಿಂಗೆ**
**ಬಡಿಗ ಲೇಸೆಂದ ಸರ್ವಜ್ಞ**

ಲೇಸಿಗಾಗಿ ಬದುಕುವುದು ಲೇಸು, ಇಲ್ಲದಿರೆ ಒಣ ಹೇವಕ್ಕಾಗಿ, ಅಹಂಕ್ಕಾಗಿ ಹೇಗ್ಹೇಗೋ ಜೀವನ ಸಾಗಿಸುವುದಲ್ಲ. ನಾಲ್ಕು ಜನರಿಗೆ ಹೌದು ಹೌದು ಎನಿಸಿಕೊಂಡು ಬದುಕುವುದೇ ಶೋಭೆ ತರುತ್ತದೆ. ಬಾಳು ಲೇಸಾಗುತ್ತದೆ. ವಿವಿಧ ದೃಷ್ಟಾಂತಗಳೊಂದಿಗೆ ತೆರೆದ ಕಣ್ಣಿನಿಂದ ವೀಕ್ಷಿಸಿ, ಪರೀಕ್ಷಿಸಿ, ಮೇಲಿನ ವಚನಗಳಲ್ಲಿ ಖಡಾಖಂಡಿತ ವಾದಿಯಾಗಿ, ಕಡ್ಡೀ ಮುರಿದಂತೆ ತಿಳಿಯಪಡಿಸಿದ್ದು ಮನುಕುಲದ ಇಂದಿನ–ಮುಂದಿನ– ಎಂದೆಂದಿಗೂ ಬೇಕಾಗುವ ದಿವ್ಯ ಸತ್ಯವನ್ನು ಬಿಚ್ಚಿಟ್ಟಿದ್ದಾನೆ ಕವಿ ಸರ್ವಜ್ಞ; ಆದುದರಿಂದ ನಾವಿಂದು ಇವುಗಳನ್ನು ಅನುಸರಿಸಿ ಬದುಕುವುದೇ ಚಂದವಲ್ಲವೆ?

**ಸರ್ವಜ್ಞನ ಬೆಡಗಿನ ವಚನಗಳು :**

'ಬೆಡಗು' ಎಂದರೆ ಆಶ್ಚರ್ಯ ಅಥವಾ ಅಚ್ಚರಿ ಮೂಡಿಸುವಂಥದ್ದು! ಕೋಲ್‌ಮಿಂಚಿನಂತೆ ಥಳ್ಳನೆ ಬೆಳಕು ಬೀಳುವಂಥದ್ದು! ಆಲೋಚನೆಗೆ ಹಚ್ಚುವಂತಹದ್ದು ಎಂದು ಹೇಳಬಹುದು. ಸಾಹಿತ್ಯದ ಪರಿಭಾಷೆಯಲ್ಲಿದು ಒಗಟಿನರ್ಥ



ಹೊಂದಿರುವಂಥದ್ದು. ಬೆಡಗಿನಲ್ಲಿಯೇ, ಒಗಟಿನಲ್ಲಿಯೇ ಅದರ ಅರ್ಥ ಹುದುಗಿರುತ್ತದೆ. ವಚನಗಳಲ್ಲಿ ಇಲ್ಲವೆ ಯಾವುದೇ ಪದ್ಯದಲ್ಲಿ ಇಂತಹ ಬೆಡಗನ್ನು ಉಪಯೋಗಿಸುವುದರಿಂದ ಅದರ ಸೌಂದರ್ಯ ಹೆಚ್ಚುತ್ತದೆ. ಅಲಂಕಾರಗಳನ್ನು ಬಳಸಿದಂತೆ ಬಳಸುವ ಕ್ರಿಯೆಯಾಗಿದೆ. ಉತ್ತಂಗಿ ಚನ್ನಪ್ಪನವರು ಸಂಪಾದಿಸಿದ ಸರ್ವಜ್ಞನ ವಚನಗಳಲ್ಲಿ ಒಟ್ಟು ಇಂತಹ ಬೆಡಗಿನ ವಚನಗಳ ಸಂಖ್ಯೆ ಒಂದು ನೂರು ಇವೆ. ಈ ಪುಸ್ತಕದ ಕೊನೆಯಲ್ಲಿ ಪ್ರಕಟಿಸಿರುವರು. ಎರಡು ಸಾವಿರದಾ ಒಂದುನೂರು ಒಟ್ಟು ಸರ್ವಜ್ಞನ ವಚನಗಳು ಉತ್ತಂಗಿಯವರಿಗೆ ದೊರೆತಂತಾದವು. ಹಾಗಾದರೆ ಬೆಡಗಿನ ವಚನಗಳಿಗೆ ಪುಷ್ಟೀಕರಿಸುವ ನಿಟ್ಟಿನಲ್ಲಿ ಕೆಲವು ವಚನಗಳನ್ನು ಕೊಡಲಾಗಿದೆ. ಅವುಗಳಿಗೆ ಪ್ರಕೃತಿಯ ವಸ್ತುಗಳಾದ ಪ್ರಾಣಿ, ಮರ, ವಸ್ತುಗಳನ್ನು ಬಳಸಿಕೊಂಡು ಜನಪದರು ಹೇಳಿರುವ ತ್ರಿಪದಿಗಳಲ್ಲಿ ಹೇಳಿರುವುದು ಒಂದು ಸರ್ವಜ್ಞ ಕವಿಯ ವಿಶಿಷ್ಟತೆ ಎಂದು ಹೇಳಬಹುದು. ಕೆಲವು ವಚನಗಳು ಇಂತಿವೆ. ಈ ಸಂಪಾದನೆಯಲ್ಲಿ ಬೆಡಗಿನ ೭೫ (ಎಪ್ಪತ್ತೈದು ವಚನಗಳು ಪ್ರವೇಶ ಪಡೆದಿವೆ) ೨೦೨೫+೭೫= ೨೧೦೦ ಒಟ್ಟು ಈ ಕೃತಿಯಲ್ಲಿರುವ ವಚನಗಳು :

**ಕಲ್ಲರಳಿ ಹೂವಾಗಿ ಎಲ್ಲರಿಗೆ ಬೇಕಾಗಿ**
**ಮಲ್ಲಿಕಾರ್ಜುನ ಶಿಖರಕ್ಕೆ ಬೆಳಕಾಗಿ**
**ಬಲ್ಲವರು ಹೇಳಿ ಸರ್ವಜ್ಞ**

**ಕಾಲಿಲ್ಲದೆ ಹರಿಗು ತೋಳಿಲ್ಲದಲೆ ಹೊರಗು**
**ನಾಲಿಗಿಲ್ಲದಲೆ ಉಲಿವುದು ಕವಿಕುಲದ**
**ಮೇಲುಗಳು ಪೇಳಿ ಸರ್ವಜ್ಞ**

**ಹಾಡೆಂದರಾಡದದು ಆಡ ಮರನೇರುವುದು**
**ಕೂಡದೆ ಕೊಂಕಿ ನಡೆಯುವುದು ಕಡಿದರೆ**
**ಬಾಡದದು ಪೇಳಿ ಸರ್ವಜ್ಞ**

**ಕಚ್ಚಿದರೆ ಕಚ್ಚುವುದು ಕಿಚ್ಚಲ್ಲ ಚೇಳಲ್ಲ**
**ಆಶ್ಚರ್ಯವಲ್ಲ; ಅರಿದಲ್ಲ – ಈ ಮಾತು**
**ನಿಶ್ಚಯವೆಂದ ಸರ್ವಜ್ಞ**

**ಹತ್ತು ಸಾವಿರ ಕಣ್ಣು, ನೆತ್ತಿಯಲಿ ಬಾಲ**
**ಹುತ್ತಿನ ಹುಳುವ ಹಿಡಿಯುವುದು ಕವಿ ಜನರ**
**ಮೊತ್ತವಿದ ಪೇಳಿ ಸರ್ವಜ್ಞ**

**ಹಲ್ಲು ನಾಲಗೆಯಲ್ಲ–ಸೊಲ್ಲು ಸೋಜಿಗವಲ್ಲ**
**ಕೊಲ್ಲದೆ ಮೃಗವ ಹಿಡಿಯುವುದು–ಲೋಕದೊಳ**
**ಗೆಲ್ಲ ಠಾವಿನೊಳು ಸರ್ವಜ್ಞ**

**ಮಣಿಯ ಮಾಡಿದನೊಬ್ಬ–ಹೆಣೆದು ಕಟ್ಟಿದನೊಬ್ಬ**
**ಕುಣಿದಾಡಿ ಸತ್ತವನೊಬ್ಬ ಸಂತೆಯೊಳು**
**ಹೆಣವ ಮಾರಿದನು ಸರ್ವಜ್ಞ!**

**ಹತ್ತೇಳು ತಲೆ ಕೆಂಪು – ಮತ್ತಾರುತಲೆ ಕಪ್ಪು**
**ಹೆತ್ತವ್ವ ನೋಡಲನುರಿಸುವದು–ಕವಿಗಳಿದ**
**ರರ್ಥವನು ಪೇಳಿ ಸರ್ವಜ್ಞ**

**ಪಾತಾಳಕಿಳಿಯುವುದು–ಸೀತಳವ ತರುತಿಹುದು**
**ಭೂತಳದ ಮೇಲೆ ಇರುತಿಹುದು–ಅದು ತಾನು**
**ಏತರದು ಪೇಳಿ ಸರ್ವಜ್ಞ**

**ಕಡೆ ಬಿಳಿದು ನಡುಗಪ್ಪು–ಉಡುವ ವಸ್ತ್ರವದಲ್ಲ**
**ಬಿಡದೆ ನೀರುಂಟು ಮಡುವಲ್ಲ–ಕವಿಗಳೀ**
**ಬೆಡಗ ಪೇಳುವುದು ಸರ್ವಜ್ಞ!**

**ಬೆಳ್ಳಗೆ ಇರುತಿಹುದು–ಉಳ್ಳಾಡಿ ಬರುತಿಹುದು**
**ಸುಳ್ಳಲ್ಲ ಸತಿಯರಳಿಸುವುದು–ಕವಿಗಳಲಿ**
**ಉಳ್ಳವರು ಪೇಳಿ ಸರ್ವಜ್ಞ!**

**ಕಾಲಿಲ್ಲ ಕೊಂಬುಂಟು – ಬಾಲದ ಪಕ್ಷಿಯದು**
**ಮೇಲೆ ಹಾರುವುದು ಹದ್ದಲ್ಲ–ಕವಿಗಳಲಿ**
**ಬಾಲರಿದ ಪೇಳಿ ಸರ್ವಜ್ಞ**

ಇವು ಚಿಂತನೆಗೆ ಹಚ್ಚುತ್ತವೆ, ವಿಚಾರಿಸಿಯೇ ಉತ್ತರಿಸಬೇಕಾಗುತ್ತದೆ. ಉತ್ತರ ಹೊಳೆದಾಗ ನಮ್ಮಷ್ಟಕ್ಕೆ ನಾವೇ ಸಂತಸಪಡುತ್ತೇವೆ – ಇವು ವಿನೋದ ಪ್ರಿಯವೂ, ಚಿಂತನೆಗೀಡು ಮಾಡುವಂಥವೂ, ಒಂದು ತರಹ ಚೆಸ್ ಆಟ ಅಥವಾ ಹಾವು ಏಣಿಯ ಆಟದಂತೆ ಮನಸ್ಸಿಗೆ ಮುದ ನೆಮ್ಮದಿ ನೀಡುವಂತಿವೆ. ಒಗಟಿನರ್ಥದಲ್ಲಿದ್ದುದು ಈ ವಚನಗಳ ವಿಶೇಷತೆ!! ಇನ್ನುಳಿದ ವಚನಗಳಲ್ಲಿ ಸಾವಿರಾರು ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ರೀತಿ–ನೀತಿಯ, ಪ್ರಾಪಂಚಿಕ



ಮತ್ತು ಪಾರಮಾರ್ಥಿಕ ವಿಷಯಗಳ ಚರ್ಚಿಸಿದ ಬಗೆ ಸರ್ವಜ್ಞನ ವಚನಗಳಲ್ಲಿ ಕಾಣಬಹುದು.

**ಸರ್ವಜ್ಞನ ವಚನಗಳಲ್ಲಿ ಕಾಲಜ್ಞಾನ :**

ಬೆಡಗು ಇಲ್ಲವೆ ಗೂಢಾರ್ಥಗಳನ್ನೊಳಗೊಂಡ ಅಥವಾ ಒಗಟಿನಾರ್ಥವನ್ನು ಒಳಗೊಂಡ ವಚನಗಳ ಮಾದರಿಯಲ್ಲಿಯೇ ಕಾಲಜ್ಞಾನದ ವಚನಗಳನ್ನು ಸರ್ವಜ್ಞನು ರಚನೆ ಮಾಡಿದ್ದು ಕಂಡು ಬರುತ್ತದೆ. ಸರಳ, ನೇರ, ದಿಟ್ಟ ನಿರಂತರ ಸರಳ ವಚನಗಳಂತೂ ಅವನ ಬತ್ತಳಿಕೆಯಲ್ಲಿ ಯಾವತ್ತೂ ಸಿದ್ಧವಿದ್ದವು. ಆದರೆ, ಬೆಡಗಿನ ಮತ್ತು ಕಾಲಜ್ಞಾನದ ವಚನಗಳು ರಚನೆ ಗೊಂಡಿರುವುದನ್ನು ರೆ. ಉತ್ತಂಗಿ ಚೆನ್ನಪ್ಪನವರು ಸಂಶೋಧಿಸಿ ಪ್ರಕಟಿಸಿದ್ದುದು ನನ್ನ ಗಮನಕ್ಕೆ ಬಂದಿತು. ಕಾಲಜ್ಞಾನ ಮತ್ತು ಬೆಡಗಿನ ವಚನಗಳನ್ನು ಮೊದಲು ಹುಟ್ಟು ಹಾಕಿದವರು ಬಸವಾದಿ ಪ್ರಮಥರು ಎಂಬುದು ನಿತ್ಯ ಸತ್ಯದ ಸಂಗತಿ. ಮುಂದಾಗುವ ಧರ್ಮ, ಸ್ವಭಾವ, ದುರಂತದ ದಾರುಣ ಚಿತ್ರದ ವ್ಯಥೆಯ ಕಥೆಯು ಇಲ್ಲಿ ಮೂಡಿ ಬಂದಿರುವುದನ್ನು ಓದುಗರು ಮನಗಾಣುವುದರಲ್ಲಿ ಸಂದೇಹವೇ ಇಲ್ಲ. ಶರಣ–ಶರಣೆಯರು ವಿಶ್ವ ಸಂಸ್ಕೃತಿಯ ಸಾಕಾರಮೂರ್ತಿಗಳು. ಮಾನವ ಜನಾಂಗದ ಸರ್ವತೋಮುಖ, ಸರ್ವಾಂಗ ಸುಂದರ ಏಳಿಗೆಗಾಗಿ ಚಿರಂತನ ಮಾನವೀಯ ಮೌಲ್ಯಗಳನ್ನು ವಚನಗಳ ಮುಖಾಂತರ, ಬೆಡಗಿನ, ಕಾಲಜ್ಞಾನ ವಚನಗಳ ಮುಖಾಂತರ ನಮ್ಮ ಮುಂದೆ ಕನ್ನಡಿ ಹಿಡಿದು ತೋರಿದ್ದಾರೆ. ಅದೇ ಮಾದರಿಯಲ್ಲಿಯೇ ಸರ್ವಜ್ಞಾನಿಯಾದ ಅನುಭಾವಿಗಳಾದ ಬಸವಣ್ಣ, ಅಲ್ಲಮ, ಚೆನ್ನಬಸವಣ್ಣ, ಸಿದ್ಧರಾಮ ಶಿವಯೋಗಿ ಮುಂತಾದವರು ಕಾಲಜ್ಞಾನ ವಚನಗಳನ್ನು ರಚಿಸಿದ್ದು ಕಂಡು ಬರುತ್ತದೆ. ಅವುಗಳನ್ನು ಕೈವಲ್ಯ ಪದಗಳು ಅನುಭಾವ ಪದಗಳು, ತತ್ತ್ವಗಳು, ಭಜನೆ ಪದಗಳು, ಸ್ವರವಚನಗಳೆಂದೂ ಕರೆಯಬಹುದು. ಆದರೆ ಇವು ದೀರ್ಘವಾಗಿರುತ್ತವೆ. ಉದಾ ಅಲ್ಲಮರ ಅಲ್ಲೇ ಬಿದ್ದಿದೆ ಮುಕುತಿ ಆದ ಬಲ್ಲಡರಸಿ ತಾರೆ ನಲ್ಲರ ಜಾಣೆ, ಬಸವಣ್ಣನವರ 'ಅರಿಯೆನು ನಾ ನಿಮಗುಪಚಾರಂಗಳ' ಅಕ್ಕಮಹಾದೇವಿಯ 'ಕಂಗಳ ನೋಟವು ಕಾಯದ ಕರದಲಿ–ಲಿಂಗದ ಕೂಟವು; ಶಿವ ಶಿವ ಚೆಲುವನು?, ಗುರುಬಸವಾರ್ಯನ 'ಸುಳಿದಾಡುವ ಸುಳಿವಿನ ಜ್ಯೋತಿಯ ಒಳ ಹೊರಗಾಡುವದೇನಮ್ಮ' – ಈ ಮುಂತಾದವುಗಳನ್ನು ಗಮನಿಸಬಹುದು. ಇವುಗಳಿಂದ ತಿಳಿದು ಬರುವುದೇನೆಂದರೆ ಶರಣರ ಸತ್ಯ ಶುದ್ಧ ನಿರ್ಮಲ ಚಾರಿತ್ರ್ಯ ಎದ್ದು ಕಾಣುತ್ತದೆ. ಶರಣರಂತೆಯೇ ಬಾಳಿ ಬದುಕಿದ ಸರ್ವವನು ಬಲ್ಲ ಸರ್ವಜ್ಞನೂ ಕಾಲಜ್ಞಾನ ವಚನಗಳನ್ನು ರಚಿಸುವಲ್ಲಿ

ಯಶಸ್ವಿಯಾಗಿದ್ದಾನೆಂದುದಾಗಿ ಉತ್ತಂಗಿಯವರ ಮಾತನ್ನು ಸಮರ್ಥಿಸುತ್ತೇನೆ. ಕವಿ ಸರ್ವಜ್ಞನ ಕಾಲಜ್ಞಾನದ ಕೆಲವು ವಚನಗಳನ್ನಿಲ್ಲಿ ಉದಾಹರಿಸಲಾಗಿದೆ.

**ಸೂಳೆಯಲಿ ಮಗಹುಟ್ಟಿ – ಆಳುವನು ಮುನಿಪುರವ**
**ಕಾಳಗವಿಲ್ಲದವ ಮಡಿಯೆ ಪುರವೆಲ್ಲ**
**ಕೋಳು ಹೋದೀತು ಸರ್ವಜ್ಞ**

**ಉತ್ತರದ ದಿಕ್ಕಿನಲಿ ಹತ್ತಿತು ಹೆಚ್ಚೀಗೆ**
**ಸುತ್ತ ಒರಕೊಂಡು ಬರುವಾಗ ಜಗವೆಲ್ಲ**
**ಕೆತ್ತಲಾದೀತು ಜಗವೆಲ್ಲ**

**ಚಂದ್ರ–ಸೂರ್ಯರ ಗ್ರಹಣ–ಒಂದೇ ಮಾಸದಿ ಬಂದು**
**ತಂದೆಯನು ಕಂದನಿರಿದಂದು, ಲೋಕಕ್ಕೆ**
**ಬಂದೀತು ಪ್ರಳಯ ಸರ್ವಜ್ಞ**

**ಪಾತಾಳ ಗಂಗೆಯನು ಓತು ಚಿಪ್ಪಿಲಿ ಮೊಗೆದು**
**ಭೂತಳವೆಲ್ಲ ಉರಿದೆದ್ದು, ಮುಂದೊಬ್ಬ**
**ದಾತ ಹುಟ್ಟುವನು ಸರ್ವಜ್ಞ**

**ಪಟ್ಟವಿಲ್ಲದ ಶಿಶುವು–ಸೃಷ್ಟಿಯನು ಆಳೀತು**
**ಪಟ್ಟದರಸುಗಳು ಅಳಿದಾಗ–ಜಗದವನ**
**ಪಟ್ಟ ಕಾಣಯ್ಯ ಸರ್ವಜ್ಞ**

**ನಂದಿ ವಾಹನನಲ್ಲಿ ಸಂದೇಹ ಪಡಬೇಡ**
**ನಂದನದಲೊಂದು ಕರಿ ಹುಟ್ಟೆ, ಶರಣರು**
**ಬಂದುದಕೆ ಕುರುಹು ಸರ್ವಜ್ಞ**

**ಸೂಳೆಯ ಮಗನೊಬ್ಬ ಆಳುವನು ರಾಜ್ಯವನು**
**ಮೇಳದೊಳಗಿಪ್ಪ ನಾರಿ ಮಾತನು ಕೇಳಿ**
**ಕೋಳು ಹೋದಾನು ಸರ್ವಜ್ಞ**

**ಎತ್ತು ಹೇರುವನಿಂದ – ತೊತ್ತಿನ ಮಗನಿಂದ**
**ಮುತ್ತು ಮಾರುವ ದೆಸೆಯಿಂದ, ಜಗಕೆಲ್ಲ**
**ಕುತ್ತು ಬಂದೀತು, ಸರ್ವಜ್ಞ**



**ನಂದಿ ಹೆಸರಿನವನೊಂದು ರಾಜ್ಯವನಾಳಿ**
**ಬಂಧನ ಪಟ್ಟು ಭಯಪಟ್ಟು, ನೀರಿನೊಳು**
**ಸಂದು ಹೋದಾನು ಸರ್ವಜ್ಞ**

**ಸಿಡಿಲು ಬಳಗದ ಕೋಟೆ–ಫಡಫಡಿಸಿ ರಚ್ಚೆದ್ದು**
**ಕಡೆಯ ಗಡಿ ಮಡಿದ ಮರುದಿನವೆ, ಕರ್ನಾಟ**
**ಹುಡಿ ಹುಡಿಯೆಂದ ಸರ್ವಜ್ಞ**

**ಕುಲವಿಲ್ಲದವನೊಬ್ಬ ಮಲೆನಾಡಿನೊಳು ಹುಟ್ಟಿ**
**ಸಲೆದಂಡು ತಂದು ಮುರಿದಿಕ್ಕಿದಾ ಮೇಲೆ**
**ನೆಲೆಗೆ ನಿಂದಾನು ಸರ್ವಜ್ಞ**

ಇವು ಸರ್ವೇ ಸಾಮಾನ್ಯವಾಗಿ ನಾಡಿನ ಆಳ್ವಿಕೆ, ಆಳರಸರ ಅಧಃಪತನ, ಅನೀತಿಯು ಅಳಿದು, ನೀತಿ ಸ್ಥಾಪಿತವಾಗುವ ನೆಲೆಯಲ್ಲಿ ಹೇಳಿದವುಗಳಾಗಿವೆ. ಅವುಗಳ ವಿಶಾಲಾರ್ಥ, ನಿಗೂಢದಲ್ಲಿದ್ದು ವೈಚಾರಿಕತೆಯೆಡೆಗೆ ನಮ್ಮನ್ನು ಕರೆದುಕೊಂಡು ಹೋಗುತ್ತವೆ.

**ವಿವಿಧ ಪಟ್ಟಣಗಳ ನಾಶನದ ಕಾಲಜ್ಞಾನಗಳು :**

**ಆಂಗ್ಲ ದೇಶದಿಂದ ಪಾರಂಗೇರು ಬಂದು ಶ್ರೀ**
**ರಂಗ ಪಟ್ಟಣವ ತೆಗೆದೆಲ್ಲ, ಜಗವನ್ನು**
**ಭಂಗಪಡಿಸುವರು ಸರ್ವಜ್ಞ**

**ಚೆನ್ನಪಟ್ಟಣವ ನೀ ತಣ್ಣಗೆಂದೆನಬೇಡ**
**ಚಿಣ್ಣೆಯಿಂ ಕೋಲು ಚಿಮ್ಮಿದಂತಾ ಪಟ್ಟಣ**
**ನುಣ್ಣಗಾಗಿಹುದು ಸರ್ವಜ್ಞ**

**ಶ್ರೀರಂಗ ಪಟ್ಟಣದೊಳಗೆ – ರಂಗಭಕ್ತನು ಹುಟ್ಟಿ**
**ರಂಗನ ಪೂಜೆ ಕರಿಗೊಳ್ಳಲಾ, ಪಟ್ಟಣ**
**ಭಂಗವಾದೀತು ಸರ್ವಜ್ಞ**

**ತಾರಣ ಸಂವತ್ಸರದಿ–ಕಾರಣಗಳಾದಾವು**
**ವಾರಣಾಸಿಯಲಿ ಗುಡಿಕಟ್ಟಿ, ಬೇಲೂರು**
**ತೋರಣದಿ ತುಂಬಿ ಸರ್ವಜ್ಞ**

**ಚೋಳದ ದೇಶದಿಂ–ಬೋಳುರುರೆ ಬಂದಾರು**
**ಮೇಳವಿಸಿ ಅರಸನೊಡೂಡಿ, ಬಸ್ತಿಯನು**
**ಹಾಳು ಮಾಡುವರು ಸರ್ವಜ್ಞ**

**ಕಾವೇರಿ–ಮಧುರೆಯಲಿ–ದೇವರ ಸಭೆಗೂಡಿ**
**ಭಾವದೊಳು ಶುದ್ಧ ಶಿವ ಕಂದ, ಬಸವಂತ**
**ದೇವ ತಾ ಬರುವ ಸರ್ವಜ್ಞ**

**ದಕ್ಷಿಣದ ಅರಸಂಗೆ ಸೊಕ್ಕಿನ ತುರುಕರು**
**ಸಿಕ್ಕು ಸಿಕ್ಕಳಿದು ಜಗವೆಲ್ಲ ವಶವಹುದು**
**ಮುಕ್ಕಣ್ಣಗೆಂದ ಸರ್ವಜ್ಞ**

ಬ್ರಿಟಿಷರು ನಮ್ಮ ದೇಶವನ್ನಾಳಿದರು. ಆಗ ಅವರ ರೀತಿ–ರಿವಾಜುಗಳು ಹಾಗೂ ಆಳ್ವಿಕೆಯ ಪದ್ಧತಿಯು ಹೇಗಿತ್ತೆಂಬುದರ ಕುರಿತು ಮೂಡಿ ಬಂದ ಕಾಲಜ್ಞಾನ ವಚನಗಳು. 'ಆಂಗ್ಲೇಯರು' ಎಂಬ ಶೀರ್ಷಿಕೆಯಡಿಯಲ್ಲಿ ಸರ್ವಜ್ಞನು ರಚಿಸಿರುವನು. ಅವು ಇಂತಿವೆ. ಅವು ಹಾಸ್ಯ ಭರಿತವೂ ಆಗಿವೆ. ವ್ಯಂಗ್ಯವೂ ಆಗಿದ್ದು ವೈಚಾರಿಕ ನೆಲೆಗೊಯ್ಯುತ್ತವೆ.

**ಹೆಂಗಸರ ಹೋಲುವ–ಮಂಗನ ತಲೆಯವರು**
**ಸಂಗಮಕೆ ಬಂದು ನಿಂದಿರುತ, ರಾಜ್ಯವನು**
**ನುಂಗಿ ಬಿಟ್ಟಾರು ಸರ್ವಜ್ಞ**

**ಮಂಗಮುಖಿಯರು–ಶ್ರೀ–ರಂಗಕ್ಕ ಆಯ್ತೆಂದು**
**ಭಂಗವ ಪಡಿಸಿ ಸದೆ ಬಡಿದು, ದೇಶವ**
**ನುಂಗಿ ಬಿಟ್ಟಾರು ಸರ್ವಜ್ಞ**

**ರಂಗನ ಪಟ್ಟಣಕೆ–ಹೆಂಗಸರ ಹೋಲುವ**
**ಮಂಗನ ಮುಖದ ಪುಣ್ಯಾತ್ಮರೈತಂದು**
**ಸಿಂಗನಳಿದಾರು ಸರ್ವಜ್ಞ**

**ಕಾಲ ಕುಪ್ಪಸದವರು–ಮೇಲೆ ಟೊಪ್ಪಿಗೆಯವರು**
**ಬಾಲೆಯರ ಮುಖದ ಕಪಿಗಳು ಶ್ರೀರಂಗ**
**ವಾಳ ಹೋದಾರು ಸರ್ವಜ್ಞ**



ಇವುಗಳನ್ನು ಓದುವಾಗ ಕೆಂಪು ಮುಖದ ಬ್ರಿಟಿಷರ ಆಳ್ವಿಕೆ ನಮ್ಮಲ್ಲಿ ಹೇಗಿತ್ತೆಂಬುದು ತಿಳಿದು ಬರುತ್ತದೆ. ತಕ್ಕಡಿಯ ನೆಪ ಮಾಡಿ ಬಂದ ಅವರು ನಮ್ಮ ಪಕ್ಕಡಿಯನೇ ಮುರಿದವರು ಎಂದು ಹೇಳಲಾದಂತಹ ವಚನಗಳಾಗಿವೆ.

**ರೈಲು–ತಂತಿ–ಉಗಿಬಂಡಿ:**

**ಪಂಚಲೋಹದ ಕಂಬಿ–ಮುಂಚೆ ಭೂಮಿಗೆ ಹಾಸಿ**
**ಕಂಚಿನ ರಥವ ನಡಿಸುವರು – ಅದರೋಟ**
**ಮಿಂಚು ಹೊಡೆದಂತೆ ಸರ್ವಜ್ಞ**

**ಅಲ್ಲಿಗಲ್ಲಿಗೆ ಕಲ್ಲು–ಕಲ್ಲಿನ ಕಡೆ ತಂತಿ**
**ಬಲ್ಲಿದರ ರಥವು ಹೊಗೆಯುತ್ತ, ಬರಲದರ**
**ಸೊಲ್ಲು ಅರಿದೆಂದ ಸರ್ವಜ್ಞ**

**ಎತ್ತು ಇಲ್ಲದೆ ಬಂಡಿ ಒತ್ತೊತ್ತಿ ನಡೆಸುವರು**
**ಸುತ್ತಲೂ ರಾಜ್ಯವಾಳುವರು, ಕಡೆಯಲ್ಲಿ**
**ಮೃತ್ಯು ಹೊಂದುವರು ಸರ್ವಜ್ಞ**

ಹೀಗೆ ಸರ್ವಜ್ಞನು ರಚಿಸಿದ ಕಾಲ ಜ್ಞಾನದ ವಚನಗಳು ನಮ್ಮೆಲ್ಲರ ಗಮನ ಸೆಳೆಯುವವವು. ಅಂದು ಬ್ರಿಟಿಷರ ಆಳ್ವಿಕೆ, ದರ್ಪ, ದೌಲತ್ತುಗಳಿಂದ ಕೂಡಿತ್ತು. ನಮ್ಮ ದೇಶವನ್ನು ಸರ್ವನಾಶ ಮಾಡುವ ವಿಚಾರದಲ್ಲಿರುವುದನ್ನು ಗಮನಿಸಿದ ನಮ್ಮ ದೇಶದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರೊಂದಿಗೆ ಮತ್ತಿತರ ನಾಯಕರಿಂದೊಡಗೂಡಿ ಹೋರಾಟ ಮಾಡಿ, ಅವರನ್ನು ಹೊರ ಹಾಕಲಾಯಿತು. ಸ್ವಾತಂತ್ರ್ಯ ಸಿಕ್ಕು ನೆಮ್ಮದಿಯಿಂದ ನಮ್ಮ ನೆಲದಲ್ಲಿ ನಾವು ಬದುಕುವಂತಾಯಿತು. ನಮ್ಮ ದೇಶದ ಚರಿತ್ರೆಯನ್ನು ಈ ವಚನಗಳಲ್ಲಿ ಕಣ್ಮುಂದೆ ಕಟ್ಟುವಂತೆ ಕಟೆದು ನಿಲ್ಲಿಸಿದ್ದಾನೆ ಕವಿ ಸರ್ವಜ್ಞ.

## ೬

# ಸಮಾರೋಪ

(ವೇಮನ–ಸರ್ವಜ್ಞ : ತೌಲನಿಕ ವಿವೇಚನೆ)

ಇಲ್ಲಿಯ ವರೆಗೆ ಚರ್ಚಿಸಿದ ವಿಷಯ ವಿನ್ಯಾಸವನ್ನು ಗಮನಿಸಿದರೆ ಅವರೀರ್ವರ ಜೀವನ ಮತ್ತು ಸಾಧನೆಯನ್ನು ಗಮನಿಸಿದರೆ ಒಂದೇ ತೆರನಾದ ಬದುಕು ಅವರದ್ದಾಗಿದ್ದುದು ಕಂಡು ಬರುತ್ತದೆ. ಇವರಿಬ್ಬರಿಗೂ ಜಾತಿಗಳಿಲ್ಲ. ಅವರು ಹೆಸರಿಗೆ ಮಾತ್ರ ತಂದೆ–ತಾಯಿಗಳಿಂದ ಹುಟ್ಟಿ ಬಂದವರು. ಆದರೆ ವಿಶಾಲಾರ್ಥದಲ್ಲಿ ಅವರಿಬ್ಬರೂ ದೇವನ ಮಕ್ಕಳು, ಸಾಕ್ಷಾತ ಭಗವಂತನೇ ಲೋಕ ಕಲ್ಯಾಣ ಮಾಡಿ ಬನ್ನಿರೆಂದು ಶಿವನು ಕಳುಹಿಸಿರುವನೆಂಬುದಾಗಿ ತಿಳಿದು ಬರುತ್ತದೆ. ಇಂಥವರಿಗೆ ಹುಟ್ಟು–ಸಾವುಗಳಿಲ್ಲ. ಶಾಶ್ವತ ಸತ್ಯದ ನಿಧಿಗಳಿದ್ದಂತೆ : ಮಣ್ಣಿನಲ್ಲಿರುವ ನಿಧಿ ಅಥವಾ ನಿಕ್ಷೇಪವಿದ್ದಂತೆ! ಇವರು ಮುಟ್ಟಿದುದೆಲ್ಲವೂ ಚಿನ್ನವಾಗುತ್ತಿತ್ತು. ಅದನ್ನು ನಾವು ಪವಾಡ ಎಂದು ನಂಬಿ ಕರೆಯುತ್ತ ಬಂದಿದ್ದೇವೆ. ಅದು ತಪ್ಪು! ಮಹಾತ್ಮರು, ಮಹಾಪುರುಷರು, ಋಷಿ –ಮುನಿಗಳು, ಧ್ಯಾನ–ತಪಸ್ಸು, ದಿವ್ಯ ಸಾಧನೆಗಳಿಂದ ಸಿದ್ಧ ಪುರುಷರಾಗಿ ಹೊರ ಹೊಮ್ಮುವರು. ಅಂಥವರು ಹುಟ್ಟುತ್ತಲೇ ಪವಾಡವಾಗಿಯೇ ಜನಿಸುತ್ತಾರೆಂಬುದಕ್ಕೆ ಭಾರತೀಯ ಅಧ್ಯಾತ್ಮ ಪರಂಪರೆಯಲ್ಲಿ ವಾಲ್ಮೀಕಿ, ವ್ಯಾಸ, ತಿರುವಳ್ಳುವರ್, ಭೃಗು ಮಹರ್ಷಿ, ವಿಶ್ವಾಮಿತ್ರ, ವಶಿಷ್ಟ, ಮುಂತಾದ ದೇವಗಣ ಸಮೂಹದಲ್ಲಿ ಮಹಾಯೋಗಿ ವೇಮನ ಮತ್ತು ಸರ್ವವನು ಬಲ್ಲ ಸರ್ವಜ್ಞರು ಪ್ರಮುಖರೆನಿಸಿಕೊಳ್ಳುತ್ತಾರೆ. ಒಬ್ಬರು ತೆಲುಗು ದೇಶದವರು ಇನ್ನೊಬ್ಬರು ಕನ್ನಡ ನಾಡಿನವರು, ಹೆಚ್ಚು–ಕಡಿಮೆ ಇಬ್ಬರೂ ಸಮಕಾಲೀನರೇ ಆಗಿರುವರೆಂಬುದು ನನ್ನ ತರ್ಕ! ಅವರಿಬ್ಬರೂ ಬ್ರಹ್ಮಚಾರಿಗಳು – ಮತ್ತು ಬ್ರಹ್ಮ ಜ್ಞಾನವನ್ನು ಬಲ್ಲವರು, ಅವರಿಬ್ಬರೂ ಲೋಕದೊಳಗಿದ್ದೂ ಇಲ್ಲದಂತೆ ಬಾಳಿದವರು ಮತ್ತು ದೇಶ ಸಂಚಾರಗೈಯ್ಯುತ್ತ ಲೋಕೋದ್ಧಾರಗೈದವರು. ಹೀನ ಗುಣದವರನ್ನು, ದಾನವರನ್ನು ತಿದ್ಧಿ ಬುದ್ಧಿ ಹೇಳಿ; ಉತ್ತಮ ಮಾರ್ಗಕ್ಕೆ ತಂದವರು.

ಇಬ್ಬರೂ ದಿಗಂಬರರಾಗಿಯೇ ಲೋಕ ಸಂಚಾರಗೈದವರು. ವೇಮನನಿಗೆ ಕಚ್ಚುಟ (?) ಒಂದನ್ನು ಬಿಟ್ಟರೆ ಮೈಮೇಲೆ ಏನೂ ಬಟ್ಟೆಯಿಲ್ಲ. ಸರ್ವಜ್ಞನು ಹಾಗೆಯೇ ಲಂಗೋಟಿ ಧರಿಸಿ, ಹೆಗಲ ಮೇಲೊಂದು ಕಂಬಳಿ ಹೊದ್ದುಕೊಂಡು



ತನ್ನೆತ್ತರದ ಒಂದು ಕೋಲು ಕೈಯಲ್ಲಿ, ಕಾಲಲ್ಲಿ ಚಪ್ಪಲಿ ಹಾಕಿಕೊಂಡು ಭಾರತ ದೇಶ ಸಂಚಾರ ಮಾಡಿದ ಮಹಾನ್ ಸಂತ–ಮಹಂತ! ಇವರಲ್ಲಿ ಯಾರೂ ಮೇಲೂ ಅಲ್ಲ; ಕೀಳೂ ಅಲ್ಲ – ಸರಿ ಸಮಾನ ಮನಸ್ಕರು! ಸಮಾಜದಲ್ಲಿಯೂ ಇದನ್ನೇ ಪಸರಿಸಲು ಬಂದವರು. ಜೀವನದಲ್ಲಿ ಅನೇಕ ಏರು–ಪೇರು, ಕಷ್ಟ–ನಷ್ಟ ನೋವುಗಳನ್ನೇ ಕಂಡುಂಡವರು.

ಮಹಾಯೋಗಿ ವೇಮನರು ಬುದ್ಧನಂತೆ, ಮೋಳಿಗೆಯ ಮಾರಯ್ಯನವರಂತೆ ಸಕಲ ಗುರುಮನೆ ಅರಮನೆ ಸಿರಿಸಂಪತ್ತು, ಬಂಧು–ಬಳಗವನ್ನೆಲ್ಲ ತ್ಯಜಿಸಿ ಬಂದವರು. ಸರ್ವಜ್ಞನೂ ತಂದೆ–ತಾಯಿ–ಬಂಧು–ಬಳಗ–ಊರು–ಕೇರಿಯೆಲ್ಲವನ್ನು ತ್ಯಜಿಸಿ ಮನೆಯಿಂದ ಹೊರಬಂದವರು. ಕೈಯಲ್ಲಿ ಒಂದು ಪಾತ್ರೆ ಹಿಡಿದುಕೊಂಡು, ತಿರಿದುಂಡು ಲೋಕ ಕಲ್ಯಾಣ ಬಯಸಿದವರು. ಉಪವಾಸ–ವನವಾಸ, ಕಾಡು–ಮೇಡು, ಕಾಶ್ಮೀರದಿಂದ–ಕನ್ಯಾಕುಮಾರಿಯ ವರೆಗೂ ಪಾದಚಾರಿಗಳಾಗಿ ನಡೆದಾಡಿದವರು. ಇವರೀರ್ವರೂ ಯಾವುದೇ ಶಾಲೆ–ಕಾಲೇಜಿನ ಮೆಟ್ಟಿಲು ಅಥವಾ ಅಂದು ಜಾರಿಯಲ್ಲಿದ್ದ ಗುರುಕುಲವನ್ನು ಪ್ರವೇಶಿಸದೇ ಲೋಕಾಲಯದಲ್ಲಿಯೇ ಇದ್ದುಕೊಂಡು ವಿದ್ಯೆ–ಯೋಗ–ಧ್ಯಾನ, ಅಧ್ಯಾತ್ಮ ವಿದ್ಯೆಗಳನ್ನು ಸಂಪಾದಿಸಿಕೊಂಡವರು. ವೇಮನರು ಆಂಧ್ರಪ್ರದೇಶದಲ್ಲಿಯೇ ಇದ್ದುದು ಹೆಚ್ಚು! ಅಲ್ಲಿರುವ ಕೊಂಡವೀಡು, ಪಾಮೂರ, ಕಟಾರ್ಲುಪಲ್ಲಿ, ಮೂಗಚಿಂತಪಲ್ಲಿ, ತಂಜಾವೂರು–ಮುಂತಾದ ಊರುಗಳಲ್ಲಿ ವಾಸವಾಗಿದ್ದುದೇ ಹೆಚ್ಚು ಕಾಲ. ಆದರೆ ಈತ ವಾಸ್ತವ್ಯಕ್ಕಾಗಿ ಆಯ್ದುಕೊಂಡ ಸ್ಥಳಗಳು ಬೆಟ್ಟದ ಶ್ರೇಣಿಯಲ್ಲಿರುವ ಗುಹೆ–ಗವಿ–ಗಂಫ್ವರಗಳಲ್ಲಿ ಇಲ್ಲವೆ ಆಯಾ ಊರಿನ ಧರ್ಮಶಾಲೆ, ಧರ್ಮಛತ್ರ, ಅಥವಾ ಅದೂ ಸಿಗದಿದ್ದರೆ ಊರಿಂದ ದೂರ ಇರುವ ಬಯಲು ಪ್ರದೇಶದಲ್ಲಿರುವ ಆಲದ–ಬೇವು ಹುಣಸೆ ಮರಗಳಡಿಯಲ್ಲಿ ಆಶ್ರಯ ಪಡೆಯುತ್ತಿದ್ದರು.

ಅಲ್ಲಿಯೇ ನೆರೆದ ಭಕ್ತ ಸಮೂಹಕ್ಕೆ ಪ್ರವಚನ, ಧ್ಯಾನ, ಯೋಗ–ಈ ಮುಂತಾದ ಅಭ್ಯಾಸಗಳನ್ನು ಹೇಳಿಕೊಡುತ್ತಿದ್ದರು. ಯೋಗ ತರಬೇತಿಯ ಕೇಂದ್ರಗಳನ್ನು ಪಾಮೂರು, ಕಟಾರ್ಲುಪಲ್ಲಿಗಳಲ್ಲಿ ಸ್ಥಾಪಿಸಿದ್ದುಂಟು! ವೇಮನನು ಅತ್ತಿಗೆ ಮಲ್ಲಮ್ಮನಿಂದ ಪರಿವರ್ತನೆಗೊಂಡು ಮನೆ ತ್ಯಜಿಸಿದವನು, ತಂದೆ–ತಾಯಿ–ಅಣ್ಣ–ಅತ್ತಿಗೆ ಕರೆದರೂ ಹೋಗಲಿಲ್ಲ. ಜೀವನವಿಡೀ ಧ್ಯಾನ–ಯೋಗಗಳಲ್ಲಿಯೇ ಕಾಲ ಕಳೆದನು. ಮತ್ತು ಅದೆಷ್ಟೋ ಜನರಿಗೆ ಬೋಧನೆ ಮಾಡಿದನು. ಅವರಿಗೆ ಅಚ್ಚುಮೆಚ್ಚಿನ ಶಿಷ್ಯರಾಗಿ ರಾಮರೆಡ್ಡಿ ಮತ್ತು ನೀಲಕಂಠ ಎಂಬುವವರು ವೇಮನರ ಸೇವೆ ಮಾಡುತ್ತಾರೆ. ತಮಗಾಗಿ ಮತ್ತು ವೇಮನರಿಗಾಗಿ ಭಿಕ್ಷಟನೆ ಮಾಡಿ ಜೀವನ ಸಾಗಿಸುತ್ತಾರೆ. ಸಮಾಧಿ ಹೊಂದುವವರೆಗೂ ಯಾರ ಹಂಗಿಗೂ ಒಳಗಾಗದ

ಮಹಾನುಭಾವ ಮಹಾಯೋಗಿ ವೇಮನ ಇವರು ಜೀವಂತ ಸಮಾಧಿ ಹೊಂದಿದ್ದು ಜನೇವರಿ, ೧೯, ೧೪೮೦, ಎಂದುದಾಗಿ ತಿಳಿದು ಬರುತ್ತದೆ. ೧೪೧೨ ರಲ್ಲಿ ಜನ್ಮ ತಳೆದು ತಮ್ಮ ಅರವತ್ತೆಂಟನೆಯ ವಯಸ್ಸಿನಲ್ಲಿ ಸಮಾಧಿ ಹೊಂದುತ್ತಾರೆ. (೧೪೧೨ ರಿಂದ ೧೪೮೦ ರ ವರೆಗಿನ ಕಾಲಮಾನ ಇವರದು).

ಅರಮನೆಯಲ್ಲಿಯೇ ಪ್ರಾಥಮಿಕ ಶಿಕ್ಷಣ ಹೊಂದಿದ ವೇಮನ ಬೆಳೆದು ದೊಡ್ಡವನಾದ ಮೇಲೆ ಸೋಮಶೇಖರ ಗುರುಗಳಿಂದ ವಿದ್ಯೆ ಪಡೆಯುತ್ತಾರೆ. ಆಪ್ತಮಿತ್ರ ಅಕ್ಕಸಾಲಿಗ ಅಭಿರಾಮನ ಸಹಾಯದಿಂದ ಗವಿಯಲ್ಲಿಯೇ ವಾಸವಾಗಿದ್ದ ಯೋಗಿಯೋರ್ವನ ಕೃಪೆಯಿಂದ ಶಿಷ್ಯತ್ವ ಪಡೆದುಕೊಂಡು ಅವನಿಂದ ದೀಕ್ಷೆ ಸ್ವೀಕರಿಸಿ ಮಹಾಯೋಗಿಯಾಗುತ್ತಾನೆ. ಸತ್ಸಂಗ–ಧ್ಯಾನ–ಮೌನ, ತಪಸ್ಸು, ಪ್ರವಚನ, ಸಂವಾದದಲ್ಲಿಯೇ ಅಲ್ಲಿಗಲ್ಲಿಗೆ ನೆರೆದ ಜನರಿಗೆ ಅಧ್ಯಾತ್ಮದ ರಹಸ್ಯವನ್ನು ಮತ್ತು ಮಹತ್ವವನ್ನು ತಿಳಿಸುವತ್ತ ಚಿತ್ತಹರಿಸುತ್ತಾರೆ. ವೇಮನ ಅಶುಕವಿ ಜೀವನಾನುಭವಗಳನ್ನು ತಮ್ಮ ಪದಗಳಲ್ಲಿ ಚೌಪದಿಗಳಲ್ಲಿ ಹೇಳುತ್ತಿರುವುದನ್ನು ಶಿಷ್ಯರು, ಮತ್ಯಾರಾರೋ ಬರೆದುಕೊಳ್ಳುತ್ತಿದ್ದರಂತೆ. ಅವರು ನುಡಿದುದೇ ವೇದ, ಉಪನಿಷತ್ತುಗಳಾಗುತ್ತಿದ್ದವು. ವೇಮನರ ಪದ್ಯಗಳನ್ನು ಡಾ. ಹಳಕಟ್ಟಿಯವರು ವಚನಗಳೆಂದು ಕರೆದಿದ್ದಾರೆ. ಅಟಲವೇದಿ, ಕಂದ, ತೇಟ, ಸೀಸ– ಈ ತರಹದ ನಾಲ್ಕು ತರಹದ ಛಂದಸ್ಸುಗಳಲ್ಲಿ ಪದ್ಯಗಳನ್ನು ರಚಿಸಿದ್ದುದು ಕಂಡು ಬರುತ್ತದೆ. ಅವು ೩೮೧೨ ಒಟ್ಟು ಪದ್ಯಗಳಿವೆಯೆಂಬುದನ್ನು ಶ್ರೀ ಎಸ್.ಆರ್. ಪಾಟೀಲರು – "ವೇವನನ ವಿಶ್ವಗೀತೆ" ಎಂಬುದರಲ್ಲಿ ಪ್ರಕಟಿಸಿದ್ದುದೇ ನಮ್ಮೆಲ್ಲರಿಗೆ ಕೈಪಿಡಿಯಂತಿದೆ. ತೆಲುಗು ಭಾಷೆಯಲ್ಲಿ ವೇಮನರ ಈ ಪದ್ಯಗಳಿದ್ದುದನ್ನೇ ಕನ್ನಡಕ್ಕೆ ಅನುವಾದಿಸಿದ ಮಹನೀಯರಿಗೆ ಧನ್ಯತಾ ಭಾವ ಸಲ್ಲಿಸಬೇಕು. ವೇಮನರು ತಮ್ಮ ಪದ್ಯದ ಕೊನೆಗೆ ಶಿವಶರಣರಂತೆ "ವಿಶ್ವದಾಭಿರಾಮ ಕೇಳು ವೇಮ" ಎಂಬುದಾಗಿ ಅಂಕಿತ ಅಥವಾ ಮುದ್ರಿಕೆಯನ್ನು ಬಳಸಿಕೊಂಡಿದ್ದಾರೆ. ಅವರು ರಚಿಸಿದ, ಹೇಳಿದ ಪದ್ಯಗಳ ಮಹತ್ವವನ್ನು ಈ ಹಿಂದಿನ ಅಧ್ಯಾಯದಲ್ಲಿ ಕೆಲವೇ ಕೆಲವು ಪದ್ಯಗಳ ಉದಾಹರಣೆಯೊಂದಿಗೆ ಹೇಳಲಾಗಿದೆ.

ಹಾಗೆಯೇ ಸರ್ವಜ್ಞ ಕವಿಯೂ "ಹಿಂಡನಗಲಿದ ಗಜದಂತೆ" ಲೋಕಸಂಚಾರಗೈದವನು. ಕಾಶ್ಮೀರ–ಹಿಮಾಲಯ ಪರ್ವತದ ವರೆಗೂ ಸಂಚಾರ ಮಾಡಿರುವನೆಂಬ ಹೇಳಿಕೆಯಿದೆ. ಕರ್ನಾಟಕದಲ್ಲಿಯೂ ವಿವಿಧ ಬೆಟ್ಟ–ಊರು–ಕೇರಿ ಸುತ್ತಾಡಿ ಲೋಕಾನುಭವ ಪಡೆದುಕೊಂಡವನು. ವೇಮನರಂತೆ ಈತನಿಗೂ "ಸೋಮಶಂಕರ" ಗುರುವಿನಿಂದ ವಿದ್ಯಾಭ್ಯಾಸ ಪ್ರಾಪ್ತವಾಗುತ್ತದೆ. ಅಧ್ಯಾತ್ಮ–ಯೋಗ–ಧ್ಯಾನ–ತಪಸ್ಸುಗಳನ್ನು ಸ್ವ ಪ್ರಯತ್ನದ ಮೂಲಕವಾಗಿಯೇ ಸರ್ವಜ್ಞನು ಕಲಿತಂತೆ



ತೋರುತ್ತದೆ. ಇದರ ಕುರಿತಾಗಿ ಮಾಹಿತಿಯೂ ಎಲ್ಲಿಯೂ ಕಾಣಸಿಗದು. ಆತನ ವಚನಗಳಲ್ಲಿಯೇ ತನ್ನ ಬಗೆಗಿನ ಚರಿತ್ರಾಂಶಗಳನ್ನು ಹೇಳಿಕೊಂಡಿರುವುದುಂಟು! 'ಬಯಲೇ ಎನಗೆ ವಿದ್ಯೆ ಕಲಿಸಿತು' ಎಂದೂ ಹೇಳಿದ್ದುಂಟು! ಈತನಿಗೆ ಬಯಲೇ ಆಲಯ. ಎಲ್ಲಿಯೂ ತನಗಾಗಿ ಗುಡಿ–ಗುಂಡಾರ, ಮಠ ಮಂದಿರಗಳನ್ನು ನಿರ್ಮಿಸಿಕೊಳ್ಳಲಿಲ್ಲ.

ಸರ್ವಜ್ಞನಿಗೆ ವೇಮನನಂತೆ ಶಿಷ್ಯರಾರೂ ಇರಲಿಲ್ಲವೆಂದು ತೋರುತ್ತದೆ. ತನ್ನ ಕಾರ್ಯ ತಾನೇ ಮಾಡಿಕೊಳ್ಳುತ್ತಿದ್ದ. ಹಸಿವಾದರೆ ಭಿಕ್ಷಾನ್ನ, ಮಲಗಲು ಹಾಳು ದೇಗುಲಗಳುಂಟು, ನೀರಡಿಕೆಗೆ ಕೆರೆ ಕಟ್ಟೆ, ಭಾವಿ–ಹಳ್ಳ ಕೊಳ್ಳಗಳುಂಟು– ಎಂದು ಹೇಳುತ್ತ ಅಲೆದಾಡಿದವನು ಸರ್ವಜ್ಞ ! ಈತನು "ಸರ್ವಜ್ಞ" ಎಂಬ ಅಂಕಿತದಲ್ಲಿ ಏಳುಸಾವಿರದಾ ಎಪ್ಪತ್ತು ವಚನಗಳನ್ನು ತ್ರಿಪದಿಯಲ್ಲಿ ರಚಿಸಿರುವನು. ಉತ್ತಂಗಿ ಚನ್ನಪ್ಪನವರು ಧಾರವಾಡ ಜಿಲ್ಲೆ ಮತ್ತು ಇತರ ಕಡೆಗಳಲ್ಲಿ ಸಂಚರಿಸಿ, ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸಿದ ಈತನ ವಚನಗಳ ಸಂಖ್ಯೆ ೨೧೦೦ ಮಾತ್ರ. ಇನ್ನೂ ಇದ್ದಿರಬೇಕು! ಆದರೆ ಅವುಗಳ ಹುಡುಕಾಟದ ಸಂಶೋಧನಾ ಕಾರ್ಯ ನಡೆಯಬೇಕಾಗಿದೆ. ಸಿಕ್ಕ ವಚನಗಳ ಮೊತ್ತ ಕಡಿಮೆಯಾದರೂ ದೊರೆತವುಗಳು ಅಗಾಧ ಪಾಂಡಿತ್ಯವನ್ನು ಕೊಡುತ್ತವೆ. ಈತನ ವಚನಗಳು ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಕಳಸಪ್ರಾಯ! ಆದರೆ ಸರ್ವಜ್ಞನ ಅಂತಿಮ ದಿನಗಳ ಬಗೆಗೆ ಪೂರಕ ಮಾಹಿತಿ ಎಲ್ಲಿಯೂ ಉಲ್ಲೇಖಗೊಂಡಿಲ್ಲ. ಆತ ಐವತ್ತು ವರುಷ ಬದುಕಿದ್ದನೆಂಬುದನ್ನು ಬಿಟ್ಟರೆ ಉಳಿದಾವ ಸಂಗತಿಯೂ ಕಾಣಸಿಗಲಾರದು. ಅಪಾರ ಜ್ಞಾನಿ ಸರ್ವಜ್ಞ !

ಒಟ್ಟಿನಲ್ಲಿ ಸಮಾಜ ಸುಧಾರಣೆಗಾಗಿಯೇ ಈ ಲೋಕಕ್ಕೆ ಅವತರಿಸಿದ ಪುಣ್ಯ ಪುರುಷರು. ಇಬ್ಬರಲ್ಲಿಯೂ ಇರುವಿಕೆಯ ಜೀವನದಲ್ಲಿ, ವಿದ್ಯೆ ಸಂಪಾದಿಸುವಲ್ಲಿ, ಲೋಕ ಸಂಚಾರದಲ್ಲಿ, ಸಮಾಜ ಸುಧಾರಿಸುವಲ್ಲಿ, ಸ್ತುತಿ–ನಿಂದೆಗಳಿಗೆ ಕಿವಿಗೊಡದೇ ಲೋಕ ಸಂಚಾರಗೈಯ್ಯುತ್ತ ಉತ್ತಮ ನಡೆ–ನುಡಿ, ಆಚಾರ ವಿಚಾರಗಳನ್ನು ಬಿಂಬಿಸಿದ್ದಾರೆ ಎಂಬುದಕ್ಕು ಅವರವರ ಪದ್ಯ–ವಚನಗಳೇ ಸಾಕ್ಷಿ. ಅವರ ಸಾಧನೆಗಳಲ್ಲಿ ಸೋದಾಹರಣವಾಗಿ ವಿವರಿಸಲಾಗಿದೆ. ತಾವಿದನ್ನು ಗಮನಿಸಬೇಕೆಂದು ಪ್ರಾರ್ಥಿಸಿಕೊಳ್ಳುವೆನು!

ಕೆಲವು ವಿಷಯಗಳ ಕುರಿತು ಅವರಿಬ್ಬರೂ ಹೇಳಿರುವ ಪದ–ಪದ್ಯಗಳನ್ನಾಯ್ದುಕೊಂಡು ಸಂಕ್ಷಿಪ್ತದಲ್ಲಿ ಹೇಳಲು ಪ್ರಯತ್ನಿಸಲಾಗಿದೆ. ತಂದೆ–ತಾಯಿಗಳೇ ಗುರು–ಸರ್ವಸ್ವ ಹೆತ್ತ ತಾಯಿ–ತಂದೆಗಳನ್ನೇ ದೇವರೆಂದು ಆರಾಧಿಸಬೇಕು. ಅವರಲ್ಲಿಯೇ ದೇವರನ್ನು ಕಾಣುವುದೆಂದರೆ ಪೂಜಿಸುವುದು, ಆರಾಧಿಸುವುದು, ಅವರು ಜೀವಿತವಿದ್ದಾಗಲೇ ಪೂಜನೀಯವಾಗಿ ಕಂಡು, ಅವರ

ಸೇವೆಯನ್ನು ಮನಮುಟ್ಟಿ ಮಾಡುವುದು ಎಂದು ಇಬ್ಬರೂ ಹೇಳಿದ್ದು ಹೀಗೆ! ವೇಮನ ಹೇಳಿದಂತೆ:

**ತಾಯಿ ತಂದೆ ತಿಳಿಯೆ ಮೊದಲು ಗುರುವು**
**ಪಾರ್ವತಿ ಭವರೆಲ್ಲ ಪರಮ ಗುರುವು**
**ವಿಶ್ವದಾಭಿರಾಮ ಕೇಳು ವೇಮ**

**ತಾಯಿಯೇ ಪಾರ್ವತಿಯು ತಂದೆಯೇ ಶಂಭುವು**
**ತಾನು ಹುಟ್ಟಿದ ಮನೆ ತನಗೆ ಕೈಲಾಸವು**
**ವಿಶ್ವದಾಭಿರಾಮ ಕೇಳು ವೇಮ**

**ತಾಯಿ–ತಂದೆಯರೇ ತನಗೆ ಗುರುವು ದೈವ**
**ತಾಯಿ–ತಂದೆಯರೇ ತನಗೆ ಜೋಡು**
**ತಾಯಿ–ತಂದೆಯಿಂದ ತನುವು ಆಯಿತಲ್ಲ**
**ವಿಶ್ವದಾಭಿರಾಮ ಕೇಳು ವೇಮ**

**ತಾಯಿ–ತಂದೆ ಹಿತರು ಬಂಧು–ಬಳಗವೆಲ್ಲ**
**ಕನ್ನೆ ಕೊಡುವರಷ್ಟೇ? ಭಾಗ್ಯ ಕೊಡಲರಿಯರು**
**ವಿಶ್ವದಾಭಿರಾಮ ವೇಮ ಕೇಳು**

**ಮೊದಲಿಗಿಹ ಮಾತೃ ದೇವತೆ**
**ತದನಂತರ ಜನಕನು ಇರುವ ಪರಿಕಿಸಲ್**
**ಕುದುರಿದ ಸದಮಲ ಗುರುವೇ**
**ವಿಶ್ವದಾಭಿರಾಮ ವೇಮ ಕೇಳು**

**ತುದಿ ದೈವವು; ಪರರು ಬೇರೆ ತೋರರು**
**ಹಡೆದ ತಾಯಿ–ತಂದೆ ಹೊರೆಯುವುದನು ಬಿಡಲು**
**ಹಡೆದು ಬೆಳೆಸಿದ ಋಣ ತೀರದಯ್ಯ**
**ತಾಯಿ–ತಂದೆ ನೋಯೆ, ತಪವು ಸಿದ್ಧಿಸುವುದೇ**
**ವಿಶ್ವದಾಭಿರಾಮ ಕೇಳು ವೇಮ**



**ತಾಯಿ–ತಂದೆಯಿಂದ ತಿಂಡಿ ಸಾಧನಾಯ್ತು**
**ತಾಯಿ–ತಂದೆ ಶತ್ರು ತನಗೆ ಅಯ್ಯ**
**ತಾಯಿ–ತಂದೆಯರನು ತಂದು ಕೊಳ್ಳಬಹುದೇ?**
**ವಿಶ್ವದಾಭಿರಾಮ ಕೇಳು ವೇಮ**

**ತಾಯಿ–ತಂದೆಯ ಪೂಜೆಯ ದಾರಿಗಾಗಿ ಕೊಂಚ**
**ಪಾಪ ಕೂಪದಲ್ಲಿ ಪತನವೇಕೆ?**
**ದಾನ–ಧರ್ಮಗೆಯ್ಯೆ ದೈವ ತಾನಾಗುವ**
**ವಿಶದಾಭಿರಾಮ ಕೇಳು ವೇಮ**

**ಮಾತೆ–ಬದುಕಿರಲ್ಕೆ ಮಗನ ಮುದ್ದಿಸುವಳೂ**
**ಸತ್ತು ಹೋಗಲವಳು ಪೊರೆವರಾರು?**
**ಸತ್ಕಾಲ ಒದಗಲು ಸತ್ಕೀರ್ತಿಯರ್ಜಿಸು**
**ವಿಶ್ವದಾಭಿರಾಮ ವೇಮ ಕೇಳು**

ವೇಮನಯೋಗಿಯು ತಂತೆ–ತಾಯಿಗಳೇ ದೇವರು ಎಂಬುದಾಗಿ ನೂರಾರು ಪದ್ಯಗಳಲ್ಲಿ ಹೇಳಿರುವನು. ಅದರಂತೆ ಆಚರಿಸುವುದು ನಮ್ಮೆಲ್ಲರ ಕರ್ತವ್ಯವಾಗಬೇಕಲ್ಲವೆ? ಇದೇ ಮಾತುಗಳನ್ನು ಕನ್ನಡದ ಸರ್ವಜ್ಞಕವಿಯು ಹೇಳಿರುವುದನ್ನು ಗಮನಿಸಬೇಕು.

ತಂದೆ–ತಾಯಿಗಳು ಕಾಶೀ–ರಾಮೇಶ್ವರರಿದ್ದಂತೆ! ಅದು ಕಾರಣ ಹೆತ್ತವರನ್ನು ದೇವರೆಂದು ನಡೆದುಕೊಳ್ಳಬೇಕೆಂದು ಸರ್ವಜ್ಞನು ಹೇಳಿದ್ದು ಹೀಗೆ:

**ಮುತ್ತು ನೀರಲಿ ಹುಟ್ಟಿ–ಹತ್ತು ಸಾಸಿರ ಹಡೆಗು**
**ಹತ್ತು ಚಿಪ್ಪೊಂದು ಹಣಮಿಲ್ಲ ತಾಯ್ತಂದೆ**
**ಎತ್ತಣವರೆಂದ ಸರ್ವಜ್ಞ**

**ತಂದೆ–ತಾಯಿಗಳ ಘನದಿಂದ ವಂದಿಸುವವರಿಗೆ**
**ಬಂದ ಕುತ್ತಗಳು ಬಯಲಾಗಿ–ಸ್ವರ್ಗವದು**
**ಮುಂದೆ ಬಂದಕ್ಕು ಸರ್ವಜ್ಞ**

**ತಂದೆ-ತಾಯಿಗಳಿಗೆ ಶಿರಬಾಗಿ ಎರಗಿದರೆ**
**ನರಸುರರು ಒಲಿದು ಸಿರಿಸುರಿದು ಕೈಲಾಸ**
**ಕರತಲಾಮಲಕ ಸರ್ವಜ್ಞ.**

**ತೌ, ಎಂಬೆನಲ್ಲದೆ ತಾಯಿ ನಾನೆಂಬೆನೆ?**
**ತಾಯಿಯೆಂದಾನು ನುಡಿದೇನು ಪರಸ್ತ್ರೀಯ**
**ತಾಯಿಯೆಂದೆಂಬೆ ಸರ್ವಜ್ಞ.**

**ತಂದೆಗೂ ಗುರುವಿಗೂ ಒಂದು ಅಂತರವುಂಟು**
**ತಂದೆ ತೋರುವನು ಸದ್ಗುರುವ, ಗುರುರಾಯ**
**ಬಂಧನವ ಕಳೆವ ಸರ್ವಜ್ಞ.**

**ವಿದ್ಯೆ ಕಲಿಸದ ತಂದೆ-ಬುದ್ಧಿ ಹೇಳದ ಗುರುವು**
**ಬಿದ್ದಿರಲು ಬಂದು ನೋಡದ ತಾಯಿಯು**
**ಶುದ್ಧ ವೈರಿಗಳು ಸರ್ವಜ್ಞ!**

ಮುಂತಾದ ವಚನಗಳಲ್ಲಿ ತಂದೆ-ತಾಯಿ-ಗುರು-ಹಿರಿಯರನ್ನು ಗೌರವದಿಂದ ಕಾಣಬೇಕು ಕಾಶೀ-ರಾಮೇಶ್ವರ, ತಿರುಪತಿ, ಶ್ರೀಶೈಲ ಪರ್ವತ ಮುಂತಾದ ಗುಡಿ-ಗುಂಡಾರಗಳನ್ನು ಸುತ್ತಿ ದಣಿಯುವುದಕ್ಕಿಂತ ಮನೆಯಲ್ಲಿರುವ ನಿಜವಾದ ತಂದೆ-ತಾಯಿಗಳೇ ಕಾಶೀ-ರಾಮೇಶ್ವರರಿದ್ದಂತೆಯೆಂದು ಸರ್ವಜ್ಞರು ಕಟಕಿಯಾಡಿದ್ದಾನೆ.

ವೇಮನ ಮತ್ತು ಸರ್ವಜ್ಞರು ತಂದೆ-ತಾಯಿ-ಗುರು-ಹಿರಿಯರಿಗೆ ಭಕ್ತಿಯಿಂದ ನಡೆದುಕೊಳ್ಳಬೇಕು. ಅವರೇ ನಮ್ಮ ಜೀವನದ ಮಾರ್ಗರ್ಶಕರು ಎಂದು ನಂಬಿ ನಡೆದುಕೊಳ್ಳಬೇಕೆಂದು ಜಾಗೃತಿಯ ನಡುಗಳನ್ನಾಡಿದ್ದಾರೆ.

ಗುರು ಸೇವೆ ಮಾಡಿ ವರ ಪುಣ್ಯ ಪಡೆಯಿರೆಂದು ಈ ಇಬ್ಬರೂ ಮಹಾತ್ಮರು ಹೇಳಿದ್ದು ಅರ್ಥಪೂರ್ಣವಾಗಿದೆ. ಕಾಶಿಗೆ ಹೋಗಾಕ ಏಸೊಂದು ದಿನ ಬೇಕು, ಕಾಶಿ ಕುಂತಾಳ ಮನಿಯಾಗ ಎಂಬ ಗರತಿಯರ ಹಾಡಿನ ಪಲ್ಲವಿಯಂತೆ ವೇಮನಯೋಗಿಯು ಕಾಶಿಯಾತ್ರೆಗೆಯ್ದು, ಗಾಸಿ ಪಡುವುದೇಕೆ? ಹೊಲಸು ಗುಣ ವಿಕಾರ ಹೊಳಹು ತೊರೆದು, ಮೋಸಹೋಗದ ಅರಿವು ಮೂಲ ಕಂಡುಕೊಳ್ಳೆಂದು ಹಿತ ನುಡಿದಿದ್ದಾನೆ.



ಭವಸಾಗರದ ದಡ ಇಲ್ಲವೆ ತೀರವನ್ನು ತಲುಪಿ ನಿಂತವರು ತೀರ್ಥರೆನಿಸುತ್ತಿದ್ದರು. ಅವರು ವಾಸಿಸುವ ತಾಣವು ಪವಿತ್ರ ಕ್ಷೇತ್ರವೆನಿಸುತ್ತಿತ್ತು. ಮುಂದೆ ಬರಬರುತ್ತ ನದಿಮೂಲ ಇಲ್ಲವೆ ನದಿಯ ಸಂಗಮ ಸ್ಥಾನಗಳೇ ತೀರ್ಥಗಳಾಗಿ ಸ್ನಾನದ ಪವಿತ್ರ ಸ್ಥಾನಗಳಾದವು. ಬೆಟ್ಟದಲ್ಲಿ ದೇವ ಮಂದಿರ ನಿರ್ಮಿಸಿ ಅವುಗಳನ್ನೆ ಪವಿತ್ರ ಕ್ಷೇತ್ರಗಳೆಂದು ಕರೆದರು. ಮುಂದೆ ಅಧಿಕಾರಿಗಳಿಗೆ ದೇವಮಂದಿರದ ಬಾಹ್ಯ ಪೂಜೆಯನ್ನು ನಿಗದಿಗೊಳಿಸಿದ ಮೇಲಂತೂ ಈ ತೀರ್ಥಕ್ಷೇತ್ರಗಳಿಗೆ ಯಾತ್ರೆ ಹೋಗುವ ಪದ್ಧತಿಯೂ ಜನಪ್ರಿಯವಾಯಿತು. ಗುರುಯಾತ್ರೆ, ತೀರ್ಥಯಾತ್ರೆ, ದೇವಯಾತ್ರೆಗಳೆಂಬ ಮೂರು ತರದ ಯಾತ್ರೆಗಳಿವೆಯಾದರೂ ಆ ಮೂರರಲ್ಲಿ ಗುರುಯಾತ್ರೆಯು ಫಲಪ್ರದವಾದು, ಅದನ್ನೇ ವೇಮನಯೋಗಿಯು ಕಾಶಿ, ತಿರುಪತಿ, ರಾಮೇಶ್ವರ, ಶ್ರೀಶೈಲ ಯಾತ್ರೆಯೇ ಇರಲಿ, ಮಧುರೆ, ಮಕ್ಕಾ ಯಾತ್ರೆಯೇ ಇರಲಿ ಅವು ಪಕ್ಕಾ ಆಗಲಾರವು. ಅಂದರೆ ಅವುಗಳಿಗೆ ಹೋಗಿ ಎರಗುವುದರಿಂದ ಮಾನವನಲ್ಲಿ ಮಾರ್ಪಾಡು ತರಲಾರವು ಕಾಶಿ ಕಂಡ ಹಂದಿ ಕರಿಯಾಗದು. ಮನೋಶುದ್ಧಿ ಮಾಡಿಕೊಂಡು ಗುರುವನ್ನು ಸೇರುವುದೇ ನೈಜಯಾತ್ರೆಯಷ್ಟೇ ಎಂದಿದ್ದಾರೆ.

**ದೇಹದೊಳಗೆ ಇಷ್ಟದೇಹಿ ದೇವನನ್ನು**
**ಕಂಡುಕೊಂಡು ಬುಧರು ತೀರ್ಥಯಾತ್ರೆ**
**ವಿಶ್ವದಾಭಿರಾಮ ವೇಮ ಕೇಳು.**

**ತನ್ನ ಆತ್ಮದಲ್ಲಿ ದೈವವಿರುವಾಗ**
**ತೀರ್ಥಯಾತ್ರೆಗಳನು ತಿರುಗುವವರ**
**ಗಂಧ ಕಡ್ಡಿಗಳನು ಕತ್ತೆ ಹೊತ್ತ ಚಂದ**
**ವಿಶ್ವದಾಭಿರಾಮ ಕೇಳು ವೇಮ.**

**ಅಡವಿ ತಿರುಗಿದರೂ ಇಲ್ಲ ಆಗಸದಲ್ಲೂ ಇಲ್ಲ**
**ಅವನಿ ತೀರ್ಥಯಾತ್ರೆಯಲ್ಲಿ ಇಲ್ಲ**
**ಒಡಲು ಶುದ್ಧಗೊಳಿಸಿ ಒಡೆಯನನ್ನು ನೋಡು**
**ವಿಶ್ವದಾಭಿರಾಮ ವೇಮ ಕೇಳು.**

**ತೀರ್ಥಯಾತ್ರೆಗೆಂದು ತಿರುಗಲು ಹೋಗುವವ**
**ಪಾಮರನಷ್ಟೇ ಹೊರತು ಭಕ್ತನಹನೆ**
**ವಿಶ್ವದಾಭಿರಾಮ ವೇಮ ಕೇಳು**

**ಕಾಶಿ ಕಾಶಿ ಎಂದು ಕೇಡು ಹರ್ಷಿಸಿ ಹೋದರು**
**ಇಲ್ಲಿ ಅಲ್ಲು ಉಂಟು ಹೃದಯ ಇಲ್ಲಿಲ್ಲವೇ?**
**ವಿಶ್ವಗಾಭಿರಾಮ ಕೇಳು ವೇಮ**

**ಕಾಶಿ ನೀರು ಹೊತ್ತು, ಕಾಲು ಮುಖವ ತೊಳೆದು**
**ಕಾಣದಲ್ಲೊ ಸುಖ ಕೊರಗಿ ಕೊರಗಿ**
**ಸತ್ತ ಬಳಿಕ ಮುಕ್ತಿ ಸಾಧಿಸುವರೇನೋ?**
**ವಿಶ್ವದಾಭಿರಾಮ ಕೇಳು ವೇಮ.**

**ಕಾಶಿ, ಮಧುರೆ, ಕಂಚಿ, ಗಯೆ, ಪ್ರಯಾಗ ಸೇತು**
**ಅಲೆದು ಅಲೆದು ಇರೆ ಆತ್ಮ ಕಂಡು**
**ವಾಸನೆಗಳಳಿಯದೆ ಇರೆ ವ್ಯರ್ಥ ವಿಧಿಗಳಷ್ಟೆ**
**ವಿಶ್ವದಾಭಿರಾಮ ಕೇಳು ವೇಮ.**

**ತಿರುಪತಿ ಯಾತ್ರೆ ಕೋರಿ ತಲೆಗೂದಲನು ಇತ್ತು**
**ವೆಂಕಟೇಶನ ಕೋರಿ ಬೇಡಲೇಕೆ?**
**ಅಲ್ಲಿಹ ಶ್ರೀ ಹರಿ ಇಲ್ಲಿಯೇ ಇರನೇ?**
**ವಿಶ್ವದಾಭಿರಾಮ ಕೇಳು ವೇಮ.**

**ತಿರುಮಲೆಯಲಿ ನಾಯಿ ತಿರುಗೆ, ಸಿಂಹವಲ್ಲ**
**ಕಾಶಿ ತಲುಪೆ ಹಂದಿ, ಗಜವು ಅಲ್ಲ**
**ಭರತ ಕುಣಿಯೆ ಸೂಳೆ, ಪತಿವ್ರತೆಯು ಅಲ್ಲ**
**ವಿಶ್ವದಾಭಿರಾಮ ಕೇಳು ವೇಮ.**

**ಕಳ್ಳ ತೀರ್ಥಕೆ ಹೋಗಿ ಗಂಟು ಬಿಚ್ಚುವ ಹೊರತು**
**ಮಣಿಯೆ ವೇಳೆ ಇರದು ಮತ್ತೆ ಕೊನೆಗು**
**ಹೊಕ್ಕು ಮನೆಯ ನಾಯಿ ಹುಡುಕದೇ ಗಡಿಯೆಯ?**
**ವಿಶ್ವದಾಭಿರಾಮ ಕೇಳು ವೇಮ.**

ಹೀಗೆ ಮುಂತಾದ ನೂರಾರು ವಚನ/ಪದಗಳಲ್ಲಿ ಪರಿಶುದ್ಧರಿಲ್ಲದೇ ತೀರ್ಥಯಾತ್ರೆ, ದೇವಾಲಯಗಳನ್ನು, ನದಿ-ಗುಡ್ಡ-ಪರ್ವತಗಳನ್ನು ಸುತ್ತುವ ಭಂಡ ಭಕ್ತರನ್ನು ವಿಡಂಬಿಸಿದ ಬಗೆಯಿದೆ. ಆದರೂ ಇದು ಇಂದಿಗೂ ನಡೆದೇಯಿದೆ.



ದೇಹವೇ ದೇವಾಲಯವಾಗಿರುವಾಗ ಹೀಗೆ ಅಲೆಯುವುದು ಮಂದಮತಿಗಳ ಕೆಲಸವೆಂದು ಹೀಗಳೆದಿದ್ದಾನೆ.

ಇಂತಹ ಆಶಯವನ್ನೇ ಕನ್ನಡದ ಸರ್ವಜ್ಞ ಕವಿಯೂ ತನ್ನ ವಚನಗಳಲ್ಲಿ ಹೇಳಿದ್ದು ಹೀಗಿದೆ.

**ವಾರಣಾಸಿಗೆ ಹೋಹ ಕಾರಣವದೇನಯ್ಯ**
**ಕಾರಣಿಕ ಪುರುಷನೊಳಗಿರಲು ಅಲೆವುದಕೆ**
**ಕಾರಣವ ಹೇಳು ಸರ್ವಜ್ಞ**

**ಪಂಚಾಗ್ನಿಯಲಿ ಕುಳಿತು ವಂಚಿಸಿದ ದೇಹಕ್ಕೆ**
**ಮುಂಚೆ ಉರಿ ನರಕವನನುಭವಿಸಿದಾ ಮೇಲೆ**
**ಸಂಚಿತದ ಫಲವು ಸರ್ವಜ್ಞ**

ದೇಹ ದಂಡನೆಯೂ ವ್ಯರ್ಥವೆಂದಿದ್ದಾನೆ ಕವಿ ಸರ್ವಜ್ಞ. ದೇಹದೊಳಿರುವ ಆತ್ಮವೇ ಪರಮಾತ್ಮನು ಆತ್ಮ ಶುದ್ಧಿಕರಿಸಿಕೊಂಡು ಮುನ್ನಡೆಯಿರೆಂದು ಕವಿಯು ಎಚ್ಚರಿಸಿದ್ದಾನೆ.

**ಪಂಚ ಭೂತಂಗಳೊಳ ಸಂಚಲವನರಿಯದಲೆ**
**ಹಂಚನೆ ಹಿಡಿದು ತಿರಿದುಂಬ ಜ್ಞಾನಿ ತಾ**
**ನಂದು ಹರಿಯನು ಸರ್ವಜ್ಞ**

**ಪಂಚವಿಂಶತಿ ತತ್ತ್ವ ಸಂಚಯದ ದೇಹವನು**
**ಹಂಚೆಂದು ಕಾಣಲರಿಯದಿರೆ ಭವ ಮುಂದೆ**
**ಹೊಂಚಲಾಗಿಹುದು ಸರ್ವಜ್ಞ**

**ತನ್ನ ತಾನದರಿದಂಗೆ ಮುನ್ನ ಹೊದ್ದದು ಮಾಯೆ**
**ಉನ್ನತದೊಳಿಪ್ಪ ಗಜವೇರಿ ಒಪ್ಪವನ**
**ಕುನ್ನಿ ಕಚ್ಚುವುದೇ ಸರ್ವಜ್ಞ**

**ಆಡುಮನು ಜ್ಯೋತಿಯನು ಪ್ರೀತಿಯಲಿ ಅರಿದಂಗೆ**
**ಸೂತಕವದಿಲ್ಲ ಭಯವಿಲ್ಲ ಪಂಚಮಹ**
**ಪಾತಕಗಳಿಲ್ಲ ಸರ್ವಜ್ಞ**

**ಆಗಿಲ್ಲ ಹೋಗಿಲ್ಲ ಮೇಗಿಲ್ಲ ಕೆಳಗಿಲ್ಲ**
**ದೇಗುಲವೇ ಇಲ್ಲ ತಡಿಯಿಲ್ಲ ಲಿಂಗಕ್ಕೆ**
**ದೇಗುಲವೇ ಇಲ್ಲ ಸರ್ವಜ್ಞ**

**ಆ ದೇವ ಈ ದೇವ ಮಾದೇವನೆನಬೇಡ**
**ಆ ದೇವರ ದೇವ ಭುವನದ ಪ್ರಾಣಿಗಳಿ**
**ಗಾದವನೇ ದೇವ ಸರ್ವಜ್ಞ!**

**ಚಿತ್ತವಿಲ್ಲದ ಗುಡಿಯ ಸುತ್ತಿದಡೆ ಫಲವೇನು?**
**ಎತ್ತು ಗಾಣವನು ಹೊತ್ತು ತಾ ನಿತ್ಯದಿ**
**ಸುತ್ತಿ ಬಂದಂತೆ ಸರ್ವಜ್ಞ**

**ದೇಹವೇ ದೇವಾಲಯವು ಜೀವವೇ ಶಿವಲಿಂಗ**
**ಬಾಹ್ಯಂಗಳಳಿದು ಭಜಿಪಂಗೆ ಮುಕ್ತಿ ಸಂ**
**ದೇಹವಿಲ್ಲೆಂದ ಸರ್ವಜ್ಞ**

ಇಂತು ನೂರಾರು ವಚನಗಳಲ್ಲಿ ತೀರ್ಥಯಾತ್ರೆ, ಮಾಡುವುದರಿಂದೇನೂ ಪ್ರಯೋಜನವಿಲ್ಲ. ಮನ ಶುದ್ಧಿಕರಿಸಿಕೊಂಡು ತಾನಿರುವಲ್ಲಿಯೇ ನಂಬಿ ಕರೆದರೆ ಓ ಎನ್ನಲಾರನೇ ಆ ಪರಮಾತ್ಮನು? ಎಂದು ವೇಮನ ಮತ್ತು ಸರ್ವಜ್ಞ ಶಿವಯೋಗಿಗಳು ಮೇಲಿನ ಪದ, ವಚನಗಳ ಮೂಲಕ ಮನುಕುಲಕ್ಕೆ ತಿಳಿಯಪಡಿಸಿದ್ದಾರೆ.

**ಗುರುವಿನ ಮಹಿಮೆ:**

ಗುರುವಿನ ಅಗತ್ಯತೆಯನ್ನು ಕುರಿತು ಇಬ್ಬರೂ ಮಹಾತ್ಮರು ಹೇಳಿರುವ ಪದಗಳಿಂತಿವೆ. ಮನೆಯೇ ಮೊದಲ ಪಾಠಶಾಲೆಯೆಂಬಂತೆ ತಾಯಿಯು ಸಂಸ್ಕಾರವನ್ನು ಮಗುವಿಗೆ ಕಲಿಸಿದರೆ, ಎರಡನೆಯದು ಗುರುವಿನಿಂದ ಶಿಕ್ಷಣ ಪಡೆಯುವುದು ಮಗುವಿಗೆ ಅತ್ಯಗತ್ಯವಾದುದು. ಗುರುವಿನ ಗುಲಾಮನು ಆಗದ ತನಕ ದೊರೆಯದು ವಿದ್ಯೆ ಮತ್ತು ಮುಕ್ತಿಯೆಂದಿದಾರೆ ಅನುಭಾವಿಗಳು ಗುರು–ಶಿಷ್ಯರ ಸಂಬಂಧವು ಅವಿನಾಭಾವದಿಂದೊಡಗೂಡಿರಬೇಕು. ಗುರುವು ತ್ಯಾಗಿ, ತಪಸ್ವಿ ಆತ ಶಿಷ್ಯನಿಗೆ ಸಕಲ ವಿದ್ಯೆಯನ್ನು ಧಾರೆಯರೆಯುವವನಾಗಿರಬೇಕು ಹರಿ ಸರ್ವೋತ್ತಮನಿಗಿಂತಲೂ ಶ್ರೀ ಗುರುವೇ ಮುಖ್ಯನು ಎನ್ನಲಾಗಿದೆ. "ಹರಮುನಿದರೂ



ಗುರುಕಾಯುವವನು" ಎಂದು ಹರಿಹರ ಕವಿಯೂ ಹೇಳಿದ್ದಾನೆ. ಶಿಷ್ಯನಲ್ಲಿರುವ ಅಜ್ಞಾನವೆಂಬ ಕತ್ತಲೆಯನ್ನು ಕಳೆದು ಹಾಕಿ ಜ್ಞಾನವೆಂಬ ಬೆಳಕನ್ನು ಉಣಬಡಿಸುತ್ತಾನೆ. ಎಂಬುದಕ್ಕೆ ವೇಮನಯೋಗಿಯು ಹೇಳಿರುವುದು ಹೀಗೆ

**ಗುರುವು ಶಿಷ್ಯರೆನಲು ಕೊನೆಯು ಮೊದಲು ಎಂತು?**
**ಗುರುವು ಶಿಷ್ಯರು ಗುರುತು ಎಂತು?**
**ಗುರುವಿಗಿಪ್ಪ ತನ್ನ ಗೌರವವಿರದಿರಲು**
**ವಿಶ್ವದಾಭಿರಾಮ ಕೇಳು ವೇಮ.**

**ಶಿಷ್ಯ ಧರ್ಮವರಿತು ಚೊಕ್ಕ ಭಕ್ತಿಯಿಂದ**
**ಗುರು ಸೇವೆಯಗೆಯ್ದು ಚಕ್ಕನೇ ಸರಿಹೋಯ್ತು**
**ವಿಶ್ವದಾಭಿರಾಮ ಕೇಳು ವೇಮ.**

**ಶಾಂತಮನಸ್ಸಿನವ ಶೀತದಂಶವಿಹನ**
**ಪರಿಯಂತಿರುವವನು ಪರಮಗುರು**
**ಅಂಥವನು ಮುಕ್ತಿಯ ಅತಿ ಬೇಗ ಹೊಂದುವ**
**ವಿಶ್ವದಾಭಿರಾಮ ವೇಮ ಕೇಳು.**

**ರೂಢಿಯಿಂದ ಭಕ್ತಿ ರೂಪಿಸಿ ಹೇಳುವ**
**ಅವನೇ ಪರಮ ಗುರುವು ವಸುಧೆಯಲ್ಲಿ**
**ಬೇಡಿ ಪರವ ಕಂಡವ ವೇದಾಂತವೇದ್ಯನು**
**ವಿಶ್ವದಾಭಿರಾಮ ವೇಮ ಕೇಳು.**

**ಜೊಳ್ಳು ಮಾತುನಾಡಿ ಜಗದಿ ತಿರುಗುವಂತಹ**
**ಕಳ್ಳ ಗುರು ಕಟ್ಟುವ ಕರ್ಮಗಳನು**
**ಹಲ್ಲೊಳು ಹುಳು ಸೇರಿ, ನೋವುಂಟು ಮಾಡದೆ?**
**ವಿಶ್ವದಾಭಿರಾಮ ಕೇಳು ವೇಮ.**

ವೇಮನ ಯೋಗಿಯು ಇಂತು ಗುರುವಿನ ಲಕ್ಷಣಗಳನ್ನು ಹೇಳಿದರೆ ಸರ್ವಜ್ಞಕವಿಯು ಹೇಳಿರುವುದು ತುಂಬಾ ಮಾರ್ಮಿಕವೂ ಪರಿಣಾಮಕಾರಿಯೂ ಆಗಿವೆ. ಗುರುವಿನ ಅಗತ್ಯವೂ ಬೇಕೆಂದಿರುವನು.

**ಗುರುವಿನ ವಿಸ್ತರದ ಪರಿಯ ನಾನೇನೆಂಬೆ**
**ಮೆರೆವ ಬ್ರಹ್ಮಾಂಡದೊಳ ಹೊರಗನವ ಬೆಳಗಿ**
**ಪರಿಪೂರ್ಣನಿಪ್ಪ ಸರ್ವಜ್ಞ.**

**ಜ್ಯೋತಿಯಿಂದಲಿ ನೇತ್ರ–ರಾತ್ರಿಯೊಳು ಕಾಂಬಂತೆ**
**ಸೂತ್ರದಿಂ ಧಾತನರಿವಂತೆ ಶಿವನ ಗುರು**
**ನಾಥನಿಂದರಿಗು ಸರ್ವಜ್ಞ.**

**ಊರಿಂಗೆ ದಾರಿಯನು ಆರು ತೋರಿದಡೇನು**
**ಸಾರಾಯನ ನಿಜವ ತೋರುವ ಗುರುವು ತಾ**
**ನಾರಾದಡೇನು ಸರ್ವಜ್ಞ.**

**ಪರ ತತ್ತ್ವ ತನ್ನೊಳಗೆ ಎರವಿಲ್ಲದಿರುತಿರ್ಪುದು**
**ಪರದೇಶಿಯಂತೆ ಇರುತಿಪ್ಪ–ಯೋಗಿಯನು**
**ಪರಮ ಗುರುವೆಂದ ಸರ್ವಜ್ಞ.**

**ಹರನಿಷ್ಠಗಲ್ಲದಲೆ ಹರಿದು ಹೋಗದು ಪಾಪ**
**ಹರನಿಷ್ಠೆಯುಳ್ಳ ಗುರುವರನು ಒರ್ವನೆ**
**ನರ ದೈವವೆಂಬ ಸರ್ವಜ್ಞ.**

**ಪರಮನಾ ರೂಪದಲಿ ನೆರವೀಯಲರಿಯದೆ**
**ನರನಾಗಿ ಬಂದು ವರವೀವ ಗುರುವಿಂಗೆ**
**ಸರಿಯಾರ ಕಾಣೆ ಸರ್ವಜ್ಞ.**

**ಸುರತರುವು ಮರನಲ್ಲ ಸುರಭಿವೊಂದಾವಲ್ಲ**
**ಪರುಷ ಪಾಷಾಣದೊಳಗಲ್ಲ ಗುರುರಾಯ**
**ನರರೊಳಗಲ್ಲ ಸರ್ವಜ್ಞ.**

**ಎತ್ತಾಗಿ ತೊತ್ತಾಗಿ ಹಿತ್ತಲದ ಗಿಡವಾಗಿ**
**ಮತ್ತೆ ಪಾದದ ಕೆರವಾಗಿ ಗುರುವಿನ**
**ಹತ್ತಿಲಿರು ಎಂದ ಸರ್ವಜ್ಞ.**



**ಗುರುವಚನುಪದೇಶ ಗುರುವಚನ ಪರ ಭಕ್ತಿ**
**ಗುರುವಚನ ಮೋಕ್ಷಪದವದುವೆ ಗುರುವಚನ**
**ಪರಮಾರ್ಥವಯ್ಯ ಸರ್ವಜ್ಞ.**

**ಬಳ್ಳಿಗುರುಡರು ಕೂಡಿ ಹಳ್ಳವನು ಬಿದ್ದಂತೆ**
**ಒಳ್ಳೆಯ ಗುರುವಿನ ಉಪದೇಶವಿಲ್ಲದಿರೆ**
**ಎಲ್ಲಿಯದು ಮುಕ್ತಿ ಸರ್ವಜ್ಞ.**

ಹೀಗೆ ಇವರಿಬ್ಬರೂ ಯೋಗಿಗಳ ಪದ, ವಚನ, ತ್ರಿಪದಿಗಳನ್ನು ಗಮನಿಸಿದರೆ ಗುರುವಿನ ಅಗತ್ಯತೆ ಶಿಷ್ಯನಿಗೆಯಿದೆ. ಹಾಗೆಯೇ ಯೋಗ್ಯ ಗುರುವಿನ ಮಾರ್ಗದರ್ಶನದಿಂದ ಪರಮ ಶಿಷ್ಯನಾದವನು ವಿದ್ಯೆ ಪಡೆಯಬಲ್ಲ, ಮೋಕ್ಷವನೂ ಹೊಂದಬಲ್ಲನೆಂಬುವುದಕ್ಕೆ ಪದ–ಪದ್ಯಗಳು ನಿದರ್ಶನವಾಗಿವೆ. ಗುರು ತೋರಿದ ಮಾರ್ಗದಲ್ಲಿ ನಡೆಯುವುದೇ ಶಿಷ್ಯನ ಆದ್ಯ ಕರ್ತವ್ಯವಾಗಿದೆಯೆಂದೂ ಹೇಳಬಹುದು.

ಸಮಾಜ ಜೀವಿಯಾದ ಮಾನವ ಸಮಾಜದಲ್ಲಿ ಹೇಗೆ ವರ್ತಿಸಬೇಕು. ಮತ್ತು ಹೇಗೆ ಮಾತನಾಡಬೇಕು ಎಂಬುದರ ಕುರಿತು ವೇಮನ ಯೋಗಿ ಮತ್ತು ಸರ್ವಜ್ಞನು ಹೇಳಿದ ಕೆಲವು ವಚನ, ಇಲ್ಲವೆ ಪದಗಳನ್ನು ಹೀಗೆ ಹೇಳಲಾಗಿದೆ. ವೇಮನ ಹೇಳುವುದೇನೆಂದರೆ ಮಾತು ಮನಸ್ಸಿನ ಅಭಿವ್ಯಕ್ತಿ; ಮಾತು ಸಂಸ್ಕೃತಿಯ ಸೂಚಕ, ಮಾತು ಮಧುರವಾಗಿರಬೇಕು ಮತ್ತೊಬ್ಬರಿಗೆ ನೋವನ್ನುಂಟು ಮಾಡದಂತಿರಬೇಕು, ಒಳ್ಳೆಯವರ ನುಡಿ ಬಂಗಾರ ಮೊಳಗಿದಂತೆ. ಆದರೆ ಅಲ್ಪರ ಮಾತು ಕಂಚು ಮೊಳಗಿದಂತೆ ಎಂದಿದ್ದಾರೆ ಅನುಭಾವಿಗಳು.

**ಭಾಷೆಯಾಡದಿರಲು ದೇಶ ಮೆಚ್ಚದಯ್ಯ**
**ಭಾಷೆಯಾಡುವಾಗ ಬೇಕು ಹೊಣೆಯು**
**ಭಾಷೆ ಹಿರಿಮೆಯರಿತು ಈಶನರಿಯಬೇಕು**
**ವಿಶ್ವದಾಭಿರಾಮ ವೇಮ ಕೇಳು.**

**ಮಾತು ಮುನ್ನ ಅರಿತು, ಮತ್ತೋರ್ವರ ನುಡಿಗೆ**
**ಮನವರಿಯದೆ ಒಳಗೊಳಗೆ ತಳಮಳವೇಕೆ?**
**ವಿಶ್ವದಾಭಿರಾಮ ಕೇಳು ವೇಮ.**

**ತನ್ನ ಒಳಿತು ಕೋರಿ, ಧರ್ಮ ಕರ್ಮ ತಿಳಿಸೆ**
**ಮುನ್ನ ಜರಿದು ನುಡಿವ, ದುರಿತ ಖಳನು**
**ತಿನ್ನಲಿಡಲು ಗೂಳಿ ಕೊಂಬು ತಿವಿವ ಪರಿಯು**
**ವಿಶ್ವದಾಭಿರಾಮ ಕೇಳು ವೇಮ**

**ಢೋಂಗಿ ಮಾಡನಾಡೆ ದೊರಕಬಹುದೆ ಮೋಕ್ಷ?**
**ಆಗು ಹೋಗದಂಥ ಕೂಗು ಹೊಲ್ಲ**
**ಸದ್ಗುರುವಿನ ಚಿನ್ಹೆಯಲ್ಲ, ದುರ್ಗುಣಿಯರು**
**ವಿಶ್ವದಾಭಿರಾಮ ಕೇಳು ವೇಮ.**

**ಅಲ್ಲನಾಡುತಿಪ್ಪ ಆಡಂಬರದ ನುಡಿಯು**
**ಒಳ್ಳೆಯವನಾಡುವ ಮಧುರ ನುಡಿಯ**
**ಮೊಳಗುವುದೇ ಹೊನ್ನ, ಕಂಚು ಧ್ವನಿಸುವಂತೆ**
**ವಿಶ್ವದಾಭಿರಾಮ ವೇಮ ಕೇಳು**

**ಮಾತು ಕೇಳಿ ಒಬ್ಬ ಹೌದು ಅಹುದು ಎನಲು**
**ಕೆಲವರು ಸಿದ್ಧ ಅಲ್ಲವೆನಲು ಕ್ಷಣದಿ**
**ದಾನಿ ನೀಡಬಹುದು ದಾತನೆನಿಸುವಂತೆ**
**ವಿಶ್ವದಾಭಿರಾಮ ಕೇಳು ವೇಮ.**

**ಮಾತು ಎಲ್ಲ ಸುಳ್ಳು ಮನಸು ಮತ್ತೆ ಡೊಂಕು**
**ಇಂತಿಪ್ಪ ಪ್ರಾಣಿಗೇಕೆ ಬದುಕು?**
**ಮಾತು ಸತ್ಯವಿರಲು ಮತ್ತೆ ಶತಾಯುಷಿಯು**
**ವಿಶ್ವದಾಭಿರಾಮ ಕೇಳು ವೇಮ.**

**ಹಿರಿಯರ ನುಡಿಗಳನು ಹದುಳವಿಂದಾಲಿಸಿ**
**ಅಂತೆ ನಡೆಯದಿರಲು ಅಲ್ಲ ಫಲವು**
**ಹತಿಯ ಕಂಡು ನರಿಯು ಗಂಧ ಬಳಿದ ರೀತಿ**
**ವಿಶ್ವದಾಭಿರಾಮ ಕೇಳು ವೇಮ.**

**ನಿಜವ ಮಾಡನಾಡುವವನು ನಿರ್ಮಲನಾಗಿಹನು**
**ನಿಜವನಾಡುವವನು ನೀತಿ ಪರನು**
**ನಿಜವನಾಡುವವನು ನೀಚ ಚಂಡಾಲನು**
**ವಿಶ್ವದಾಭಿರಾಮ ಕೇಳು ವೇಮ.**



**ನೀರ ಮೇಲಣ ಬರೆಹ ನಿಲ್ಲದಿರುವ ಹಾಗೆ**
**ಸಮವು ಜಗದೊಳಿಲ್ಲ ಪರದಿ ಇಲ್ಲ**
**ಮಾತು ಮಾತಿಗೆಲ್ಲ ಮನಸು ಕೋರುತಿಹುದು**
**ವಿಶ್ವದಾಭಿರಾಮ ಕೇಳು ವೇಮ.**

"ಮಾತು ಆಡಿದರೆ ಹೋಯ್ತು ಮುತ್ತು ಒಡೆದರೆ ಹೊಯ್ತು" ಎಂಬ ಗಾದೆಯಂತೆ ಸರ್ವಜ್ಞನು ಮಾತೇ ಜ್ಯೋತಿರ್ಲಿಂಗವೆಂದಿದ್ದಾನೆ. ನುಡಿದರೆ ಮುತ್ತಿನ ಹಾರದಂತಿರಬೇಕು ಎಂದಿದ್ದಾರೆ ಬಸವಣ್ಣ. ವಾತಿನಂತೆ ನಡೆಯೂ ಮುಖ್ಯವಾಗುತ್ತದೆ. ಆಡುವುದೊಂದು ಮಾಡುವುದೊಂದಾಗಬಾರದು ಎಂದು ಶರಣರು ಹೇಳಿದುದರ ನೆನಪು ಈತನ ತ್ರಿಪದಿಗಳಲ್ಲಿವೆ.

ಮಾತು ಬಲ್ಲಾತಂಗೆ ಯೇತವದು ಸುರಿದಂತೆ
ಮಾತಾಡಲರಿಯದಾತಂಗೆ ಬರಿ ಯೇತ
ನೇತಾಡಿದಂತೆ ಸರ್ವಜ್ಞ.

ಮಾತಿಂಗೆ ಮಾತುಗಳು–ಓತು ಸಾಸಿರವುಂಟು
ಮಾತಾಡಿದಂತೆ ನಡೆದಾತ ಜಗವನ್ನು
ಕೂತಲ್ಲಿಯೇ ಆಳ್ವ ಸರ್ವಜ್ಞ.

ಮಾತು ಬಲ್ಲಾತಂಗೆ ಮಾತೊಂದು ಮಾಣಿಕವು
ಮಾತಾಡಲರಿಯದವಂಗೆ ಮಾಣೀಕವು
ತೂತು ಬಿದ್ದಂತೆ ಸರ್ವಜ್ಞ.

ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ
ಹಿಡಿದಿರ್ದ ಅಂಗ ಹೊಡಮರಳಿ ಕಚ್ಚುವ
ಹೆಡೆನಾಗ ನೋಡಾ ಸರ್ವಜ್ಞ.

ಮಾತು ಮಾತಿಗೆ ಆತು–ಮಾತು ಕೋಟಿಗಳುಂಟು
ಮಾತಾಡಿ ಮನಕೆ ಮುನಿಸಕ್ಕು ಮಾತಿನಲಿ
ಸೋತವನೆ ಜಾಣ ಸರ್ವಜ್ಞ.

ಮಾತಿನಿಂನಗೆ ನುಡಿಯು ಮಾತಿನಿಂ ಹಗೆ ಕೊಲೆಯು
ಮಾತಿನಿಂ ಸರ್ವ ಸಂಪದವು ಲೋಕಕ್ಕೆ
ಮಾತೇ ಮಾಣಿಕವು ಸರ್ವಜ್ಞ

ಮಾತು ಬಲ್ಲಹ ತಾನು ಸೋತು ಹೋಹುದು ಲೇಸು
ಮಾತಿಂಗೆ ಮಾತು ಮಥಿಸಲ್ಕೆ-ವಿಧಿ ಬಂದು
ಆತುಕೊಂಡಿಹುದು ಸರ್ವಜ್ಞ

ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ
ರಸಿಕನಲ್ಲದವನ ಬರಿ ಮಾತು ಕಿವಿಗೆ
ಕೊರದಶಿಯು ಬಡಿದಂತೆ ಸರ್ವಜ್ಞ

ಚಾಳಕನ ನಗೆ ನುಡಿಯು ಮಾಳಿಗೆಯು ಮುರಿದಂತೆ
ಬಾಳು ಉಳ್ಳವರ ಬಿರುನುಡಿಯು ಬೀಳ್ವನೆಯು
ಏಳಿಗಾದಯಿತೆ ಸರ್ವಜ್ಞ

ಹೊತ್ತಿಗೊದಗದ ಮಾತು ಸತ್ತವನು ಎದ್ದಂತೆ
ಹೊತ್ತಾಗಿ ನುಡಿದ ಮಾತು ಕೈ ಜಾರಿದ
ಮುತ್ತಿನಂತಿಹುದು ಸರ್ವಜ್ಞ

ಹೀಗೆ ಇವರಿಬ್ಬರ ವಚನ, ಪದಗಳನ್ನು ಗಮನಿಸಿದರೆ ಒಂದೇ ತೆರನಾದ ಹೇಳಿಕೆಗಳಿವೆಯೆನ್ನುವಂತಿವೆ. ಸಮಾಜದಲ್ಲಿ ಬೆರೆತುಕೊಂಡು ಸಮಯೋಚಿತವಾಗಿ ಮಾತನಾಡುವುದನ್ನು ಕಲಿಯಬೇಕು ಮತ್ತು ರೂಢಿಸಿಕೊಳ್ಳಬೇಕೆಂಬುದನ್ನು ಸಾದರಪಡಿಸುತ್ತವೆ. ಇಬ್ಬರ ಹೇಳಿಕೆಗಳಲ್ಲೂ ಸಾಮ್ಯತೆಗಳೇ ಎದ್ದು ಕಾಣುತ್ತವೆ.

ತಾನು ತನ್ನಂತೆ ತಿಳಿದು, ಪರರಿಗೆ ದ್ರೋಹವೆಸಗದೇ ಎಲ್ಲರೊಳು ಒಂದಾಗಿ ಬಾಳುವುದು ಸತ್ಸಂಗದ ಸಹವಾಸದಲ್ಲಿರುವುದು, ಸಜ್ಜನರ ಸಂಗದೊಂದಿಗಿದ್ದು ಪರರಿಗುಪಕಾರವನ್ನು ಮಾಡುತ್ತ ಸಮಾಜದ ಒಳಿತಿಗಾಗಿ ಚಿಂತನಶೀಲನಾಗಿರಬೇಕು. ಹೀಗೆ ಬಾಳಿದರೆ ಮಾತ್ರ ತನ್ನೊಂದಿಗೆ ದೇಶ, ವಿಶ್ವ ಸುಧಾರಣೆಯಾಗುತ್ತದೆಯೆಂದು ಈ ನುಡಿ ಚಿತ್ರಗಳ ಮೂಲಕ ಇಬ್ಬರೂ ಹೇಳಿರುವದನ್ನು ತೌಲನಿಕವಾಗಿ ಈ ಅಧ್ಯಾಯದಲ್ಲಿ ಚರ್ಚಿಸಲು ಪ್ರಯತ್ನ ಮಾಡಲಾಗಿದೆ.



# ಸಹಾಯಕ ಗ್ರಂಥ ಸೂಚಿ


೧. ತಿರುಕ್ಕುರಳ್ – (ಮೂಲ : ತಿರುವಳ್ಳುವರ್) ಅನುವಾದ ನ. ಮುನಿಸ್ವಾಮಿ – ಪ್ರಕಾಶ : ನಲ್ವಾಳ್ವಗಂ ಬೆಂಗಳೂರು, ೧೯೮೫

೨. ವೇಮನ ವಿಶ್ವಗೀತೆ – ಶ್ರೀ ಎಸ್.ಆರ್. ಪಾಟೀಲ–ಪ್ರಕಾಶಕರು : ಮಹಾಯೋಗಿ ವೇಮನ ಪೀಠ, ಕ.ವಿ.ವಿ. ಧಾರವಾಡ, ೧೯೯೮

೩. ಹೇಮರಡ್ಡಿ ಮಲ್ಲಮ್ಮ – ಡಾ. ಶಾಂತಾದೇವಿ ಸಣ್ಣೆಲ್ಲಪ್ಪನವರ – ಪ್ರಕಾಶಕರು: ಉತ್ಸಾಹಿ ಪ್ರಕಾಶನ, ಧಾರವಾಡ–೨೦೦೪

೪. ಸರ್ವಜ್ಞನ ವಚನಗಳು – ಸಂಪಾದಕರು : ಕಮಲದಾನಿ ಗುರುರಾಯರು, ಪ್ರಕಾಶಕ : ಶ್ರೀ ವೈಭವ ಲಕ್ಷ್ಮೀ ಪ್ರಕಾಶನ, ಹುಬ್ಬಳ್ಳಿ, ೨೦೧೦

೫. ಸರ್ವಜ್ಞನ ವಚನಗಳು – ಸಂಪಾದಕರು ರೆ॥ ಉತ್ತಂಗಿ ಚೆನ್ನಪ್ಪ ಪ್ರಕಾಶ ಸಾಹಿತ್ಯ, ಬೆಂಗಳೂರು – ೨೦೧೬